# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ ಭಾನುವಾರ, ಡಿಸೆಂಬರ್ 22, 2024

ಸಂಪುಟ : 51 ಸಂಚಿಕೆ : 219 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com





Narayana Health

ಸೂಪರ್ ಸ್ಪೆಷಾಲಿಟಿ ಸೇವೆಗಳಿಗಾಗಿ ನಿಮ್ಮ ವಿಶ್ವಾಸಾರ್ಹ ಆಸ್ಪತ್ರೆ

ಎಸ್ ಎಸ್ ನಾರಾಯಣ ಹೆಲ್ತ್, ದಾವಣಗೆರೆ

ಹೃದಯ ಆರೈಕೆ | ನರರೋಗ ಆರೈಕೆ | ಕಿಡ್ನಿ ಆರೈಕೆ | ಮೂತ್ರಕೋಶ ಆರೈಕೆ | ಗ್ಯಾಸ್ಟ್ರೋ ಸೈನ್ಸಸ್

ಎನ್ ಎಚ್-4, ಬೈಪಾಸ್ ರಸ್ತೆ, ದಾವಣಗೆರೆ | Take Care 1800 309 0309 www.narayanahealth.org


## ಚುನಾವಣಾ ನಿಯಮಗಳಿಗೆ ಕೇಂದ್ರ ಸರ್ಕಾರ ತಿದ್ದುಪಡಿ

ನವದೆಹಲಿ, ಡಿ. 21- ಕೇಂದ್ರ ಸರ್ಕಾರ ಚುನಾವಣಾ ನಿಯಮಗಳಿಗೆ ತಿದ್ದುಪಡಿ ತಂದಿದ್ದು, ಸಿಸಿಟಿವಿ, ಕ್ಯಾಮರಾ ಹಾಗೂ ವೆಬ್‌ಕಾಸ್ಟಿಂಗ್ ರೀತಿಯ ಹಲವು ಎಲೆಕ್ಟ್ರಾನಿಕ್ ದಾಖಲೆಗಳನ್ನು ಸಾರ್ವಜನಿಕರು ಪಡೆಯುವುದರ ಮೇಲೆ ನಿರ್ಬಂಧ ಹೇರಿದೆ. ಎಲೆಕ್ಟ್ರಾನಿಕ್ ದಾಖಲೆಗಳ ದುರ್ಬಳಕೆ ತಡೆಯಲು ಈ ಕ್ರಮ ತೆಗೆದುಕೊಳ್ಳಲಾಗಿದೆ.

ಚುನಾವಣಾ ಆಯೋಗದ ಶಿಫಾರಸ್ಸಿನ ಮೇರೆಗೆ ಕೇಂದ್ರ ಕಾನೂನು ಸಚಿವಾಲಯವು 1961ರ ಚುನಾವಣಾ ನಿಯಮಗಳಿಗೆ ತಿದ್ದುಪಡಿ ತಂದಿದೆ. ಈ ಹಿಂದೆ ಚುನಾವಣಾ ನಿಯಮ 93ರ ಪ್ರಕಾರ ಚುನಾವಣೆಗಳ ಎಲ್ಲಾ (4ನೇ ಪುಟಕ್ಕೆ)


## ವಿಮಾ ಕಂತುಗಳ ಜಿಎಸ್‌ಟಿ ಇಳಿಕೆ ನಿರ್ಧಾರ ಮುಂದೂಡಿಕೆ

ಜೈಸಲ್ಮಾರ್, ಡಿ. 21- ಆರೋಗ್ಯ ಹಾಗೂ ಜೀವ ವಿಮಾ ಕಂತುಗಳ ತೆರಿಗೆಯನ್ನು ಕಡಿತಗೊಳಿಸುವ ನಿರ್ಧಾರವನ್ನು ಜಿಎಸ್‌ಟಿ ಮಂಡಳಿ ಸಭೆ ಮುಂದೂಡಿದೆ. 148 ವಸ್ತುಗಳ ತೆರಿಗೆ ಪರಿಷ್ಕರಣೆ ಕುರಿತ ವರದಿ ಸಲ್ಲಿಕೆ ವಿಳಂಬವಾದ ಕಾರಣ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ವಿಮಾ ಕಂತುಗಳ ಕಡಿತದ ಕುರಿತ ನಿರ್ಧಾರಗಳನ್ನು ತೆಗೆದುಕೊಳ್ಳಲು ಇನ್ನೂ ಸ್ವಲ್ಪ ಸಮಯ ಬೇಕಿದೆ ಎಂದು ಸಭೆಯಲ್ಲಿ ನಿರ್ಧರಿಸಲಾಗಿದೆ. ಗುಂಪು, ವೈಯಕ್ತಿಕ ಹಾಗೂ ಹಿರಿಯ ನಾಗರಿಕರ ಪಾಲಿಸಿಗಳ ಮೇಲಿನ ತೆರಿಗೆ ಕುರಿತು ನಿರ್ಧಾರ ತೆಗೆದುಕೊಳ್ಳಲು ಇನ್ನೂ ಒಂದು ಸಭೆ ನಡೆಸಬೇಕಿದೆ ಎಂದು ಬಿಹಾರದ ಉಪ (4ನೇ ಪುಟಕ್ಕೆ)


## ಹೃತ್ಪೂರ್ವಕ ಅಭಿನಂದನೆಗಳು





ದಾವಣಗೆರೆ ಶಿವ ಕೋ-ಆಪರೇಟಿವ್ ಬ್ಯಾಂಕಿನ ಆಡಳಿತ ಮಂಡಳಿಗೆ ನನ್ನನ್ನು ಅವಿರೋಧವಾಗಿ ನಿರ್ದೇಶಕ ಸ್ಥಾನಕ್ಕೆ ಪರಿಶಿಷ್ಟ ಪಂಗಡ ವರ್ಗದಿಂದ ಆಯ್ಕೆ ಮಾಡಿದ ಸರ್ವ ಸದಸ್ಯರು, ಈ ಹಿಂದಿನ ಆಡಳಿತ ಮಂಡಳಿಗೂ ಹಾಗೂ ಸಹಕಾರ ಇಲಾಖೆಯ ಚುನಾವಣಾಧಿಕಾರಿಗಳಿಗೂ ಮತ್ತು ಬ್ಯಾಂಕಿನ ನೌಕರರಿಗೂ ಹೃತ್ಪೂರ್ವಕ ಅಭಿನಂದನೆಗಳು.



ಶ್ರೀಮತಿ ಅನಿತಾ ಡಿ.ಎಲ್.

ನಿರ್ದೇಶಕರು, ಶಿವ ಸಹಕಾರಿ ಬ್ಯಾಂಕ್, ದಾವಣಗೆರೆ.



## ಶಿವ ಸಹಕಾರಿ ಬ್ಯಾಂಕ್ ನಿ.,

ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ

ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ – 2024





### ಮಹಿಳಾ ಮೀಸಲು ಮತ ಕ್ಷೇತ್ರ

ಮಾನ್ಯ ಮತರದಾರ ಬಂಧುಗಳೇ,

ದಿನಾಂಕ 22.12.2024ರ ಭಾನುವಾರ 5 ವರ್ಷಗಳ ಅವಧಿಗೆ ನಡೆಯಲಿರುವ ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಇದರ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಗೆ 'ಮಹಿಳಾ ಮೀಸಲು ಮತ ಕ್ಷೇತ್ರ' ದಿಂದ ಕ್ರ.ಸಂ. 1 ಉಮಾ ಡಿ.ಹೆಚ್. ಆದ ನಾನು ಅಭ್ಯರ್ಥಿಯಾಗಿ ಸ್ಪರ್ಧಿಸಿರುತ್ತೇನೆ. ನನ್ನ ಟಾರ್ಚ್/ಬ್ಯಾಟರಿ ಗುರುತಿಗೆ ತಮ್ಮ ಅಮೂಲ್ಯವಾದ ಮತವನ್ನು ನೀಡಿ ನನ್ನನ್ನು ಜಯಶೀಲಳನ್ನಾಗಿ ಮಾಡಿ ತಮ್ಮಗಳ ಸೇವೆ ಮತ್ತು ಬ್ಯಾಂಕ್ ಅಭಿವೃದ್ಧಿ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಸವಿನಯ ಪ್ರಾರ್ಥನೆ.

ಉಮಾ ಡಿ.ಹೆಚ್.

ಕಾಕನೂರು ಗೌಡ್ರ ದುಮ್ಮಿ ಹಾಲಪ್ಪ ಅಂಡ್ ಸನ್ಸ್ ವರ್ತಕರು, ಎ.ಪಿ.ಎಂ.ಸಿ. ಯಾರ್ಡ್ ಡಿ ಬ್ಲಾಕ್, ದಾವಣಗೆರೆ ಇವರ ಪುತ್ರಿ


ಬ್ಯಾಲೆಟ್ ನಮೂನೆ

| ಕ್ರ.ಸಂ. | ಉಮೇದುವಾರರ ಹೆಸರು | ಚಿಹ್ನೆ | ಗುರುತು |
|---|---|---|---|
| 1 | ಉಮಾ ಡಿ.ಹೆಚ್. | | |

ನಾವುಗಳು ಸರ್ವ ಸದಸ್ಯರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ದಿನಾಂಕ : 22.12.2024ರ ಭಾನುವಾರದಂದು ನಡೆಯುವ ಒಂದು ಸ್ಥಾನದ ಅಭ್ಯರ್ಥಿಗೆ ತಮ್ಮ ಅಮೂಲ್ಯ ಮತ ನೀಡುವ ಮೂಲಕ ಇವರನ್ನು ಜಯಶೀಲರನ್ನಾಗಿ ಮಾಡಿ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಲು ಕೋರುತ್ತೇವೆ. ಕಾಲಾವಕಾಶದ ಕೊರತೆಯಿಂದಾಗಿ ತಮ್ಮನ್ನು ಖುದ್ದಾಗಿ ಭೇಟಿ ಮಾಡಲು ಸಾಧ್ಯವಾಗದ ಕಾರಣ ತಾವುಗಳೆಲ್ಲರೂ ಸದರಿ ದಿನದಂದು ಬಿಡುವು ಮಾಡಿಕೊಂಡು ಮತದಾನ ಮಾಡಲು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ.


ಕೆ.ಜಿ.ಡಿ. ಹಾಲಪ್ಪ


ಕೆ.ಜಿ.ಡಿ. ಪ್ರಭು


ಅಜ್ಜಣ್ಣ ಆರ್.ಕೆ.


ಸಿದ್ದೇಶ್ ಬಿ.ಆರ್.


ಮಹೇಂದ್ರ ಎನ್.ಜಿ. (ಬೂದಿಹಾಳ್)

ಮತದಾನ ದಿನಾಂಕ : 22.12.2024ರ ಭಾನುವಾರ
ಸಮಯ : ಬೆಳಿಗ್ಗೆ 9-00 ರಿಂದ ಸಂಜೆ 4-00
ಸ್ಥಳ : ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಹಿರಿಯ ಪ್ರಾಥಮಿಕ ಶಾಲೆ, ತರಳಬಾಳು ಬಡಾವಣೆ, ದಾವಣಗೆರೆ – 577005

ನಿಮ್ಮ ಮತ ಟಾರ್ಚ್ ಗುರುತಿಗೆ

ತಮ್ಮ ಸೇವಾಕಾಂಕ್ಷಿ
ಉಮಾ ಡಿ.ಹೆಚ್.
ಕೋಂ ಮಹೇಂದ್ರ ಎನ್.ಜಿ.
ಮೊ. : 94493 74474
80738 35813

ಸೂಚನೆ : ಬ್ಯಾಂಕಿನ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ...



## ಸಾರ್ವಜನಿಕರ ತಿಳುವಳಿಕೆಗೆ

ನನ್ನ ಕಕ್ಷಿಗಾರರಾದ ಶ್ರೀಮತಿ ಯಶೋಧ ಕೋಂ ನಾಗರಾಜಪ್ಪ ಬಿನ್ ಭೀಮಪ್ಪ ಇವರು ದಾವಣಗೆರೆಯ 2ನೇ ಹೆಚ್ಚುವರಿ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ತನ್ನ ತಂದೆ ಭೀಮಪ್ಪ ಮತ್ತು ಇತರರ ವಿರುದ್ಧ ತನ್ನ ಒಟ್ಟು ಕುಟುಂಬದ ಆಸ್ತಿಯಲ್ಲಿ ತನ್ನ ಹಿಸ್ಸೆಯನ್ನು ಬೇಡಿ, O.S. 390/2024 ಎಂಬ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆಯಲ್ಲಿ ಈ ಕೆಳಕಂಡ ಷೆಡ್ಯೂಲ್ ಸ್ವತ್ತು ದಾವೆಯ 10ನೇ ಪ್ರತಿವಾದಿ ಶ್ರೀಮತಿ ಗಿರಿಜಮ್ಮ ಕೋಂ. ಮುರಿಗೇಂದ್ರಪ್ಪ ಎನ್ನುವವರ ಹೆಸರಿಗೆ ಖಾತೆ ಇದ್ದು ಸದರಿಯವರು ಯಾರಿಗೂ ಪರಭಾರೆ ಮಾಡಬಾರದೆಂದು ಆದೇಶವಾಗಿರುತ್ತದೆ. ಮತ್ತು ಸದರಿ ಷೆಡ್ಯೂಲ್ ಸ್ವತ್ತಿನ ಸ್ವರೂಪವನ್ನು ಯಾವುದೇ ರೀತಿಯಾಗಿ ಬದಲಾವಣೆ ಮಾಡ ಬಾರದೆಂದು ಆದೇಶವಾಗಿರುತ್ತದೆ. ಆದ್ದರಿಂದ ಸಾರ್ವಜನಿಕರು ಈ ಕೆಳಕಾಣಿಸಿದ ಷೆಡ್ಯೂಲ್ ಸ್ವತ್ತಿನ ಕುರಿತು ಯಾವುದೇ ರೀತಿಯ ವ್ಯವಹಾರಗಳನ್ನು ಮಾಡಬಾರದೆಂದು, ಒಂದು ವೇಳೆ ಮಾಡಿದ್ದಲ್ಲಿ ಅದಕ್ಕೆ ಅವರೇ ಜವಾಬ್ದಾರರಾಗಿರುತ್ತಾರೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸಲು ಇಚ್ಛಿಸುತ್ತಿದ್ದೇನೆ.

**ಷೆಡ್ಯೂಲ್ :**

ದಾವಣಗೆರೆ ತಾಲ್ಲೂಕಿನ ಶಿರಮಗೊಂಡನಹಳ್ಳಿಯ ರಿ. ಸರ್ವೆ ನಂ. 54/6ರ 2 ಎಕರೆ ಜಮೀನು, ಇದಕ್ಕೆ ಚೆಕ್ಕುಬಂದಿ:

ಪೂರ್ವ : ಚಾನಲ್, ಪಶ್ಚಿಮ : ಕಮಲಮ್ಮನವರ ಜಮೀನು

ಉತ್ತರ : ರಾಘವೇಂದ್ರ ಪ್ರಸಾದರವರ ಜಮೀನು

ದಕ್ಷಿಣ : ಕೆ. ಶಿವಲಿಂಗಪ್ಪನವರ ಜಮೀನು.

ಸಹಿ/- ಎನ್. ರಾಮದಾಸ್, ವಕೀಲರು
ಶ್ರೀ ಶ್ರೀನಿವಾಸ ಫಾರ್ಮಸಿ ಬಿಲ್ಡಿಂಗ್,
ಚಾಮರಾಜಪೇಟೆ, ದಾವಣಗೆರೆ.
ಮೊ. : 98441 42797

ಸ್ಥಳ : ದಾವಣಗೆರೆ.
ದಿನಾಂಕ : 21.12.2024



## ಶಿವ ಸಹಕಾರಿ ಬ್ಯಾಂಕ್ ನಿಯಮಿತ

ಹಳೇ ಆಸ್ಪತ್ರೆ, ರಸ್ತೆ, ದಾವಣಗೆರೆ.

### ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ-2024

#### ಹಿಂದುಳಿದ ವರ್ಗ 'ಬಿ' ಮೀಸಲು ಮತ ಕ್ಷೇತ್ರ

ಮಾನ್ಯ ಮತದಾರ ಬಂಧುಗಳೇ, ದಿನಾಂಕ : 22.12.2024ನೇ ಭಾನುವಾರ 5 ವರ್ಷಗಳ ಅವಧಿಗೆ ನಡೆಯಲಿರುವ ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಇದರ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಗೆ "ಹಿಂದುಳಿದ ವರ್ಗ "ಬಿ" ಮೀಸಲು ಮತ ಕ್ಷೇತ್ರ"ದಿಂದ ಕ್ರ.ಸಂ. 2 ಜೆ.ಎಸ್. ಸಿದ್ದಪ್ಪ ಆನೆಕೊಂಡ ಆದ ನಾನು ಅಭ್ಯರ್ಥಿಯಾಗಿ ಸ್ಪರ್ಧಿಸಿರುತ್ತೇನೆ. ನನ್ನ ಈ ಕೆಳಕಂಡ ಗುರುತಿಗೆ ತಮ್ಮ ಅತ್ಯಮೂಲ್ಯವಾದ ಮತವನ್ನು ನೀಡಿ ನನ್ನನ್ನು ಜಯಶೀಲರನ್ನಾಗಿ ಮಾಡಿ ತಮ್ಮಗಳ ಸೇವೆ ಮತ್ತು ಬ್ಯಾಂಕ್ ಅಭಿವೃದ್ಧಿ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಸವಿನಯ ಪ್ರಾರ್ಥನೆ.

ಬ್ಯಾಲೆಟ್ ನಮೂನೆ

| ಕ್ರ.ಸಂ. | | ಉಮೇದುವಾರರ ಹೆಸರು | ಚಿಹ್ನೆ | ಗುರುತು |
|---|---|---|---|---|
| 1 | | | | |
| 2 |  | ಜೆ.ಎಸ್. ಸಿದ್ದಪ್ಪ | | |

#### ಮಹಿಳಾ ಮೀಸಲು ಮತ ಕ್ಷೇತ್ರ

ಮಾನ್ಯ ಮತದಾರ ಬಂಧುಗಳೇ, ದಿನಾಂಕ : 22.12.2024ನೇ ಭಾನುವಾರ 5 ವರ್ಷಗಳ ಅವಧಿಗೆ ನಡೆಯಲಿರುವ ಶಿವ ಸಹಕಾರಿ ಬ್ಯಾಂಕ್ ನಿಯಮಿತ, ದಾವಣಗೆರೆ ಇದರ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಗೆ "ಮಹಿಳಾ ಮೀಸಲು ಮತ ಕ್ಷೇತ್ರ"ದಿಂದ ಕ್ರ.ಸಂ. 2 ಡಾ|| ಲೀಲಾ ದಯಾನಂದ್ ಮತ್ತು ಕ್ರ.ಸಂ. 3 ಕೆ.ಜಿ. ಶಂಕ್ರಮ್ಮ ಆದ ನಾವು ಅಭ್ಯರ್ಥಿಗಳಾಗಿ ಸ್ಪರ್ಧಿಸಿರುತ್ತೇವೆ. ನಮ್ಮ ಈ ಕೆಳಕಂಡ ಗುರುತಿಗೆ ತಮ್ಮ ಅತ್ಯಮೂಲ್ಯವಾದ ಮತವನ್ನು ನೀಡಿ ನಮ್ಮನ್ನು ಜಯಶೀಲರನ್ನಾಗಿ ಮಾಡಿ ತಮ್ಮಗಳ ಸೇವೆ ಮತ್ತು ಬ್ಯಾಂಕ್ ಅಭಿವೃದ್ಧಿ ಮಾಡಲು ಅವಕಾಶ ಮಾಡಿಕೊಡಬೇಕಾಗಿ ಸವಿನಯ ಪ್ರಾರ್ಥನೆ.

| ಕ್ರ.ಸಂ. | | ಉಮೇದುವಾರರ ಹೆಸರು | ಚಿಹ್ನೆ | ಗುರುತು |
|---|---|---|---|---|
| 1 | | | | |
| 2 |  | ಡಾ|| ಲೀಲಾ ದಯಾನಂದ್ | | |
| 3 |  | ಕೆ.ಜಿ. ಶಂಕ್ರಮ್ಮ | | |

ನಾವುಗಳು ಸರ್ವ ಸದಸ್ಯರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ದಿನಾಂಕ : 22.12.2024ರ ಭಾನುವಾರದಂದು ನಡೆಯುವ ಮೂರು ಸ್ಥಾನಗಳ ಮೇಲ್ಕಂಡ ಅಭ್ಯರ್ಥಿಗಳಿಗೆ ತಮ್ಮ ಅಮೂಲ್ಯ ಮತ ನೀಡುವ ಮೂಲಕ ಇವರುಗಳನ್ನು ಜಯಶೀಲರನ್ನಾಗಿ ಮಾಡಿ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಲು ಕೋರುತ್ತೇವೆ. ಕಾಲಾವಕಾಶದ ಕೊರತೆಯಿಂದಾಗಿ ತಮ್ಮನ್ನು ಖುದ್ದಾಗಿ ಭೇಟಿ ಮಾಡಲು ಸಾಧ್ಯವಾಗದ ಕಾರಣ ತಾವುಗಳೆಲ್ಲರೂ ಸದರಿ ದಿನದಂದು ಬಿಡುವು ಮಾಡಿಕೊಂಡು ಮತದಾನ ಮಾಡಲು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇವೆ.

* ಎಂ.ಬಿ. ಸಂಗಮೇಶ್ವರ ಗೌಡ * ಸಿ. ಚಂದ್ರಶೇಖರ್ * ಶಿವಕುಮಾರ್ ಡಿ.ಎಂ. * ಸಿ. ದೊಡ್ಡಬಸಪ್ಪ * ಜಯಪ್ಪ ಹೆಚ್. * ದೊಗ್ಗಳ್ಳಿ ಬಸವರಾಜ್ * ಡಾ|| ಹೆಚ್.ಎಸ್. ಮಂಜುನಾಥ್ * ವಾಗೀಶ್ ಬಾಬು ಜಿ.ಪಿ. * ಅನಿತ ಡಿ.ಎಲ್.

ಮತದಾನ ದಿನಾಂಕ : 22.12.2024ರ ಭಾನುವಾರ ಸಮಯ : ಬೆಳಗ್ಗೆ 9.00 ರಿಂದ ಸಂಜೆ 4.00
ಸ್ಥಳ : ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಹಿರಿಯ ಪ್ರಾಥಮಿಕ ಶಾಲೆ,
ತರಳಬಾಳು ಬಡಾವಣೆ, ದಾವಣಗೆರೆ.

ತಮ್ಮ ಸೇವಾಕಾಂಕ್ಷಿ : ಜೆ.ಎಸ್. ಸಿದ್ದಪ್ಪ ಆನೆಕೊಂಡ ಮೊ. : 81236 79157
ಡಾ || ಲೀಲಾ ದಯಾನಂದ್ ಕೋಂ. ದಯಾನಂದ್ ಸರಸ್ವತಿ ಎಂ.ಸಿ. ಮೊ. : 81059 57440
ಕೆ.ಜಿ. ಶಂಕ್ರಮ್ಮ ಕೋಂ. ಜಿ. ಶಂಕರ್ (ಸೋಮನಾಥ್ ರೈಸ್ ಮಿಲ್) ಮೊ. : 96200 00631

ಸೂಚನೆ : ಬ್ಯಾಂಕಿನ ಗುರುತಿನ ಚೀಟಿ ಕಡ್ಡಾಯವಾಗಿರುತ್ತದೆ...

# ಹರಪನಹಳ್ಳಿ ತಾ. ವಕೀಲರ ಸಂಘವನ್ನು ಮಾದರಿ ಸಂಘವನ್ನಾಗಿಸೋಣ



**ಹಿರಿಯ ಸಿವಿಲ್ ನ್ಯಾಯಾಧೀಶರಾದ ಉಷಾರಾಣಿ ಆರ್. ಆಶಯ**

ಹರಪನಹಳ್ಳಿ, ಡಿ.21- ತಾಲ್ಲೂಕಿನ ವಕೀಲರ ಸಂಘವನ್ನು ಅಭಿವೃದ್ಧಿ ಪಡಿಸಲು ಎಲ್ಲರೂ ಸೇರಿ ಕೈಜೋಡಿಸಿದರೆ ವಕೀಲರ ಸಂಘವನ್ನು ಮಾದರಿ ಸಂಘವನ್ನಾಗಿ ಮಾಡಲು ಸಾಧ್ಯ. ವಕೀಲರ ಸಂಘದ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಳ್ಳಿ ಎಂದು ನೂತನ ಪದಾಧಿಕಾರಿಗಳಿಗೆ ಮತ್ತು ಹಿರಿಯ ಮತ್ತು ಕಿರಿಯ ವಕೀಲರಿಗೆ ಹಿರಿಯ ಸಿವಿಲ್ ನ್ಯಾಯಾಧೀಶರಾದ ಆರ್. ಉಷಾರಾಣಿ ಕಿವಿಮಾತು ಹೇಳಿದರು.

ಪಟ್ಟಣದ ತಾಲ್ಲೂಕು ವಕೀಲರ ಸಂಘದ ಕಚೇರಿಯಲ್ಲಿ ಇಂದು ಆಯೋಜಿಸಲಾಗಿದ್ದ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.


ಸಂಘದ ಕಾರ್ಯಕ್ರಮಗಳಿಗೆ ಉಭಯ ನ್ಯಾಯಾಲಯದ ಸಲಹೆ, ಸಹಕಾರ ನಿರಂತರ ಇರುತ್ತದೆ ವಕೀಲರ ಸಂಘಕ್ಕೆ ಬೇಕಾಗುವ ಸೌಲಭ್ಯಗಳನ್ನು ನಾನು ಜಿಲ್ಲಾ ನ್ಯಾಯಾಧೀಶರುಗಳ ಜೊತೆ ಚರ್ಚಿಸಿ, ಸಂಘದ ಕೆಲಸ ಕಾರ್ಯಗಳಿಗೆ ಸದಾ ಸಂಘದ ಜೊತೆಗೆ ಕೈ ಜೋಡಿಸುತ್ತೇವೆಂದು ವಕೀಲರಿಗೆ ಸಲಹೆ ನೀಡಿದರು.

ನೂತನವಾಗಿ ಆಯ್ಕೆಯಾದ ವಕೀಲರ ಸಂಘದ ಅಧ್ಯಕ್ಷ ಟಿ.ವೆಂಕಟೇಶ್ ಮಾತನಾಡಿ, ವಕೀಲರ ಸಂಘ ಒಂದು ಕುಟುಂಬ ಇದ್ದಂತೆ. ಈ ಒಂದು ಸಮೂಹದಲ್ಲಿ ಸಂಘದ ಎಲ್ಲಾ ಕೆಲಸ ಕಾರ್ಯಗಳಿಗಾಗಿ ಕೈಜೋಡಿಸಿ, ನಾನು ಪ್ರಾಮಾಣಿ ಕೆಲಸ ಮಾಡುತ್ತೇನೆ. ವಕೀಲರ ಸಂಘದ ಹಿರಿಯ ಮತ್ತು ಕಿರಿಯ ವಕೀಲರ ಸಂಘದ ಸರ್ವ ಸದಸ್ಯರ ಸನ್ಮಾರ್ಗದಲ್ಲಿ ಕಾರ್ಯ ನಿರ್ವಹಿಸುತ್ತೇವೆ ಎಂದರು.

ವಕೀಲರ ಸಂಘ ಒಂದು ಕುಟುಂಬವಿದ್ದಂತೆ ಕುಟುಂಬದಲ್ಲಿ ಸರ್ವ ಸದಸ್ಯರ ಸಹಕಾರ ವಕೀಲರ ಸಂಘಕ್ಕೆ ಬೇಕಾಗಿದೆ. ನಾನು ನಿಮ್ಮ ಸೇವೆ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ವಕೀಲರ ಸಂಘದ ಎಲ್ಲಾ ಹಿರಿಯ ಮತ್ತು ಕಿರಿಯ ವಕೀಲರು ಸಹಕರಿಸಬೇಕೆಂದು ನೂತನ ಅಧ್ಯಕ್ಷರು ಮನವಿ ಮಾಡಿಕೊಂಡರು.

ಈ ಸಂದರ್ಭದಲ್ಲಿ ಸಿವಿಲ್ ನ್ಯಾಯಾಧೀಶರಾದ ಮನುಶರ್ಮ ಎಸ್.ಪಿ. ವಕೀಲರ ಸಂಘದ ನಿಕಟಪೂರ್ವ ಅಧ್ಯಕ್ಷ ರಾಮನಗೌಡ ಪಾಟೀಲ್, ನಿಕಟಪೂರ್ವ ಉಪಾಧ್ಯಕ್ಷ ಸಿ.ಪೀರ್ ಅಹಮ್ಮದ್, ಕಾರ್ಯದರ್ಶಿ, ಕೇಶವಮೂರ್ತಿ, ವಕೀಲರ ಸಂಘದ ನೂತನ ಉಪಾಧ್ಯಕ್ಷ ಬಾಗಳಿ ಮಂಜುನಾಥ್, ಕಾರ್ಯದರ್ಶಿ ನಂದಿಬೇವೂರು ಮಲ್ಲಪ್ಪ, ಜಂಟಿ ಕಾರ್ಯದರ್ಶಿ ಸಿ.ರಾಜಪ್ಪ, ಖಜಾಂಚಿ ಕೆ.ಸಣ್ಣನಿಂಗೌಡ, ಕಾರ್ಯಕಾರಣಿ ಮಂಡಳಿಯ ಸದಸ್ಯರಾದ ಎಂ.ರೇವಣಸಿದ್ದಪ್ಪ, ಕೊಂಗನಸೂರು ಸಿದ್ದೇಶ್, ನಾಗರಾಜ್ ನಾಯ್ಕ, ಸಿ.ಶ್ರೀನಿವಾಸ್ ಸೇರಿದಂತೆ ಇತರರು ಇದ್ದರು.

# ಭರಮಸಾಗರದಲ್ಲಿ ಫೆ. 4ರಂದು ತರಳಬಾಳು ಹುಣ್ಣಿಮೆ



**9 ದಿನಗಳ ವೈಭವದ ತರಳಬಾಳು ಹುಣ್ಣಿಮೆ ಮಹೋತ್ಸವ ಆಚರಣೆಗೆ ಭಕ್ತರಿಂದ 1.26 ಕೋಟಿ ದೇಣಿಗೆ ವಾಗ್ದಾನ**

ಸಿರಿಗೆರೆ, ಡಿ. 21- ತುಂಗಭದ್ರಾ ನೀರಿನಿಂದ ಹಸಿರಾಗಿರುವ ಭರಮಸಾಗರದಲ್ಲಿ ಬರುವ ಫೆಬ್ರವರಿ 4 ರಿಂದ 9 ದಿನಗಳ ಕಾಲ ಅದ್ದೂರಿ ತರಳಬಾಳು ಹುಣ್ಣಿಮೆ ಮಹೋತ್ಸವ ನಡೆಸಲು ಭರದ ಸಿದ್ಧತೆಗಳು ಆರಂಭಗೊಂಡಿದೆ.

ಸಿರಿಗೆರೆಯ ಸದ್ಧರ್ಮ ನ್ಯಾಯಪೀಠದ ಸಭಾಂಗಣದಲ್ಲಿ ಗುರುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಜನಪ್ರತಿನಿಧಿಗಳು ವಿವಿಧ ಸಮುದಾಯಗಳ ಮುಖಂಡರು ಭಾಗಿಯಾಗಿದ್ದರು.

2024ರಲ್ಲಿಯೇ ಭರಮಸಾಗರದಲ್ಲಿ ತರಳಬಾಳು ಹುಣ್ಣಿಮೆ ಮಹೋತ್ಸವ ಆಚರಿಸಲು ತೀರ್ಮಾನಿಸಲಾಗಿತ್ತು. ಆಗ ಬರ ಆವರಿಸಿಕೊಂಡಿದ್ದರಿಂದ ಮುಂದೂಡಲಾಗಿತ್ತು. ಈಗ ಸಡಗರ ಮತ್ತು ಸಂಭ್ರಮದಿಂದ ಆಚರಿಸಲು ಕಾಲ ಒದಗಿ ಬಂದಿದೆ ಎಂದು ಸಾನ್ನಿಧ್ಯ ವಹಿಸಿದ್ದ ತರಳಬಾಳು ಮಠದ ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ತರಳಬಾಳು ಹುಣ್ಣಿಮೆ ಸಂಘರ್ಷಗಳ ಮಹೋತ್ಸವವಲ್ಲ. ಇದು ಸಮನ್ವಯತೆಯ ಸಂದೇಶ ಸಾರುವ ಉತ್ಸವ. ಎಲ್ಲರೂ ಪರಸ್ಪರ ಪ್ರೀತಿ, ವಿಶ್ವಾಸಗಳಿಂದ ಆಚರಿಸಬೇಕು, ಇದು ರಾಷ್ಟ್ರಕವಿ ಕುವೆಂಪು ಅವರ ಸರ್ವ ಜನಾಂಗದ ಶಾಂತಿಯ ತೋಟವಾಗಬೇಕು ಎಂದು ಸಲಹೆ ನೀಡಿದರು.

ಹುಣ್ಣಿಮೆ ಆಚರಣೆಯಲ್ಲಿ ಎಲ್ಲಾ ಸಮುದಾಯ ಗಳ ಭಕ್ತರು ಸೇರಬೇಕು. ಭರಮಸಾಗರ ವ್ಯಾಪ್ತಿಯ ಎಲ್ಲಾ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ ಎಲ್ಲಾ ಹಳ್ಳಿಗಳಲ್ಲಿ ಸಮಿತಿ ರಚಿಸಿ ಅವರನ್ನು ತೊಡಗಿಸಿಕೊಳ್ಳಬೇಕು ಎಂಬುದು ಅಪೇಕ್ಷೆಯಾಗಿದೆ ಎಂದು ಶ್ರೀಗಳು ಹೇಳಿದರು.

ಹುಣ್ಣಿಮೆ ಮಹೋತ್ಸವದ ವೇದಿಕೆ ಕಾರ್ಯಕ್ರಮಗಳಲ್ಲಿ ಹೊಸತನ ತರುವ ಆಲೋಚನೆ ಇದೆ, ಈ ಬಾರಿ ಒಂದೊಂದು ದಿನ ನಿರ್ದಿಷ್ಟ ವಿಚಾರಗಳ ಮಂಥನ ನಡೆಯುತ್ತದೆ. ಸಂಸ್ಕೃತಿ ಮತ್ತು ಸಮಾಜ ಮಹಿಳೆ, ಧರ್ಮ,ರಾಜಕಾರಣ, ಶರಣ ಸಾಹಿತ್ಯ, ಆರೋಗ್ಯ, ಕೃಷಿ ಮತ್ತು ಜಲ ಸಂರಕ್ಷಣೆ ಸೇರಿದಂತೆ ವಿವಿಧ ವಿಚಾರಗಳ ಚಿಂತನಾ ಸಭೆಗಳು ನಡೆಯಲಿವೆ ಎಂದು ಅವರು ಮಾಹಿತಿ ನೀಡಿದರು.

ವೈಭವದ ತರಳಬಾಳು ಹುಣ್ಣಿಮೆ ಮಹೋತ್ಸವ ಆಚರಣೆಗೆ ನೆರವಾಗಲು ಭಕ್ತರು 1.26 ಕೋಟಿ ದೇಣಿಗೆ ನೀಡುವುದಾಗಿ ವಾಗ್ದಾನ ನೀಡಿದರು. ಮುಸ್ಲಿಮರು ಸೇರಿದಂತೆ ಎಲ್ಲಾ ಸಮುದಾಯಗಳ ಭಕ್ತರು ನೆರವಿಗೆ ಮುಂದಾಗಿದ್ದಾರೆ.

ಕೋಗುಂಡಿ ದ್ಯಾಮಣ್ಣ ಮಂಜುನಾಥ್ ಹಾಗೂ ಚೌಲಿಹಳ್ಳಿ ಶೈಲೇಶ್, ಶಶಿ ಪಾಟೀಲ್ 10 ಲಕ್ಷ ನೀಡುವುದಾಗಿ ತಿಳಿಸಿದರು. ಭರಮಸಾಗರ ವ್ಯಾಪ್ತಿಯ ಹಳ್ಳಿಗಳಿಗೆ ಭೇಟಿ ನೀಡಿ ಭಕ್ತರಿಂದ ಹೆಚ್ಚಿನ ಕಾಣಿಕೆ ಸಂಗ್ರಹಿಸುವ ಉದ್ದೇಶವಿದೆ ಎಂದು ಮುಖಂಡರು ತಿಳಿಸಿದರು.

ಉತ್ಸವದ ಖರ್ಚು ತೆಗೆದು ಉಳಿದ ಹಣವನ್ನು ಈ ಬಾರಿ ಸಮಾಜ ಸೇವೆಗೆ ಬಳಸುವುದಾಗಿ ಶ್ರೀಗಳು ಸಭೆಯಲ್ಲಿ ಪ್ರಸ್ತಾಪಿಸಿದರು. ಅರ್ಧ ಹಣವನ್ನು ಭರಮಸಾಗರ ಕೆರೆ ಯೋಜನೆಯ ತುರ್ತು ಕೆಲಸಗಳಿಗೆ ಮೀಸಲಿಡುವುದು ಉಳಿದ ಅರ್ಧ ಹಣವನ್ನು ಸಿರಿಗೆರೆಯ ಶಾಲಾ-ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳ ಉಚಿತ ಊಟ ಮತ್ತು ವಸತಿಗೆ ಬಳಸಿಕೊಳ್ಳುವುದಾಗಿ ತಿಳಿಸಿದರು. ಇದಕ್ಕೆ ಸ್ವಾಮೀಜಿ ಭಕ್ತರ ಸಮ್ಮತಿ ಪಡೆದರು.

ಕೆಪಿಸಿಸಿ ಉಪಾಧ್ಯಕ್ಷ ಹೆಚ್ ಆಂಜನೇಯ, ಶಾಸಕರಾದ ಎಂ. ಚಂದ್ರಪ್ಪ, ಬಿ. ದೇವೇಂದ್ರಪ್ಪ, ಮುಖಂಡರಾದ ಕೋಗುಂಡಿ ಮಂಜುನಾಥ್, ಜಿ.ಕೆ. ನಟರಾಜ್, ಡಿ.ವಿ.ಎಸ್. ಪ್ರವೀಣ್ ಕುಮಾರ್, ಜೆ.ಬಿ.ತೀರ್ಥಪ್ಪ, ಎಸ್.ಎಂ.ಎಲ್. ತಿಪ್ಪೇಸ್ವಾಮಿ, ಹೆಚ್.ಎಂ. ದ್ಯಾಮಣ್ಣ, ಸಾಮಿಲ್ ಶಿವಣ್ಣ, ಚೌಳಿಹಳ್ಳಿ ಶಶಿ ಪಾಟೀಲ್, ಶೈಲೇಶ್ ಕುಮಾರ್, ಸಿರಿಗೆರೆ ರಾಜು, ಜನತಾವಾಣಿಯ ಭರಮಸಾಗರ ವರದಿಗಾರ ಅನಂತಪದ್ಮನಾಭರಾವ್ ಇದ್ದರು.

ಅಣ್ಣನ ಬಳಗದ ಅಧ್ಯಕ್ಷ ಬಿ.ಎಸ್. ಮರುಳಸಿದ್ದಯ್ಯ ವಂದಿಸಿದರು.

# ಕೊಕ್ಕನೂರಿನಲ್ಲಿ ಕಾರ್ತಿಕ



**ಭಕ್ತರ ಗಮನ ಸೆಳೆದ ಸ್ವರ್ಣಾಲಂಕಾರ**

ಮಲೇಬೆನ್ನೂರು, ಡಿ.21- ಸುಕ್ಷೇತ್ರ ಕೊಕ್ಕನೂರು ಗ್ರಾಮದ ಆರಾಧ್ಯ ದೈವ ಶ್ರೀ ಆಂಜನೇಯ ಸ್ವಾಮಿಯ ಕಡೇ ಕಾರ್ತಿಕೋತ್ಸವ ಮತ್ತು ಅಶ್ವೋತ್ಸವವು ಶನಿವಾರ ಸಂಜೆ ಸಂಭ್ರಮದಿಂದ ಜರುಗಿದವು. ದೇವಸ್ಥಾನದ ಬಳಿ ಆವರಣದಲ್ಲಿ ಸಾವಿರಾರು ಭಕ್ತರು ದೀಪಗಳಿಗೆ ಎಣ್ಣೆ ಬತ್ತಿ ಹಾಕಿ ದೀಪ ಬೆಳಗಿಸಿ ಕಾರ್ತಿಕೋತ್ಸವವನ್ನು ಆಚರಿಸಿದರು. ಸುಮಾರು 50 ಸಾವಿರಕ್ಕೂ ಹೆಚ್ಚು ದೀಪಗಳನ್ನು ಹಚ್ಚಿ ಹನುಮಪ್ಪನಿಗೆ ಭಕ್ತಿ ಸಮರ್ಪಿಸಲಾಯಿತು.

ಕಾರ್ತಿಕೋತ್ಸವದ ಅಂಗವಾಗಿ ಹನುಮಪ್ಪನಿಗೆ ಮಾಡಲಾಗಿದ್ದ ಸ್ವರ್ಣಾಲಂಕಾರ ಭಕ್ತರ ಗಮನ ಸೆಳೆಯಿತು. ಸಂಜೆ ಇಡೀ ಗ್ರಾಮ ಭಕ್ತರಿಂದ ತುಂಬಿ ತುಳುಕುತ್ತಿತ್ತು. ಪವನ ದೇವ ಕಲ್ಯಾಣ ಮಂಟಪದಲ್ಲಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು.

# ಶಿವನಹಳ್ಳಿಯಲ್ಲಿ ಇಂದು ಕೇದಾರ ಜಗದ್ಗುರುಗಳ ಪೂಜೆ



ಹರಿಹರ ಹೊರವಲಯದ ಶಿವನಹಳ್ಳಿ ಗ್ರಾಮದಲ್ಲಿ ದಾಸೋಹ ಭವನ, ಭಕ್ತಿ ಭವನ ಲೋಕಾರ್ಪಣೆ ನಿಮಿತ್ತವಾಗಿ ಶ್ರೀ ಹಿಮವತ್ ಕೇದಾರ ಭೀಮಾಶಂಕರಲಿಂಗ ಜಗದ್ಗುರುಗಳ ಇಷ್ಟಲಿಂಗ ಮಹಾಪೂಜೆ ಹಾಗೂ ಪರಂಪರೆ ರಕ್ಷಣಾ ಧರ್ಮ ಸಮಾರಂಭವು ತಪೋಕ್ಷೇತ್ರ ಕಣ್ವಕುಪ್ಪೆ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮಿಗಳ ನೇತೃತ್ವದಲ್ಲಿ ಇಂದು ನಡೆಯಲಿದೆ. ಬೆಳಗ್ಗೆ 7-30 ರಿಂದ ಮಹಾಸಂಕಲ್ಪ, 8 ಗಂಟೆಗೆ ರುದ್ರಾಭಿಷೇಕ, 9 ಗಂಟೆಗೆ ಸಂಗೀತಯುಕ್ತ ಆರಂತಿಗಳ ಪೂಜೆ, ಮಧ್ಯಾಹ್ನ 12-30 ಕ್ಕೆ ಧರ್ಮ ಸಮಾರಂಭ, 1-30 ಕ್ಕೆ ಜಗದ್ಗುರುಗಳವರ ದರ್ಶನಾಶೀರ್ವಾದ ನೀಡಲಿದ್ದಾರೆ ಎಂದು ಶಿವಯೋಗಿ ಸ್ವಾಮೀಜಿ ಕಂಬಳಿಮಠ ತಿಳಿಸಿದ್ದಾರೆ.

# ನಗರದಲ್ಲಿ ಇಂದು ಸರ್.ಎಂ.ವಿ ವೈಭವ

ಸರ್.ಎಂ.ವಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಇಂದು ಸಂಜೆ 4ಕ್ಕೆ ಸರ್.ಎಂ.ವಿ ವೈಭವ-2024 ವಾರ್ಷಿಕೋತ್ಸವ ಹಾಗೂ ಅಭಿನಂದನಾ ಕಾರ್ಯ ಕ್ರಮ ನಡೆಯಲಿದೆ. ಅತಿಥಿಗಳಾಗಿ ಡಾ. ಕವಿತಾ ಮಿಶ್ರಾ ಸೇರಿದಂತೆ, ಗಣ್ಯರು ಪಾಲ್ಗೊಳ್ಳಲಿದ್ದಾರೆ.

# ನಗರದಲ್ಲಿ ಮೈಲಾರ ಲಿಂಗೇಶ್ವರ ಕಾರ್ತಿಕ

ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀಕ್ಷೇತ್ರ ಶಿಬಾರ ಮೈಲಾರಲಿಂಗೇಶ್ವರ ದೇವಸ್ಥಾನದಲ್ಲಿ 39ನೇ ಕಡೇಕಾರ್ತಿಕೋತ್ಸವ ಕಾರ್ಯಕ್ರಮವನ್ನು ಇಂದು ಸಂಜೆ 7.30 ರಿಂದ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನ ಟ್ರಸ್ಟ್ ನ ಸಹ ಕಾರ್ಯದರ್ಶಿ ಗೋಪಾಲ್ ಸಾವಂತ್ ತಿಳಿಸಿದ್ದಾರೆ.

# ಅದಾನಿಯ ಧಾರವಿ ಅಭಿವೃದ್ಧಿ ಯೋಜನೆಗೆ ಹೈಕೋರ್ಟ್ ಅಸ್ತು

ಮುಂಬೈ, ಡಿ. 21- ಧಾರವಿ ಕೊಳಗೇರಿಯ ಮರು ಅಭಿವೃದ್ಧಿಗಾಗಿ ಮಹಾರಾಷ್ಟ್ರ ಸರ್ಕಾರವು ಅದಾನಿ ಸಮೂಹಕ್ಕೆ ನೀಡಿದ ಗುತ್ತಿಗೆಯನ್ನು ಬಾಂಬೆ ಹೈಕೋರ್ಟ್ ಎತ್ತಿ ಹಿಡಿದಿದೆ.

ಮುಖ್ಯ ನ್ಯಾಯಮೂರ್ತಿ ಡಿ.ಕೆ. ಉಪಾಧ್ಯಾಯ ಹಾಗೂ ನ್ಯಾಯಮೂರ್ತಿ ಅಮಿತ್ ಬೋರ್ಕರ್ ಅವರನ್ನು ಒಳಗೊಂಡ ವಿಭಾಗೀಯ ಪೀಠ ಈ ತೀರ್ಪು ನೀಡಿದ್ದು, ಯೋಜನೆಯಲ್ಲಿ ಯಾವುದೇ ನಿರಂಕುಶತೆ ಇಲ್ಲವೇ ನಿಯಮ ಉಲ್ಲಂಘನೆ ಆಗಿಲ್ಲ ಎಂದು ಹೇಳಿದೆ.

ರಾಜ್ಯ ಸರ್ಕಾರ ಅದಾನಿ ಸಮೂಹಕ್ಕೆ ಗುತ್ತಿಗೆ ನೀಡಿದ್ದನ್ನು ಪ್ರಶ್ನಿಸಿ ಯುಎಇ ಮೂಲದ ಸೆಕ್ಲಿಂಕ್ ಟೆಕ್ನಾಲಜೀಸ್ ಕಾರ್ಪೊರೇಷನ್ ಕಂಪನಿಯು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿತ್ತು.

2018ರಲ್ಲಿ ಈ ಯೋಜನೆಗಾಗಿ ಟೆಂಡರ್ ಸಲ್ಲಿಸಿದ್ದ ಯು.ಎ.ಇ.ಯ ಸೆಕ್ಲಿಂಗ್ ಟೆಕ್ನಾಲಜೀಸ್ ಅತಿ ದೊಡ್ಡ ಬಿಡ್ ದಾರ ಕಂಪನಿಯಾಗಿತ್ತು. ಆದರೆ ರಾಜ್ಯ ಸರ್ಕಾರ ನಂತರ ಈ ಟೆಂಡರ್ ರದ್ದುಗೊಳಿಸಿತ್ತು.

ನಂತರ ಅದಾನಿ ಸಮೂಹ 259 ಹೆಕ್ಟೇರ್ ಪ್ರದೇಶದ ಧಾರವಿ ಮರು ಅಭಿವೃದ್ಧಿ ಯೋಜನೆಗೆ ಅತಿ ಹೆಚ್ಚಿನ ಬಿಡ್ ಮಾಡಿತ್ತು. 2022ರ ಟೆಂಡರ್ ಪ್ರಕ್ರಿಯೆಯಲ್ಲಿ 5069 ಕೋಟಿ ರೂ.ಗಳಿಗೆ ಅದಾನಿ ಸಮೂಹ ಟೆಂಡರ್ ಪಡೆದುಕೊಂಡಿತ್ತು.

# ರಷ್ಯಾ ಗಡಿಯ ಸಾವಿರ ಕಿ.ಮೀ. ಒಳಗೆ ಡ್ರೋಣ್ ದಾಳಿ

ಕೀವ್, ಡಿ. 21- ರಷ್ಯಾ ಗಡಿಯಿಂದ ಸಾವಿರ ಕಿ.ಮೀ. ದೂರದಲ್ಲಿ ಕಸನ್ ನಗರದ ಮೇಲೆ ಉಕ್ರೇನ್ ದಾಳಿ ನಡೆಸಿದೆ. ಉಕ್ರೇನ್ ನಡೆಸಿದ ಡ್ರೋಣ್ ದಾಳಿಯಿಂದ ವಸತಿ ಕಟ್ಟಡಗಳಿಗೆ ಹಾನಿಯಾಗಿದೆ.

ನಗರದ ಮೇಲೆ 8 ಡ್ರೋಣ್‌ಗಳ ಮೂಲ ದಾಳಿ ನಡೆಸಲಾಗಿತ್ತು. 6 ವಸತಿ ಕಟ್ಟಡಗಳಿಗೆ, 1 ಕೈಗಾರಿಕಾ ಪ್ರದೇಶಕ್ಕೆ ಹಾಗೂ 1 ನದಿಯ ಮೇಲೆ ಬಿದ್ದಿದೆ ಎಂದು ಟೆಟರಸ್ತಾನ್ ಗೌರ್ನರ್ ರುಸ್ತಂ ಮಿನಿಕನವ್ ತಿಳಿಸಿದ್ದಾರೆ.

ಗಗನಚುಂಬಿ ಕಟ್ಟಡಗಳ ಮೇಲಿನ ಮಹಡಿಗಳಿಗೆ ಡ್ರೋಣ್ ಅಪ್ಪಳಿಸಿರುವ ವಿಡಿಯೋವನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗಿದೆ. ದಾಳಿಯಿಂದ ಯಾವುದೇ ಅನಾಹುತಗಳು ಸಂಭವಿಸಿಲ್ಲ ಎಂದು ಸ್ಥಳೀಯ ಅಧಿಕಾರಿಗಳು ಹೇಳಿದ್ದಾರೆ. ದಾಳಿಯ ಹಿನ್ನೆಲೆಯಲ್ಲಿ ಶನಿವಾರ ಮತ್ತು ಭಾನುವಾರ ಕಸನ್ ವಿಮಾನ ನಿಲ್ದಾಣದಿಂದ ಎಲ್ಲಾ ಹಾರಾಟಗಳನ್ನು ನಿಲ್ಲಿಸಲಾಗಿದೆ ಹಾಗೂ ಸಭೆ, ಸಮಾರಂಭಗಳನ್ನು ಮುಂದೂಡಲಾಗಿದೆ.

# ಹದಡಿ ರಸ್ತೆಯಲ್ಲಿ ಫುಟ್‌ಪಾತ್ ತೆರವು ಕಾರ್ಯಾಚರಣೆ





ದಾವಣಗೆರೆ, ಡಿ. 21- ನಗರದ ಹದಡಿ ರಸ್ತೆಯ ಎರಡೂ ಬದಿಗಳ ಫುಟ್‌ಪಾತ್ ಮೇಲಿದ್ದ ಗೂಡಂಗಡಿಗಳ ತೆರವು ಕಾರ್ಯಾಚರಣೆ ಶನಿವಾರ ನಡೆಯಿತು.

ರಸ್ತೆಯ ಫುಟ್‌ಪಾತ್ ಮೇಲೆ ಚಹಾ ಅಂಗಡಿ, ಹೆಲ್ಮೆಟ್ ಮಾರಾಟ, ಹಣ್ಣಿನ ಅಂಗಡಿ, ತಿಂಡಿ ಹೋಟೆಲ್‌ಗಳು ಸೇರಿದಂತೆ ಅನೇಕ ಅಂಗಡಿಗಳಿದ್ದವು. ಇವುಗಳಿಂದಾಗಿ ಸುಗಮ ಸಂಚಾರಕ್ಕೆ ಅಡ್ಡಿಯಾಗುತ್ತಿತ್ತು. ನಿಟುವಳ್ಳಿ ವೃತ್ತದ ಬಳಿಯಂತೂ ಪಾಲಿಕೆ ವ್ಯಾಪ್ತಿಯ ಬಸ್ ನಿಲ್ದಾಣವೇ ಹಣ್ಣಿನ ಅಂಗಡಿಗಳಿಂದ ಮರೆಯಾಗಿತ್ತು. ಇದೀಗ ಪಾಲಿಕೆ ಸಿಬ್ಬಂದಿಗಳಿಂದ ಜೆಸಿಬಿ, ಟ್ರ್ಯಾಕ್ಟರ್ ಬಳಸಿ ಎಲ್ಲಾ ಅಂಗಡಿಗಳನ್ನು ತೆರವು ಮಾಡಲಾಯಿತು.

ಹದಡಿ ರಸ್ತೆಯಲ್ಲಿನ ಪಾದಚಾರಿ ರಸ್ತೆ ಆಕ್ರಮಣ ತೆರವಿಗಾಗಿ ಯಾರೋ ಒಬ್ಬರು ಹೈಕೋರ್ಟಿಗೆ ಪಿಐಎಲ್ ಸಲ್ಲಿಸಿದ್ದರಿಂದ ಪಾಲಿಕೆಗೆ ನೋಟಿಸ್ ಬಂದಿದೆ. ಹಾಗಾಗಿ ಅಲ್ಲಿನ ರಸ್ತೆ ಆಕ್ರಮಣ ತೆರವು ಗೊಳಿಸಲಾಗಿದೆ ಎಂದು ಪಾಲಿಕೆ ಮೇಯರ್ ಚಮನ್ ಸಾಬ್ ತಿಳಿಸಿದ್ದಾರೆ.

ಇನ್ನು ಮುಂದೆ ರಸ್ತೆ ಆಕ್ರಮಣ ಮಾಡದಂತೆ ಹಾಗೂ ದುಡಿಮೆ ಮಾಡುವ ಬಡವರಿಗೂ ಮತ್ತು ಸಾರ್ವಜನಿಕರಿಗೂ ತೊಂದರೆ ಆಗದಂತೆ ಸಚಿವರ ಸಮ್ಮುಖದಲ್ಲಿ ಚರ್ಚಿಸಿ, ತೀರ್ಮಾನ ಮಾಡಲಿದ್ದೇವೆ ಎಂದು ಮಾಹಿತಿ ನೀಡಿದರು.

# ಹರಿಹರ ತಾಲ್ಲೂಕು ಕಾಂಗ್ರೆಸ್ ಪಕ್ಷದ ತವರು

## ಹರಿಹರ ತಾಲ್ಲೂಕು ಕಾಂಗ್ರೆಸ್ ಉಸ್ತುವಾರಿ ಎಸ್. ವಿಜಯಕುಮಾರ್



ಹರಿಹರ, ಡಿ. 21 - ತಾಳ್ಮೆ ಮತ್ತು ಉತ್ತಮ ಸಂಸ್ಕಾರ ವ್ಯಕ್ತಿತ್ವ ಹೊಂದಿರುವ ನಂದಿಗಾವಿ ಶ್ರೀನಿವಾಸ್ ಮುಂದೆ ರಾಜಕೀಯದಲ್ಲಿ ಉನ್ನತ ಸ್ಥಾನಕ್ಕೆ ಏರಲಿದ್ದಾರೆ ಎಂದು ತಾಲ್ಲೂಕು ಕಾಂಗ್ರೆಸ್ ಉಸ್ತುವಾರಿ ಎಸ್. ವಿಜಯಕುಮಾರ್ ಅಭಿಪ್ರಾಯ ಪಟ್ಟಿದ್ದಾರೆ.

ಹರಿಹರ ಕ್ಷೇತ್ರದ ಕಾಂಗ್ರೆಸ್ ಮುಖಂಡರು ಹಾಗೂ ತಾಲ್ಲೂಕು ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ನಂದಿಗಾವಿ ಶ್ರೀನಿವಾಸ್ ಅವರ 46 ನೇ ಹುಟ್ಟು ಹಬ್ಬ ಹಾಗೂ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಹರಿಹರ ತಾಲ್ಲೂಕು ಕಾಂಗ್ರೆಸ್ ಪಕ್ಷದ ತವರು ಮನೆ ಇದ್ದ ಹಾಗೆ ಇಲ್ಲಿ ಕಾಂಗ್ರೆಸ್ ಪಕ್ಷ ಸದೃಢ ವಾಗಿದೆ. ತಾಳ್ಮೆ, ಸಂಸ್ಕಾರ, ಕಾರ್ಯಶೈಲಿ ರಾಜಕಾರಣಿಗಳಲ್ಲಿ ಕಾಣುವುದು ಅಪರೂಪ. ಅಂತಹದರಲ್ಲಿ ಶ್ರೀನಿವಾಸ್ ಅವರು ಈ ಎಲ್ಲಾ ಗುಣಗಳನ್ನು ಹೊಂದಿದ್ದಾರೆ ಎಂದು ಅವರು ಪ್ರಶಂಸಿಸಿದರು.

ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಮಾತನಾಡಿ, ಶ್ರೀನಿವಾಸ್ ಅವರು ಕಳೆದ ಬಾರಿಯೇ ಶಾಸಕರಾಗಬೇಕಿತ್ತು. ಆದರೆ ನಮ್ಮವರಿಂದ ಅವರು ಸೋತರು ಎಂದರು.

ದಾವಣಗೆರೆ ಮೇಯರ್ ಚಮನ್ ಸಾಬ್ ಮಾತನಾಡಿ, ಶ್ರೀನಿವಾಸ್ ಕ್ರಿಯಾಶೀಲ ಯುವಕ, ಅವರು ಈಗಾಗಲೇ ಶಾಸಕರಿಗಿಂತ ಹೆಚ್ಚು ಕೆಲಸ ಮಾಡುತ್ತಿದ್ದಾರೆ ಎಂದು ಶ್ಲಾಘಿಸಿದರು.

ಲಿಂಗಾಯತ ಪಂಚಮಸಾಲಿ ಪೀಠದ ವಚನಾನಂದ ಶ್ರೀ, ಯಲವಟ್ಟಿ ಸಿದ್ಧಾರೂಢ ಮಠದ ಸಿದ್ಧಾರೂಢ ಯೋಗಾನಂದ ಶ್ರೀ 108 ಲಿಂಗೇಶ್ವರ ದೇವಸ್ಥಾನದ ಬಸವಲಿಂಗ ಶ್ರೀ ಆರೋಗ್ಯ ಮಾತೆ ಚರ್ಚಿನ ಧರ್ಮಗುರು ಕೆ.ಎ. ಜಾರ್ಜ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ, ಶ್ರೀನಿವಾಸ್ ಅವರಿಗೆ ಆಶೀರ್ವದಿಸಿದರು.

ಎಐಸಿಸಿ ರಾಜ್ಯ ಉಸ್ತುವಾರಿ ಮಯೂರ್ ಜಯಕುಮಾರ್, ಹೊನ್ನಾಳಿ ಕಾಂಗ್ರೆಸ್ ಮುಖಂಡ ಸುರೇಂದ್ರ ಗೌಡ, ಕೆಪಿಸಿಸಿ ಸದಸ್ಯ ಬಿ. ರೇವಣಸಿದ್ದಪ್ಪ ಶುಭ ಕೋರಿದರು.

ನಗರಸಭಾ ಸದಸ್ಯರಾದ ಶಂಕರ್ ಖಟಾವಕರ್, ಕೆ.ಜಿ ಸಿದ್ದೇಶ್, ಉಷಾ , ಸುಮಿತ್ರಮ್ಮ, ನಾಗರತ್ನ, ರಜನಿಕಾಂತ್, ವಿಜಯ್ ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಲ್. ಬಿ ಹನುಮಂತಪ್ಪ, ಗ್ರಾಮಾಂತರ ಅಧ್ಯಕ್ಷ ಅಬಿದ್ ಅಲಿ, ಗ್ರಾಮಾಂತರ ಮುಖಂಡರಾದ ಬಿ.ಎಂ ವಾಗೀಶ್ ಸ್ವಾಮಿ, ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಡಿ.ಕುಮಾರ್, ನಿವೃತ್ತ ಪೊಲೀಸ್ ಅಧಿಕಾರಿ ಬಿ.ಬಿ ಸಕ್ರಿ, ಮುರುಗಣ್ಣನವರ್, ನಿವೃತ್ತ ಪ್ರಾಧ್ಯಾಪಕ ಎ.ಬಿ ರಾಮಚಂದ್ರಪ್ಪ, ಆರ್.ಆರ್ ಕಾಂತರಾಜ್, ವಕೀಲರ ಸಂಘದ ಅಧ್ಯಕ್ಷ ಆನಂದ್ ಕುಮಾರ್ ಅವರು ಶ್ರೀನಿವಾಸ್‌ರನ್ನು ಅಭಿನಂದಿಸಿದರು.

ಸ್ಥಳೀಯ ಕಾಂಗ್ರೆಸ್ ಮುಖಂಡರಾದ ಹನುಮಂತರೆಡ್ಡಿ, ಅಮರಾವತಿ ರೇವಣಸಿದ್ದಪ್ಪ, ಮಹೇಶ್ ದೇವರಬೆಳಕೇರಿ, ಮಲ್ಲೇಶ್ ಬಿ.ಬಿ, ಸಂತೋಷ ನೋಟದರ್, ಗೋವಿನಾಳ ರಾಜಣ್ಣ, ಮಂಜುನಾಥ್, ಬಸವರಾಜ್ ದೊಡ್ಮನಿ, ನಜೀರ್, ಗಣೇಶ್ ಚಂದ್ರಪ್ಪ ಇತರರಿದ್ದರು.

ಸಚಿವ ಸತೀಶ್ ಜಾರಕಿಹೊಳಿ, ಯತೀಂದ್ರ ಸಿದ್ರಾಮಯ್ಯ ಸೇರಿದಂತೆ ಹಲವು ಗಣ್ಯರು ದೂರವಾಣಿ ಮೂಲಕ ಶ್ರೀನಿವಾಸ್ ಅವರಿಗೆ ಜನ್ಮ ದಿನದ ಶುಭ ಕೋರಿದರು.


**ಭಾವಪೂರ್ಣ ಶ್ರದ್ಧಾಂಜಲಿ**



ಗದ್ವಾಲ್ ಮೇಡಕುಂದ ಜಿ.ಆರ್. ವೀರಣ್ಣ ಅವರ ಧರ್ಮಪತ್ನಿ


**ಲಕ್ಷ್ಮಿದೇವಿ**

ಇವರು ದಿನಾಂಕ : 12.12.2024 ರಂದು ನಿಧನರಾದರು. ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. 'ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುತ್ತೇವೆ'

ದುಃಖತಪ್ತರು : **ಮಕ್ಕಳು & ಮೊಮ್ಮಕ್ಕಳು ಹಾಗೂ ಮೇಡಕುಂದ ವಂಶಸ್ಥರು. ರಾಜ್ ಹೇರ್ ಡ್ರೆಸಸ್,** ಕೆ.ಆರ್. ರೋಡ್, ದಾವಣಗೆರೆ-1

॥ ಶ್ರೀ ಲಕ್ಷ್ಮಿ ವೆಂಕಟೇಶ್ವರ ಪ್ರಸನ್ನ ॥

**ವೈಕುಂಠ ಸಮಾರಾಧನೆ ಆಹ್ವಾನ**



ದಾವಣಗೆರೆ ಕೆಟಿಜೆ ನಗರ, 8ನೇ ಕ್ರಾಸ್, ವಾಸಿಗಳಾದ

**ಶ್ರೀ ಟಿ.ಕೆ. ಶಿವಕುಮಾರ್ ಮತ್ತು ಸಹೋದರರು**

ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ : 06.12.2024ನೇ ಶುಕ್ರವಾರ ಬೆಳಿಗ್ಗೆ 09.30 ಗಂಟೆಗೆ ನಮ್ಮ ಅತ್ತಿಗೆಯವರಾದ

**ಶ್ರೀಮತಿ ಅಶ್ವಿನಿ**

(ದಿ॥ ಶ್ರೀ ಟಿ.ಕೆ. ಅಶ್ವತ್ಥ್ ನಾರಾಯಣಶೆಟ್ಟಿ ಇವರ ಧರ್ಮಪತ್ನಿ)

ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**'ವೈಕುಂಠ ಸಮಾರಾಧನೆ'ಯನ್ನು**

**ದಿನಾಂಕ : 22.12.2024ನೇ ಭಾನುವಾರ ಮಧ್ಯಾಹ್ನ 12.00 ಗಂಟೆಗೆ ಸಿದ್ದೇಶ್ವರ ದೇವಸ್ಥಾನ, ಕೆಟಿಜೆ ನಗರ, 2ನೇ ಮೇನ್, 2ನೇ ಕ್ರಾಸ್, ದಾವಣಗೆರೆ ಇಲ್ಲಿ ವೈಕುಂಠ ಸಮಾರಾಧನೆಯನ್ನು** ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕೆಂದು ವಿನಂತಿ.

ಇಂತಿ ದುಃಖತಪ್ತರು: **ಮಕ್ಕಳು, ಮೊಮ್ಮಕ್ಕಳು, ಅಳಿಯಂದಿರು ಹಾಗೂ ಬಂಧು-ಮಿತ್ರರು. ಫೋ. : 99453 27255**

**ಹೆಚ್. ಚಂದ್ರಪ್ಪ ನಿಧನ**



ದಾವಣಗೆರೆ ಸಿಟಿ, 10ನೇ ಮೇನ್, ಲೂರ್ಡ್ಸ್ ಬಾಯ್ಸ್ ಸ್ಕೂಲ್ ರೋಡ್ ಹತ್ತಿರದ ವಾಸಿ ಶ್ರೀ ಆಂಜನೇಯ ಎಂಟರ್ ಪ್ರೈಸಸ್ ಮಾಲೀಕರಾದ ಹೆಚ್. ಚಂದ್ರಪ್ಪ (65) ಅವರು ದಿನಾಂಕ : 21.12.2024ರ ಶನಿವಾರ ಬೆಳಿಗ್ಗೆ 6.15ಕ್ಕೆ ನಿಧನರಾದರು. ಪತ್ನಿ, ಮೂವರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು, ಸಹೋದರರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ : 23.12.2024ನೇ ಸೋಮವಾರ ಬೆಳಿಗ್ಗೆ 11 ಗಂಟೆಗೆ ಹಳೇ ಪಿ.ಬಿ. ರಸ್ತೆಯ ವೈಕುಂಠಧಾಮದಲ್ಲಿ ನೆರವೇರಲಿದೆ.

**ಮುದಹದಡಿ ಬಾಣೆಗೌಡ್ರು ಕರೆಗೌಡಪ್ಪ ನಿಧನ**



ದಾವಣಗೆರೆ ತಾಲ್ಲೂಕು ಮುದಹದಡಿ ಗ್ರಾಮದ ವಾಸಿ ಶ್ರೀಮತಿ ಗೌರಮ್ಮನವರ ಪತಿ ಬಾಣೆಗೌಡ್ರು ಕರೆಗೌಡಪ್ಪ (79) ಅವರು ದಿನಾಂಕ 21.12.2024ರ ಶನಿವಾರ ಮಧ್ಯಾಹ್ನ 2 ಗಂಟೆಗೆ ನಿಧನರಾದರು. ಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯ ಕ್ರಿಯೆಯನ್ನು ದಿನಾಂಕ 22.12.2024ರ ಭಾನುವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗ್ರಾಮ ಮುದಹದಡಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ಭಾವಪೂರ್ಣ ಶ್ರದ್ಧಾಂಜಲಿ**



ದಿನಾಂಕ 21.12.2024ರಂದು ನಿಧನರಾದ ಶ್ರೀ ಆಂಜನೇಯ ಎಂಟರ್ ಪ್ರೈಸಸ್ ಮಾಲೀಕರಾದ

**ಶ್ರೀ ಹೆಚ್. ಚಂದ್ರಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ

ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ದುಃಖ ಭರಿಸುವ ಶಕ್ತಿಯನ್ನು ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ

**ವಿನಾಯಕ ರೈಸ್ ಮಿಲ್**

**ದಿ. ಜಿ. ವೇದಮೂರ್ತಿ (ಮೂರ್ತಪ್ಪನವರ) ಸ್ನೇಹ ಬಳಗ,**

ದಾವಣಗೆರೆ

**ನಾಲ್ಕನೇ ವರ್ಷದ ಪುಣ್ಯಸ್ಮರಣೆ**



ಜನನ 21.02.1946 ಮರಣ 22.12.2020

**ದಿ ॥ ಶ್ರೀ ಡಿ. ನಂಜುಂಡಪ್ಪ**

ನೀವು ನಮ್ಮನ್ನಗಲಿ ಇಂದಿಗೆ ನಾಲ್ಕು ವರ್ಷಗಳಾದರೂ ಸಹ ನಿಮ್ಮ ನೆನಪು ನಮ್ಮಲ್ಲಿ ಸದಾ ಅಚ್ಚ ಹಸಿರಾಗಿದೆ. ನೀವು ಹೇಳಿ ಕೊಟ್ಟ ಆದರ್ಶಗಳು, ನಡೆ-ನುಡಿಗಳು, ನಯ-ವಿನಯಗಳೇ ನಮ್ಮ ಜೀವನದ ದಾರಿ-ದೀಪವಾಗಿವೆ. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ದಯಪಾಲಿಸಲೆಂದು ಸದಾ ಸ್ಮರಿಸುವ

ಪತ್ನಿ: **ಶ್ರೀಮತಿ ಹೆಚ್.ಬಿ. ರುದ್ರಮ್ಮ**

ಮಕ್ಕಳಾದ : **ಡಿ.ಎನ್. ಸಿದ್ದಪ್ಪ, ಡಿ.ಎನ್. ಮಂಜುನಾಥ್, ಡಿ.ಎನ್. ಸವಿತಾ,** ಅಳಿಯ: **ಕೆ.ಟಿ. ದೇವೇಂದ್ರಪ್ಪ,** ಸೊಸೆ : **ನಿವೇದಿತಾ ಮಂಜುನಾಥ್,** ಮೊಮ್ಮಗಳು: **ಶಿಶಿರ. ಡಿ. ಹಾಗೂ ಬಂಧು-ಮಿತ್ರರು,** ದಾವಣಗೆರೆ.

# ಐಐಎಂ-ಬಿ ನಿರ್ದೇಶಕರ ವಿರುದ್ಧ ಜಾತಿ ಪಕ್ಷಪಾತದ ದೂರು ದಾಖಲು

ಬೆಂಗಳೂರು, ಡಿ. 21- ಇಲ್ಲಿನ ಪ್ರತಿಷ್ಠಿತ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಬೆಂಗಳೂರು (ಐಐಎಂ-ಬಿ) ನಿರ್ದೇಶಕ ಹಾಗೂ ಏಳು ಉಪನ್ಯಾಸಕರ ವಿರುದ್ಧ ಸಂಸ್ಥೆಯ ಸಹ ಪ್ರಾಧ್ಯಾಪಕರೊಬ್ಬರು ಜಾತಿ ಪಕ್ಷಪಾತದ ದೂರು ದಾಖಲಿಸಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ದೂರಿನ ಆಧಾರದ ಮೇಲೆ ಶುಕ್ರವಾರ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಭಾರತೀಯ ನ್ಯಾಯ ಸಂಹಿತೆಯ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೇಲಿನ ದೌರ್ಜನ್ಯ ತಡೆ ಕಾಯ್ದೆ ಅನ್ವಯ ಪ್ರಕರಣ ದಾಖಲಿಸಲಾಗಿದೆ. ನಾವು ಪ್ರಕರಣ ದಾಖಲಿಸಿದ್ದೇವೆ. ಆದರೆ ಎಫ್‌ಐಆರ್‌ನಲ್ಲಿ ಹೆಸರಿರುವವರು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವುದಾಗಿ ಹೇಳಿದ್ದಾರೆ. ನಮಗೆ ಇನ್ನೂ ಆದೇಶದ ಪ್ರತಿ ದೊರೆತಿಲ್ಲ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸಹ ಪ್ರಾಧ್ಯಾಪಕರು ನೀಡಿರುವ ದೂರಿನ ಆಧಾರದ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಸಮಾಜ ಕಲ್ಯಾಣ ಇಲಾಖೆಯ ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯವು ಪೊಲೀಸರಿಗೆ ತಿಳಿಸಿದೆ.

ಐಐಎಂ-ಬಿಯ 8 ಜನರು ಉದ್ದೇಶ ಪೂರ್ವಕವಾಗಿ ತಮ್ಮ ಜಾತಿಯನ್ನು ಕೆಲಸದ ಸ್ಥಳದಲ್ಲಿ ಬಹಿರಂಗ ಪಡಿಸಿದ್ದಾರೆ ಹಾಗೂ ಪ್ರಚಾರ ಮಾಡಿದ್ದಾರೆ ಮತ್ತು ಸಮಾನ ಅವಕಾಶ ನಿರಾಕರಿಸಿದ್ದಾರೆ ಎಂದು ಸಹ ಪ್ರಾಧ್ಯಾಪಕ ಗೋಪಾಲ್ ದಾಸ್ ಎಂಬುವವರು ದೂರು ನೀಡಿದ್ದಾರೆ.

ತಮಗೆ ಬೆದರಿಕೆ ಹಾಕಲಾಗಿದೆ ಹಾಗೂ ಮಾನಸಿಕವಾಗಿ ಪೀಡಿಸಿದ್ದಾರೆ ಎಂದೂ ದೂರಿನಲ್ಲಿ ಹೇಳಲಾಗಿದೆ.

ಇದಕ್ಕೂ ಮುಂಚೆ ಹೇಳಿಕೆಯೊಂದನ್ನು ಬಿಡುಗಡೆ ಮಾಡಿದ್ದ ಐಐಎಂ-ಬಿ, ದಾಸ್ ಅವರನ್ನು ಪೀಡಿಸಿರಲಿಲ್ಲ. ಅವರಿಗೆ ಎಲ್ಲಾ ರೀತಿಯ ಸಹಕಾರ ನೀಡಲಾಗಿತ್ತು. ಅವರು ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ಅರ್ಜಿ ದಾಖಲಿಸಿದ್ದರು. ಆದರೆ ಅವರ ಅರ್ಹತೆ ಹಾಗೂ ಅನುಭವ ಪರಿಗಣಿಸಿ ಸಹ ಪ್ರಾಧ್ಯಾಪಕ ಹುದ್ದೆ ನೀಡಲಾಗಿತ್ತು ಎಂದು ಹೇಳಿದೆ.

ಕೆಲ ಪಿ.ಹೆಚ್.ಡಿ. ವಿದ್ಯಾರ್ಥಿಗಳು ದಾಸ್ ವಿರುದ್ಧ ದೂರು ದಾಖಲಿಸಿದ್ದರು. ಇದರಿಂದಾಗಿ ಅವರ ಬಡ್ತಿಯನ್ನು ತಡೆಯಲಾಗಿತ್ತು. ಇದಾದ ನಂತರವೇ ಅವರು ಜಾತಿ ನಿಂದನೆಯ ದೂರು ದಾಖಲಿಸಿದ್ದಾರೆ ಎಂದು ಐಐಎಂ-ಬಿ ತಿಳಿಸಿದೆ.

## ಕಕ್ಕರಗೊಳ್ಳದಲ್ಲಿಂದು ಕೆರೆ ಏರಿ ಭರಮ ದೇವರ ದೀಪೋತ್ಸವ

ದಾವಣಗೆರೆ ತಾಲ್ಲೂಕಿನ ಕಕ್ಕರಗೊಳ್ಳ ಗ್ರಾಮದ ಕೆರೆ ಏರಿ ಶ್ರೀ ಭರಮ ದೇವರ ದೇವಸ್ಥಾನ ಸಮಿತಿ ವತಿಯಿಂದ ಇಂದು ಕಾರ್ತಿಕ ಮಾಸದ ವಿಶೇಷ ಪೂಜೆ, ಅಭಿಷೇಕ, ದೀಪೋತ್ಸವ ನಡೆಯಲಿದೆ. ಬೆಳಿಗ್ಗೆ 6 ಗಂಟೆಗೆ ಮಹಾ ಅಭಿಷೇಕ, ಬೆಳಿಗ್ಗೆ 11 ರಿಂದ 4 ರವರೆಗೆ ಪ್ರಸಾದ ವಿತರಣೆ, ಸಂಜೆ 7 ಗಂಟೆಗೆ ದೀಪೋತ್ಸವ ಜರುಗಲಿದೆ.

# ಸಿರಿಧಾನ್ಯ ಖಾದ್ಯ ಸ್ಪರ್ಧೆಯಲ್ಲಿ ಗಮನ ಸೆಳೆದ ತಿನಿಸುಗಳು



ದಾವಣಗೆರೆ, ಡಿ. 21- ಸಜ್ಜೆ ಬರ್ಫಿ, ರಾಗಿ ಹಲ್ವಾ, ಕೀಲ್ಸ, ಕರ್ಚಿಕಾಯಿ, ಲಡ್ಡು, ರಾಗಿ ಕೇಕ್, ಸಿರಿಧಾನ್ಯದ ಕರ್ಜಿಕಾಯಿ, ನವಣೆ ಲಡ್ಡು, ನವಣೆ ಚಕ್ಕುಲಿ, ನವಣೆ ಬಿಸಿ ಬೇಳೆಬಾತ್, ಸಜ್ಜೆ ತಾಳಿಪಟ್ಟು, ಸಜ್ಜೆಕಡಬು, ರಾಗಿ ಬಿಳಿ ಹೋಳಿಗೆ, ಪೇರಲ ಹಲ್ವ, ಜೋಳದ ಅನ್ನ, ಪಪ್ಪಾಯ ಉಪ್ಪಿನಕಾಯಿ, ಶೆಂಡಿಗೆ ಹುಗ್ಗಿ, ಕುಂಬಳಕಾಯಿ ಕಡಬು, ಕುಂಬಳಕಾಯಿ ಗಾರ್ಗಿ, ಗೋದಿ ಕುದುರೆ... ಹೀಗೆ ಅಲ್ಲಿ ಎಲ್ಲವೂ ಇತ್ತು. ಆದರೆ, ಅದು ಮಾರಾಟಕ್ಕಲ್ಲ. ಪ್ರದರ್ಶನಕ್ಕೆ ಮಾತ್ರ. ಅದನ್ನು ನೋಡಲು ಹೋದವರಿಗೆ ರುಚಿ ನೋಡಲು ಅವಕಾಶವಿತ್ತು. ಈ ತಿನಿಸುಗಳು ಒಂದನ್ನು ಮತ್ತೊಂದು ಮೀರಿಸುವಂತಿತ್ತು. ಹಲವರ ಬಾಯಲ್ಲಿ ನೀರೂರಿಸುವಂತೆ ಮಾಡಿತು.

ದಾವಣಗೆರೆ ಸಹಾಯಕ ಕೃಷಿ ನಿರ್ದೇಶಕ ಕಚೇರಿ ಆವರಣದಲ್ಲಿ ಸಿರಿಧಾನ್ಯ ಮತ್ತು ಸಾವಯವ ಅಂತರ್ ರಾಷ್ಟ್ರೀಯ ವಾಣಿಜ್ಯ ಮೇಳ 2025ರ ಪ್ರಯುಕ್ತ ಬುಧವಾರ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ 'ಸಿರಿಧಾನ್ಯ ಹಾಗೂ ಮರೆತುಹೋದ ಖಾದ್ಯಗಳ ಪಾಕ ಸ್ಪರ್ಧೆ'ಯಲ್ಲಿ ವಿವಿಧ ಬಗೆಯ ತಿಂಡಿ-ತಿನಿಸುಗಳು ಗಮನ ಸೆಳೆದವು.

ಜಗಳೂರು, ಹೊನ್ನಾಳಿ, ದಾವಣಗೆರೆ, ಹರಿಹರ ಸೇರಿದಂತೆ ಜಿಲ್ಲೆಯಿಂದ 58 ಮಂದಿ ಸ್ಪರ್ಧೆಯಲ್ಲಿ ಭಾಗವಹಿಸಿ ವಿವಿಧ ರೀತಿಯ ಸಿರಿಧಾನ್ಯದ ತಿನಿಸುಗಳನ್ನು ಪ್ರದರ್ಶಿಸಿದರು. ಸಿಹಿ, ಖಾರ ಮತ್ತು ಮರೆತುಹೋದ ಖಾದ್ಯ ವಿಭಾಗದಿಂದ ತಲಾ ಮೂರು ಮಂದಿಗೆ ಬಹುಮಾನ ನೀಡಲಾಯಿತು.

ಸ್ಪರ್ಧೆಗೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರ ಸ್ವಾಮಿ ಮಾತನಾಡುತ್ತಾ, ಸಿರಿಧಾನ್ಯ ಖಾದ್ಯ ತಯಾರಕರಿಗೆ ಮಾರುಕಟ್ಟೆ ಸೌಲಭ್ಯ ಕಲ್ಪಿಸಲು ಜಿಲ್ಲಾ ಮಟ್ಟದಲ್ಲಿ ಸಿರಿಧಾನ್ಯ ಖಾದ್ಯ ಮಳಿಗೆಯನ್ನು ಪ್ರಾರಂಭಿಸಲು ಯೋಚಿಸಲಾಗಿದೆ ಎಂದು ತಿಳಿಸಿದರು.

ಜಿ.ಪಂ. ಸಿಇಒ ಸುರೇಶ್ ಇಟ್ನಾಳ್ ಮಾತನಾಡಿ, ಮಾರ್ಚ್ ತಿಂಗಳಲ್ಲಿ ಸೂಪರ್ ಮಾರ್ಕೆಟ್ ಪ್ರಾರಂಭಿಸುವ ಆಶ್ವಾಸನೆ ನೀಡಿದರು. ಜಂಟಿ ಕೃಷಿ ನಿರ್ದೇಶಕ ಶ್ರೀನಿವಾಸ ಚಿಂತಾಲ್, ಕಾಡಜ್ಜಿ ಉಪ ಕೃಷಿ ನಿರ್ದೇಶಕ ತಿಪ್ಪೇಸ್ವಾಮಿ, ಉಪಸ್ಥಿತರಿದ್ದರು. ಸಹಾಯಕ ಕೃಷಿ ನಿರ್ದೇಶಕ ಮೊಹಮ್ಮದ್ ರಫಿ, ವೀರಭದ್ರಪ್ಪ ಸಹಾಯಕ ಕೃಷಿ ನಿರ್ದೇಶಕ ಶ್ರೀಧರಮೂರ್ತಿ ವಂದಿಸಿದರು.

**ಜಿಲ್ಲಾ ಮಟ್ಟದಲ್ಲಿ ಸಿರಿಧಾನ್ಯ ಖಾದ್ಯ ಮಳಿಗೆ ಆರಂಭದ ಚಿಂತನೆ**
**- ಗಂಗಾಧರಸ್ವಾಮಿ, ಜಿಲ್ಲಾಧಿಕಾರಿ**

### ಸಜ್ಜೆ ಬರ್ಫಿ, ಬಿಸಿ ಬೇಳೆಬಾತ್, ಕುಂಬಳಕಾಯಿ ಕಡಬಿಗೆ ಪ್ರಥಮ ಸ್ಥಾನ

ಸಿರಿಧಾನ್ಯದ ಸಿಹಿ ಖಾದ್ಯದಲ್ಲಿ ಸಜ್ಜೆ ಬರ್ಫಿ ತಯಾರಿಸಿದ ದಾವಣಗೆರೆ ತಾಲ್ಲೂಕಿನ ಹಾಲುವರ್ತಿ ಗ್ರಾಮದ ಇಂದ್ರಮ್ಮ ಧನಂಜಯ ಮೂರ್ತಿ (ಪ್ರಥಮ) ರಾಗಿ ಹಲ್ವಾ ತಯಾರಿಸಿದ ಚನ್ನಗಿರಿ ತಾಲ್ಲೂಕಿನ ಪ್ರೇಮಾ ಬಸವನಗೌಡ (ದ್ವಿತೀಯ) ಕರ್ಚಿಕಾಯಿ ಮಾಡಿದ ರಾಕೇಶ್ (ತೃತೀಯ) ಬಹುಮಾನ ಪಡೆದರು.

ಸಿರಿಧಾನ್ಯದ ಖಾರದ ತಿನಿಸುಗಳಲ್ಲಿ ಚನ್ನಗಿರಿ ತಾಲ್ಲೂಕು ಮಾದಾಪುರದ ಕೋಮಲ ರಮೇಶ್ ತಯಾರಿಸಿದ ನವಣಕ್ಕಿ ಬಿಸಿಬೇಳೆ ಬಾತ್ ಗೆ ಪ್ರಥಮ ಬಹುಮಾನ, ಸಜ್ಜೆ ಕಡಬು ಮಾಡಿದ ಪೂಜಾ ಪ್ರಶಾಂತ, ಹಾಲುವರ್ತಿ ದ್ವಿತೀಯ ಬಹುಮಾನ ಪಡೆದರೆ, ತೃತೀಯ ಬಹುಮಾನವನ್ನು ನವಣೆಯ ಬಿಸಿಬೇಳೆ ಬಾತ್ ಮಾಡಿದ ಹೇಮಲತ ಹಂಚಿಕೊಂಡರು.

ಮರೆತು ಹೋದ ಖಾದ್ಯ ವಿಭಾಗದಲ್ಲಿ ಉಮಾದೇವಿ ಶಿವಲಿಂಗಪ್ಪ, ನಾಗರಕಟ್ಟೆ ಇವರು ತಯಾರಿಸಿದ ನಾಟಿ ಕುಂಬಳಕಾಯಿ ಅರಿಶಿಣ ಕಡಬಿಗೆ ಪ್ರಥಮ ಬಹುಮಾನ. ಶೀಲಾ, ಹೊನ್ನಾಳಿ ತಯಾರಿಸಿದ ಕುಂಬಳಕಾಯಿ ಸಿಹಿ ಕಡಬಿಗೆ ದ್ವಿತೀಯ ಬಹುಮಾನ. ಹಾಗೂ ಮೆಹರುನ್ನೀಸಾ ಬಶೀರಸಾಬ್ ತಯಾರಿಸಿದ ಗೋದಿ ಕುದುರೆ ಖಾದ್ಯಕ್ಕೆ ತೃತೀಯ ಬಹುಮಾನ ಪಡೆದರು.

ನಿವೃತ್ತ ಸಹಾಯಕ ಕೃಷಿ ನಿರ್ದೇಶಕರುಗಳಾದ ಪ್ರತಿಭಾ.ಬಿ. ಎಮ್., ಸುಧಾ. ಬಿ.ವಿ., ಗೃಹ ವಿಜ್ಞಾನಿ ಡಾ. ಸುಪ್ರಿಯಾ ತೀರ್ಪುಗಾರರಾಗಿ ಭಾಗವಹಿಸಿದ್ದರು. ಮೂರು ವಿಭಾಗಗಳಲ್ಲಿ ಪ್ರಥಮ ಸ್ಥಾನ ಪಡೆದ ಸ್ಪರ್ಧಿಗಳು ರಾಜ್ಯಮಟ್ಟದಲ್ಲಿ ಸ್ಪರ್ಧಿಸಲಿದ್ದಾರೆ ಎಂದು ಸಹಾಯಕ ಕೃಷಿ ನಿರ್ದೇಶಕ ಶ್ರೀಧರಮೂರ್ತಿ ತಿಳಿಸಿದರು.

# ಸ್ವಪಕ್ಷದವರೇ ಚುನಾವಣೆಯಲ್ಲಿ ಎದುರಾಳಿಗಳು

**ಹರಪನಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ**

ಹರಪನಹಳ್ಳಿ, ಡಿ. 21 - ಪಟ್ಟಣದ ಹಳೇ ಬಸ್ ನಿಲ್ದಾಣ ಬಳಿಯಿರುವ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ (ಬಿ90) ಆಡಳಿತ ಮಂಡಳಿಯ ನಿರ್ದೇಶಕರ ಸ್ಥಾನಗಳಿಗೆ ನಾಳೆ ದಿನಾಂಕ 22 ರಂದು ನಡೆಯುವ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಲ್ಲಿ ಸ್ವ-ಪಕ್ಷದವರೇ ಎದುರಾಳಿಯಾಗಿರುವುದು ಗೊಂದಲಕ್ಕೆ ಎಡೆ ಮಾಡಿಕೊಟ್ಟಿದೆ.

ಒಟ್ಟು 12 ನಿರ್ದೇಶಕರ ಸ್ಥಾನಗಳಿದ್ದು, ಅದರಲ್ಲಿ 4 ಸ್ಥಾನಗಳಿಗೆ ಅವಿರೋಧ ಆಯ್ಕೆ ನಡೆದಿದ್ದು, ಉಳಿದ 8 ಸ್ಥಾನಗಳಿಗೆ 19 ಜನ ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಕಾಂಗ್ರೆಸ್ ಪಕ್ಷದಲ್ಲಿ ತಲಾ 8 ಜನರ 2 ಗುಂಪುಗಳು ಪ್ರತಿಸ್ಪರ್ಧಿಗಳಾಗಿದ್ದು, ಮತ ಕೇಳುವ ಕರಪತ್ರದಲ್ಲಿ 2 ಗುಂಪುಗಳು ಕಾಂಗ್ರೆಸ್ ಪಕ್ಷದ ಬೆಂಬಲಿತ ಅಭ್ಯರ್ಥಿಗಳು ಎಂದು ಘೋಷಿಸಿಕೊಂಡಿದ್ದಾರೆ. ಉಳಿದ ಮೂವರು ಪ್ರತ್ಯೇಕವಾಗಿ ಸ್ಪರ್ಧೆ ಮಾಡಿದ್ದಾರೆ.

ಸ್ಥಳೀಯ ಶಾಸಕರು ಮತ್ತು ಬ್ಲಾಕ್ ಕಾಂಗ್ರೆಸ್ ಸಮಿತಿ ಸೂಚಿಸಿದ ಪ್ರಕಾರ ಉದ್ದಾರ ರಂಗಪ್ಪ, ಉಮಾಮಹೇಶ್ವರಿ, ಕಳ್ಳಿಬಾವಿ ಶಫಿವುಲ್ಲಾ, ಗಾಟಿನ ಬಸವರಾಜ, ಎಚ್.ದೇವೇಂದ್ರಪ್ಪ, ನಾಲ್ಬಂದಿ ನಿಸಾರ, ಕೆ.ಮಹಬೂಬ್ ಬಾಷಾ, ಎಂ.ಸುಮಂಗಳಾ ಅವರುಗಳು ಅಭ್ಯರ್ಥಿಗಳಾಗಿದ್ದಾರೆ.

ಇನ್ನು ಎದುರಾಳಿಯಾಗಿ ಕಾಂಗ್ರೆಸ್ ಪಕ್ಷದ ಬೆಂಬಲಿತ ಅಭ್ಯರ್ಥಿಗಳೆಂದು ಟಿ. ಅಹಮ್ಮದ್ ಹುಸೇನ್, ಚಿಕ್ಕೇರಿ ವೆಂಕಟೇಶ, ಜೋಗಿನ ಜಯಶ್ರೀ, ತಿಮ್ಮಾಲಾಪುರದ ರವಿಶಂಕರ, ಪೂಜಾರ ನಾಗಪ್ಪ, ಬಾವಿಕಟ್ಟಿ ಭರಮಪ್ಪ, ಜಿ.ಸುಜಾತ, ಜಿ.ಹನುಮಂತಪ್ಪ ಗುರುತಿಸಿಕೊಂಡು ಕರಪತ್ರ ಮುದ್ರಿಸಿಕೊಂಡಿದ್ದಾರೆ.

**ಸಾಮಾಜಿಕ ನ್ಯಾಯದಡಿ ಎಲ್ಲಾ ಸಮುದಾಯದವರಿಗೆ ಅವಕಾಶ ಕಲ್ಪಿಸಿಕೊಡುವ ದೃಷ್ಟಿಯಿಂದ ಎರಡು ಬಾರಿ ಸಭೆ ಮಾಡಿ ಶಾಸಕರ ಸೂಚನೆಯಂತೆ ಬಿ90 ಸೊಸೈಟಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದೇವೆ. ಅದರಂತೆ ಚುನಾವಣೆ ಮಾಡುತ್ತಿದ್ದೇವೆ. ಇನ್ನೊಂದು ಗುಂಪಿನ ಬಗ್ಗೆ ನಮಗೆ ಮಾಹಿತಿ ಇಲ್ಲ.**
**- ಎಂ.ವಿ.ಅಂಜಿನಪ್ಪ, ಅಧ್ಯಕ್ಷರು, ಬ್ಲಾಕ್ ಕಾಂಗ್ರೆಸ್, ಹರಪನಹಳ್ಳಿ.**

ವಿಧಾನಸಭಾ ಚುನಾವಣೆ ಮುಗಿದು ಒಂದುವರೆ ವರ್ಷ ಕಳೆದರೂ ಕಾಂಗ್ರೆಸ್ ಪಕ್ಷದಲ್ಲಿ ಭಿನ್ನಮತ, ಗೊಂದಲ ಮುಗಿದಿರುವುದಿಲ್ಲ, ಇದರಿಂದ ಮುಂಬರುವ ತಾ.ಪಂ, ಜಿ.ಪಂ ಚುನಾವಣೆಯಲ್ಲಿ, ಪಕ್ಷದ ವರಿಷ್ಠರು ಈ ಬಗ್ಗೆ ಗಮನ ಹರಿಸಬೇಕೆಂಬುದು ಕಾಂಗ್ರೆಸ್ ಕಾರ್ಯಕರ್ತರ ಅಳಲು.

# ಹರಿಹರದಲ್ಲಿ ಶ್ರೀ ವಿಠ್ಠಲ ರುಕ್ಮಿಣಿ ದಿಂಡಿ ಮಹೋತ್ಸವ




ಹರಿಹರ, ಡಿ. 21 - ನಗರದ ವಿರಕ್ತಮಠದ ಹತ್ತಿರದ ಎಸ್.ಎಸ್.ಕೆ. ಸಮಾಜದ ಶ್ರೀ ವಿಠ್ಠಲ ರುಕ್ಮಿಣಿ ದೇವಸ್ಥಾನದಲ್ಲಿ ನಾಳೆ ದಿನಾಂಕ 22 ರಿಂದ 27 ರವರೆಗೆ ಶ್ರೀ ವಿಠ್ಠಲ ರುಕ್ಮಿಣಿ ದಿಂಡಿ ಮಹೋತ್ಸವ ಹಾಗೂ ನಾಮ ಸಪ್ತಾಹ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಎಸ್.ಎಸ್.ಕೆ. ಸಮಾಜದ ಹಂಗಾಮಿ ಅಧ್ಯಕ್ಷ ಮೋಹನ್ ಖಿರೋಜಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ನಡೆದ ಪತ್ರಿಕಾ ಗೋಷ್ಠಿಯಲ್ಲಿ ಅವರು ಮಾತನಾಡಿದರು. ಹ.ಭ.ಪ. ಶ್ರೀ ಜಗನ್ನಾಥ್‌ರಾವ್ ಬೊಂಗಾಳೆ ಇವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಶ್ರೀ ಗ್ರಂಥರಾಜ ಜ್ಞಾನೇಶ್ವರಿ ಪಾರಾಯಣ ಪ್ರತಿ ನಿತ್ಯ ಬೆಳಿಗ್ಗೆ 5.30 ರಿಂದ ಕಾಕಾಡಾರತಿ, ಭಜನೆ ನಡೆಯುತ್ತದೆ. ನಾಳೆ ದಿನಾಂಕ 22 ರಂದು ಕುರುಹಿನ ಶೆಟ್ಟಿ ಮಹಿಳಾ ಮಂಡಳಿ ವತಿಯಿಂದ ಭಜನೆ, ದಿನಾಂಕ 23ಕ್ಕೆ ದತ್ತಪಾದುಕಾ ಮಹಿಳಾ ಮಂಡಳಿಯವರಿಂದ ಭಜನೆ, ದಿನಾಂಕ 24ಕ್ಕೆ ಸೀತಾರಾಮ ಭಜನಾ ಮಂಡಳಿಯವರಿಂದ ಭಜನೆ, ದಿ. 25ಕ್ಕೆ ಭಗವತೀ ಮಾತೃ ಮಂಡಳಿ ಭಜನೆ, ವಿಷ್ಣು ಸಹಸ್ರನಾಮ, ದಿ. 26ಕ್ಕೆ ಜಾನಾಬಾಯಿ ಭಜನೆ ವಿಷ್ಣು ಸಹಸ್ರನಾಮ ಜರುಗಲಿದೆ.

ಎಸ್.ಎಸ್.ಕೆ. ಸಮಾಜದ ಕಾರ್ಯದರ್ಶಿ ತುಳಜಪ್ಪ ಭೂತೆ ಮಾತನಾಡಿ, ದಿನಾಂಕ 25 ರಂದು ಸಂಜೆ 6 ಗಂಟೆಗೆ ಮೈಸೂರಿನ ಆಕಾಶವಾಣಿ ಮತ್ತು ದೂರದರ್ಶನ ಕಲಾವಿದರಾದ ರಾಜೇಶ್ ಪಡಿಯರ್, ಹಾಗೂ ತುಕಾರಾಮ್ ರಾವ ರಂಗದೋಳ ಶಿವಮೊಗ್ಗ, ಬಿ.ಎಂ. ಸುರೇಶ್ ಬಿಜಾಪುರ ಇವರಿಂದ ಸಂತವಾಣಿ, ದಿ. 26 ರಂದು ಸಂಜೆ 5.30ಕ್ಕೆ ಹ,ಭ,ಪ ಶ್ರೀ ಬದ್ರಿನಾಥ ಉತ್ತರಕರ್ ಭದ್ರಾವತಿ ಇವರಿಂದ ಪ್ರವಚನ, 7 ಗಂಟೆಯಿಂದ ಕೀರ್ತನೆ, ರಾತ್ರಿ 10.30 ರಿಂದ ಹ.ಭ.ಪ. ಆರಂಭ ಕೆ. ಟಿಕಾರೆ ರಾಣೆಬೇನ್ನೂರು, ಹ.ಭ.ಪ. ಬದ್ರಿನಾಥ್ ಉತ್ತರಕರ್ ಭದ್ರಾವತಿ ಇವರಿಂದ ಬಾರೂಡ ಕಾರ್ಯಕ್ರಮ, ರಾತ್ರಿ 12ಕ್ಕೆ ಹರಿಹರ ದಾವಣಗೆರೆ ಎಸ್.ಎಸ್.ಕೆ. ಭಜನಾ ಮಂಡಳಿ, ನಾಮದೇವ ಶಿಂಪಿ ಸಮಾಜ, ಭಾವಸಾರ ಕ್ಷತ್ರಿಯ ಸಮಾಜ, ಗೋಂಧಳಿ ಸಮಾಜದವರಿಂದ, ಪಾವುಲು ಭಜನೆ, ಪುಗಡೆ ಭಜನೆ ಹಾಗೂ ಜಾಗರಣೆ ನಡೆಯಲಿದ್ದು, ಮೃದಂಗ ಹ.ಭ.ಪ. ಚಂದ್ರಕಾಂತ ಗಣಾಚಾರಿ ಗೋಂಧಳಿ, ಶ್ರೀ ಕೃಷ್ಣ ಬುಲ್ ಬುಲೆ, ಹಾಗೂ ಶ್ರೀಕಾಂತ್ ಗಡ್ಡಾಳೆ ದಾವಣಗೆರೆ, ಭರತೇಶ್ ಖಮಿತ್ಕರ್ ದಾವಣಗೆರೆ ನಡೆಯಲಿದೆ.

ದಿ. 27 ರಂದು ಬೆಳಗ್ಗೆ 5.30 ಕ್ಕೆ ಕಾಕಾಡಾರತಿ ಭಜನೆ, ಜ್ಞಾನೇಶ್ವರಿ ಪಾರಾಯಣ ಉದ್ಯಾಪನಾ, ಬೆಳಗ್ಗೆ 8.30ಕ್ಕೆ ಶ್ರೀ ವಿಠ್ಠಲ ರುಕ್ಮಿಣಿ ದೇವರ ದಿಂಡಿ ಉತ್ಸವದ ಮೆರವಣಿಗೆ, 1.30ಕ್ಕೆ ಶ್ರೀ ಸಂತ ಪೂಜಾ, ಮಹಾಮಂಗಳಾರತಿ ಮಹಾಪ್ರಸಾದ ವಿನಿಯೋಗ, ದಿ. 29 ರಂದು ಸಂಜೆ 6 ಗಂಟೆಗೆ ಗೋಪಾಳ ಕಾಲ ನಡೆಯಲಿದೆ.

ಈ ಸಂದರ್ಭದಲ್ಲಿ ಎಸ್.ಎಸ್.ಕೆ. ಸಮಾಜದ ನಿರ್ದೇಶಕ ಶ್ರೀಕಾಂತ್ ಮೆಹರ್ವಾಡೆ, ವಿನಾಯಕ ಎಂ. ಲದ್ವಾ, ಗಣೇಶ ಮೆಹರ್ವಾಡೆ ನಲ್ಲಿ, ಮೈಲಾರ ಲಿಂಗಸಾ ಹೆಚ್. ಕಾಟ್ವೆ, ಶಂಭುಸಾ ಮೆಹರ್ವಾಡೆ, ಕೃಷ್ಣ ಪಿ. ರಾಜೋಳ್ಳಿ, ದುರ್ಗಾಸಾ ಇತರರು ಹಾಜರಿದ್ದರು,

# ಕ್ರಿಸ್‌ಮಸ್ ಹಬ್ಬ : ವಿಶೇಷ ರೈಲುಗಳ ಸಂಚಾರ



ಕ್ರಿಸ್ಮಸ್ ಹಬ್ಬ ಮತ್ತು ಹೊಸ ವರ್ಷದ ಸಂದರ್ಭದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ನಿಯಂತ್ರಿಸಲು ಹುಬ್ಬಳ್ಳಿ-ಎಸ್‌ಎಂವಿಟಿ ಬೆಂಗಳೂರು ಮತ್ತು ವಾಸ್ಕೋ ಡ ಗಾಮಾ-ಎಸ್‌ಎಂವಿಟಿ ಬೆಂಗಳೂರು ನಿಲ್ದಾಣಗಳ ನಡುವೆ ವಿಶೇಷ ಎಕ್ಸ್ ಪ್ರೆಸ್ ರೈಲುಗಳನ್ನು ನೈಋತ್ಯ ರೈಲ್ವೆ ಓಡಿಸಲಿದೆ.

ವಿಶೇಷ ರೈಲುಗಳ ವಿವರಗಳು ಈ ಕೆಳಗಿನಂತಿವೆ:

**ಎಸ್‌ಎಂವಿಟಿ ಬೆಂಗಳೂರು-ವಾಸ್ಕೋ-ಡ-ಗಾಮಾ ನಡುವೆ ಎರಡು ಟ್ರಿಪ್ ವಿಶೇಷ (07306/07307) ರೈಲು ಸಂಚಾರ :** ರೈಲು ಸಂಖ್ಯೆ 07306 ಎಸ್‌ಎಂವಿಟಿ ಬೆಂಗಳೂರು-ವಾಸ್ಕೋ ಡ ಗಾಮಾ ವಿಶೇಷ ಎಕ್ಸ್ ಪ್ರೆಸ್ ರೈಲು ಡಿಸೆಂಬರ್ 22 ರಂದು ಎಸ್‌ಎಂವಿಟಿ ಬೆಂಗಳೂರಿನಿಂದ ಸಂಜೆ 6:15ಕ್ಕೆ ಹೊರಟು, ಮರುದಿನ ವಾಸ್ಕೋ ಡ ಗಾಮಾ ನಿಲ್ದಾಣವನ್ನು ಬೆಳಿಗ್ಗೆ 8:45ಕ್ಕೆ ತಲುಪಲಿದೆ.

ಮರಳಿ ಇದೆ ರೈಲು (07307) ಡಿಸೆಂಬರ್ 23, 2024 ರಂದು ವಾಸ್ಕೋ ಡ ಗಾಮಾ ನಿಲ್ದಾಣದಿಂದ ಬೆಳಿಗ್ಗೆ 10 ಗಂಟೆಗೆ ಹೊರಟು, ಅದೇ ದಿನ ರಾತ್ರಿ 11:55ಕ್ಕೆ ಎಸ್‌ಎಂವಿಟಿ ಬೆಂಗಳೂರು ತಲುಪಲಿದೆ.

**ಎಸ್‌ಎಂವಿಟಿ ಬೆಂಗಳೂರು-ವಾಸ್ಕೋ-ಡ-ಗಾಮಾ ನಡುವೆ ಒಂದು ಟ್ರಿಪ್ ವಿಶೇಷ (07308/07309) ರೈಲು ಸಂಚಾರ :** ರೈಲು ಸಂಖ್ಯೆ 07308 ಎಸ್‌ಎಂವಿಟಿ ಬೆಂಗಳೂರು-ವಾಸ್ಕೋ ಡ ಗಾಮಾ ವಿಶೇಷ ಎಕ್ಸ್ ಪ್ರೆಸ್ ರೈಲು ಡಿಸೆಂಬರ್ 24, 2024 ರಂದು ಎಸ್‌ಎಂವಿಟಿ ಬೆಂಗಳೂರಿನಿಂದ ರಾತ್ರಿ 8:30ಕ್ಕೆ ಹೊರಟು, ಮರುದಿನ ಮಧ್ಯಾಹ್ನ 12:00 ಗಂಟೆಗೆ ವಾಸ್ಕೋ ಡ ಗಾಮಾ ನಿಲ್ದಾಣವನ್ನು ತಲುಪಲಿದೆ.

ವಾಪಸು, ರೈಲು ಸಂಖ್ಯೆ 07309 ವಾಸ್ಕೋ ಡ ಗಾಮಾ-ಎಸ್‌ಎಂವಿಟಿ ಬೆಂಗಳೂರು ವಿಶೇಷ ಎಕ್ಸ್ ಪ್ರೆಸ್ ರೈಲು ಡಿಸೆಂಬರ್ 29, 2024 ರಂದು ವಾಸ್ಕೋ ಡ ಗಾಮಾದಿಂದ ಮಧ್ಯಾಹ್ನ 2:30 ಕ್ಕೆ ಹೊರಟು, ಮರುದಿನ ಬೆಳಿಗ್ಗೆ 5:15 ಕ್ಕೆ ಎಸ್‌ಎಂವಿಟಿ ಬೆಂಗಳೂರು ತಲುಪಲಿದೆ.

**ಎಸ್‌ಎಂವಿಟಿ ಬೆಂಗಳೂರು-ವಾಸ್ಕೋ-ಡ-ಗಾಮಾ ನಡುವೆ ಒಂದು ಟ್ರಿಪ್ ವಿಶೇಷ (07310/07311) ರೈಲು ಸಂಚಾರ :** ರೈಲು ಸಂಖ್ಯೆ 07310 ಎಸ್‌ಎಂವಿಟಿ ಬೆಂಗಳೂರು-ವಾಸ್ಕೋ ಡ ಗಾಮಾ ವಿಶೇಷ ಎಕ್ಸ್ ಪ್ರೆಸ್ ರೈಲು ಡಿಸೆಂಬರ್ 30, 2024 ರಂದು ಎಸ್‌ಎಂವಿಟಿ ಬೆಂಗಳೂರಿನಿಂದ ರಾತ್ರಿ 8:30ಕ್ಕೆ ಹೊರಟು, ಮರುದಿನ ಮಧ್ಯಾಹ್ನ 12:00 ಗಂಟೆಗೆ ವಾಸ್ಕೋ ಡ ಗಾಮಾ ನಿಲ್ದಾಣವನ್ನು ತಲುಪಲಿದೆ.

ಪುನಃ ಇದೇ ರೈಲು (07311) ಜನವರಿ 1, 2025 ರಂದು ವಾಸ್ಕೋ ಡ ಗಾಮಾದಿಂದ ರಾತ್ರಿ 10:00 ಗಂಟೆಗೆ ಹೊರಟು, ಮರುದಿನ ಮಧ್ಯಾಹ್ನ 12:00 ಗಂಟೆಗೆ ಎಸ್‌ಎಂವಿಟಿ ಬೆಂಗಳೂರು ತಲುಪಲಿದೆ.

ರೈಲುಗಳ ಸಂಖ್ಯೆ 07306/07307, 07308/07309 & 07310/07311 ಈ ರೈಲುಗಳು ಎರಡೂ ಮಾರ್ಗಗಳಲ್ಲಿ ತುಮಕೂರು, ತಿಪಟೂರು, ಅರಸೀಕೆರೆ, ಬೀರೂರು, ದಾವಣಗೆರೆ, ಹರಿಹರ, ರಾಣಿಬೆನ್ನೂರು, ಎಸ್‌ಎಂಎಂ ಹಾವೇರಿ, ಎಸ್‌ಎಸ್‌ಎಸ್ ಹುಬ್ಬಳ್ಳಿ, ಧಾರವಾಡ, ಲೋಂಡಾ, ಕ್ಯಾಸಲ್ ರಾಕ್, ಕುಲೆಮ್, ಸಾನ್ವೊರ್ಡೆಮ್ ಮತ್ತು ಮಡಗಾಂವ್ ನಿಲ್ದಾಣಗಳಲ್ಲಿ ನಿಲ್ಲಲಿವೆ.

ಈ ರೈಲುಗಳಲ್ಲಿ ಎರಡು ಎಸಿ ಟು ಟೈರ್ ಬೋಗಿಗಳು, ಹದಿನೈದು ಎಸಿ ತ್ರಿ ಟೈರ್ ಬೋಗಿಗಳು ಮತ್ತು ಎರಡು ಲಗೇಜ್ / ಜನರೇಟರ್ / ಬ್ರೇಕ್ ವ್ಯಾನ್ ಗಳು ಇರಲಿವೆ.

ಪ್ರಯಾಣಿಕರು ಅಧಿಕೃತ (www.enquiry.indianrail.gov.in) ವೆಬ್‌ಸೈಟ್‌ಗೆ ಭೇಟಿ ನೀಡಿ, NTES ಅಪ್ಲಿಕೇಶನ್ ಬಳಸಿ ಅಥವಾ 139 ನಂಬರಗೆ ಡಯಲ್ ಮಾಡುವ ಮೂಲಕ ಈ ರೈಲುಗಳ ಪ್ರತಿ ನಿಲ್ದಾಣದ ಆಗಮನ/ನಿರ್ಗಮನ ಸಮಯ ಮತ್ತು ಇತರ ಮಾಹಿತಿಯನ್ನು ನೈರುತ್ಯ ರೈಲ್ವೆಯ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ. ಮಂಜುನಾಥ ಕನಮಡಿ ತಿಳಿಸಿದ್ದಾರೆ.


## ಮಾನ್ಯ ಭೂ-ದಾಖಲೆಗಳ ಜಂಟಿ ನಿರ್ದೇಶಕರ ನ್ಯಾಯಾಲಯ

**ಬೆಂಗಳೂರು/ದಾವಣಗೆರೆ**

ಭೂ.ಉ.ನಿ. ರಿವಿಜನ್. ಅಪೀಲು ನಂ.: 35/2024-25

ಅಪೀಲುದಾರರು : : ಸುವರ್ಣಮ್ಮ ಮತ್ತು ಇತರರು - ವಿರುದ್ಧ -

ಎದುರುದಾರರು : ಮಾನ್ಯ ಭೂದಾಖಲೆಗಳ ಸಹಾಯಕ ನಿರ್ದೇಶಕರು, ದಾವಣಗೆರೆ ಹಾಗೂ ಇತರರು

### ಪತ್ರಿಕಾ ಪ್ರಕಟಣಾ ನೋಟೀಸು

ಮೇಲ್ಕಂಡ ಮೇಲ್ಮನವಿದಾರರು ಮಾನ್ಯ ಘನ ನ್ಯಾಯಾಲಯದಲ್ಲಿ ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು, ಸಂತೆಬೆನ್ನೂರು-1 ನೇ ಹೋಬಳಿ, ಕೋಗಲೂರು ಗ್ರಾಮದ ಹೊಸ ಸರ್ವೇ ನಂ.183/5, 183/6, 183/7, 183/8 ಮತ್ತು ಹಳೇ ಸರ್ವೇ ನಂ.6ಎ-1ಎ ಮತ್ತು ಸರ್ವೇ ನಂ.183/6ಎ-1ಬಿ ಒಟ್ಟು ವಿಸ್ತೀರ್ಣ 27 ಗುಂಟೆ ಇದರಲ್ಲಿ 03 ಗುಂಟೆ ಖರಾಬು ಒಟ್ಟು ವಿಸ್ತೀರ್ಣ 02 ಎಕರೆ 21-1/4 ಗುಂಟೆ ಇದರಲ್ಲಿ 03 ಗುಂಟೆ ಖರಾಬು ಈ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ 1ನೇ ಪ್ರತಿವಾದಿ ಪ್ರಕರಣ ಸಂಖ್ಯೆ: ಎ.ಟಿ.ಎಲ್. ಆರ್./ಎಮ್.ಟಿ.ಆರ್.593/1992-93 ದಿನಾಂಕ: 05/11/1994 ರಂದು ಮಾಡಿರುವ ಆದೇಶದ ಕಾನೂನು ಬದ್ಧತೆ ಮತ್ತು ಔಚಿತ್ಯವನ್ನು ಪ್ರಶ್ನಿಸಿ ಸಲ್ಲಿಸಿದ್ದ ಭೂ.ಉ.ನಿ. ಅಪೀಲು 508/2024-25 ದಿನಾಂಕ: 11/06/2024 ರಂದು ಮಾನ್ಯ 2 ನೇ ಪ್ರತಿವಾದಿ ಸರ್ವೇ ನಂ.183/6ಎ-2 ರಲ್ಲಿ 01 ಎಕರೆ 08 ಗುಂಟೆ ಹಾಗೂ ಸರ್ವೇ ನಂ.183/5ಬಿ ರಲ್ಲಿ 0-08 ಗುಂಟೆ ವಿಸ್ತೀರ್ಣಕ್ಕೆ ಅಲಿನೇಷನ್ ಕೋರಿ ದುರಸ್ತಿ ಆಗಿರುವುದರಿಂದ ಪ್ರಕರಣವು ಈ ಕಚೇರಿ ವ್ಯಾಪ್ತಿಗೆ ಒಳಪಡದ ಕಾರಣ, ಸಕ್ಷಮ ಪ್ರಾಧಿಕಾರದಲ್ಲಿ ಮೇಲ್ಮನವಿ ಸಲ್ಲಿಸಿಕೊಳ್ಳಲು ಸೂಚಿಸಿ ಮೇಲ್ಮನವಿಯನ್ನು ವಜಾಗೊಳಿಸಿರುವ ಆದೇಶವನ್ನು ಪ್ರಶ್ನಿಸಿ ಹಾಗೂ ಸದರಿ ಆದೇಶದ ಮೇರೆಗೆ ಮೇಲ್ಮನವಿಯನ್ನು ಸಲ್ಲಿಸಲಾಗಿದ್ದು, ಸದರಿ ಮೇಲ್ಮನವಿಯಲ್ಲಿ ಪ್ರತಿವಾದಿ ನಂ.11 ಶ್ರೀಮತಿ ಯಶೋಧಮ್ಮ ಕೋಂ ಶ್ರೀನಿವಾಸ, ಪ್ರತಿವಾದಿ ನಂ.3 ಶ್ರೀ ಕೆ.ಟಿ. ಶಿವಕುಮಾರ ಬಿನ್ ಬಸವಲಿಂಗಪ್ಪ, ಪ್ರತಿವಾದಿ ನಂ.19(ಸಿ) ಶ್ರೀಮತಿ ಗೀತಾ ಕೋಂ ಲೇಟ್ ಬಸವರಾಜ, ಪ್ರತಿವಾದಿ ನಂ.21(ಎ) ನಿರ್ಮಲಮ್ಮ ಕೋಂ ಲೇಟ್ ಹಲಗಪ್ಪ, ಪ್ರತಿವಾದಿ ನಂ.29 (ಸಿ) ಸರೋಜಮ್ಮ ಬಿನ್ ಸಿದ್ದಲಿಂಗಪ್ಪ, ಪ್ರತಿವಾದಿ ನಂ.30 ಶ್ರೀಮತಿ ಕೆ.ಎಸ್. ಹೇಮಾವತಿ ಬಿನ್ ಶ್ರೀನಿವಾಸ ಮೂರ್ತಿ, ಪ್ರತಿವಾದಿ ನಂ.32 ಪುಟ್ಟಮ್ಮ ಕೋಂ. ಸಿದ್ದಪ್ಪ, ಪ್ರತಿವಾದಿ, ನಂ.33 ಜಿ.ಎಸ್. ಶಿವದೇವ ಬಿನ್ ಸಿದ್ದಪ್ಪ ಆದ ನೀವುಗಳು ನ್ಯಾಯಾಲಯದಿಂದ ನೋಟಿಸ್ ನೀಡಿದರೂ ಹಾಜರಾಗಿರುವುದಿಲ್ಲ. ಸದರಿ ಪ್ರಕರಣವನ್ನು ದಿನಾಂಕ : 23.12.2024 ರಂದು ತಮ್ಮ ಹಾಜರಾತಿಗಾಗಿ ನಿಗದಿಯಾಗಿದ್ದು, ಆ ದಿನ ನೀವಾಗಲೀ ಅಥವಾ ನಿಮ್ಮಿಂದ ನಿಯುಕ್ತಿಗೊಂಡ ವಕೀಲರಾಗಲೀ ಹಾಜರಾಗತಕ್ಕದ್ದು, ತಪ್ಪಿದಲ್ಲಿ ತಮ್ಮ ತಕರಾರು ಏನೂ ಇಲ್ಲ ಎಂದು ಪರಿಗಣಿಸಿ, ನಿಮ್ಮ ಅನುಪಸ್ಥಿತಿಯಲ್ಲಿ ಪ್ರಕರಣವನ್ನು ನಿರ್ಣಯಿಸಲಾಗುವುದು.

**ಮೇಲ್ಮನವಿದಾರರ ಪರ ವಕೀಲರು**
**ಸಹಿ/- ಎಂ.ಸಿ.ಎಂ. ತೀರ್ಥಪ್ಪ**
**ಸ್ಥಳ: ದಾವಣಗೆರೆ.**
**ದಿನಾಂಕ : 16/12/2024**

**ಸಹಿ/- ಪ್ರಾದೇಶಿಕ ಭೂ-ದಾಖಲೆಗಳ ಜಂಟಿ ನಿರ್ದೇಶಕರು, ಬೆಂಗಳೂರು ವಿಭಾಗ, ಬೆಂಗಳೂರು.**

## ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

**ದಾವಣಗೆರೆ ವಿಭಾಗ, ದಾವಣಗೆರೆ**

ಸಂಖ್ಯೆ: ಕರಾಸಾ/ದಾವಿ/ವಿನಿ/400/2024-25 ದಿನಾಂಕ: 20/12/2024

**"ಇ-ಹರಾಜು ಪ್ರಕಟಣೆ ಸಂಖ್ಯೆ : 02/2024-25) (CALL-02)"**

ದಾವಣಗೆರೆ ನಗರದ ಹೈಸ್ಕೂಲ್ ಮೈದಾನದಲ್ಲಿರುವ ಕ.ರಾ.ರ.ಸಾ. ನಿಗಮದ ತಾತ್ಕಾಲಿಕ ಬಸ್ ನಿಲ್ದಾಣವನ್ನು ಒಡೆದು ಹಾಕಿ ಅದರಲ್ಲಿ ಬಂದಂತಹ ಉಪಯೋಗವಾಗುವ ಸಾಮಾಗ್ರಿಗಳನ್ನು ತೆಗೆದುಕೊಂಡು ಹೋಗುವ ಬಗ್ಗೆ ಹರಾಜು ಮಾದರಿಯಲ್ಲಿ (Auction) ವಿಲೇವಾರಿ ಮಾಡಲು Auction Notification No.:02/2024-25 (Call-02) ನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಸದರಿ ಮಾಹಿತಿಯನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ "https://kppp.karnataka.gov.in " ಹಾಗೂ ನಿಗಮದ ವೆಬ್‌ಸೈಟ್ ksrtc.karnataka.gov.in ನಲ್ಲಿ ದಿನಾಂಕ 23/12/2024 ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಹೆಚ್ಚಿನ ವಿವರಗಳಿಗಾಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ವಿಭಾಗೀಯ ಕಛೇರಿ, ಕ.ರಾ.ರ.ಸಾ. ನಿಗಮ, ಕಾಮಗಾರಿ ವಿಭಾಗ, ದಾವಣಗೆರೆ ವಿಭಾಗ-577002 ಇಲ್ಲಿ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

**-: ಸಂಪರ್ಕಿಸುವ ದೂರವಾಣಿ ಸಂಖ್ಯೆ :-**

**ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು - 7760990457**

ಸಹಿ/- ವಿಭಾಗೀಯ ನಿಯಂತ್ರಣಾಧಿಕಾರಿ
ಕ.ರಾ.ರ.ಸಾ. ನಿಗಮ, ದಾವಣಗೆರೆ ವಿಭಾಗ

ವಾ.ಸಾ.ಸಂ.ಇ/ವಾಪ್ರ/3913/ಅಕಾರ್/2024-25

## ದಾವಣಗೆರೆ ಜಿಲ್ಲೆಯ ವಿದ್ಯಾವಂತ ಯುವಕರಿಗೆ ಹಾಗೂ ವಿವಾಹಿತ ಮಹಿಳಾ ಸಹೋದರಿಯರ ಗಮನಕ್ಕೆ

**ದಾವಣಗೆರೆ ಜಿಲ್ಲಾ, ಚನ್ನಗಿರಿ, ಮಲೇಬೆನ್ನೂರು, ಸಂತೇಬೆನ್ನೂರು, ಬಸವಾಪಟ್ಟಣ, ತ್ಯಾವಣಿಗೆ, ಅಜ್ಜಿಹಳ್ಳಿ, ಅಶೋಕ್ ನಗರ ಅಗರದಲ್ಲಿ, ಕೂಡ್ಲಿಗೆರೆ, ಅರೇಬಿಳಚಿ, ಕಳ್ಳಿಹಾಳ, ಬುಕ್ಕಂಬೂದಿ, ಹೊನ್ನಾಳಿ, ನ್ಯಾಮತಿ, ದಾವಣಗೆರೆ, ಬಾಡ, ಲೋಕಿಕೆರೆ, ಕಬ್ಬೂರು, ಕೊಡಗನೂರು, ತೋಳಹುಣಸೆ, ತೊಗಲೇರಿ, ಮಾಯಕೊಂಡ, ದೇವರಬೆಳಕೆರೆ ಈ ಪ್ರದೇಶಗಳಲ್ಲಿ ಆರಂಭ ಆಗುವ ನೂತನ ಶಾಖೆಗಳಿಗೆ ಅದೇ ಪ್ರದೇಶದ ಮಹಿಳೆಯರು ಹಾಗೂ ಯುವಕರಿಗೆ ಕರ್ನಾಟಕ ಸಾವಯವ ಕೃಷಿ ಯೋಜನೆ ವತಿಯಿಂದಲೇ ನೇರವಾಗಿ ಆದೇಶ ನೇಮಕಾತಿ ಆಯ್ಕೆ.**

### ಕೃಷಿ ಅಧಿಕಾರಿ ಹುದ್ದೆಗಳು - 2024

**ಅತ್ಯುತ್ತಮ ವೇತನ ನಿಮ್ಮ ನಿಮ್ಮ ಊರಿಗೆ ಅವಕಾಶ**

**ಕರ್ನಾಟಕ ಸಾವಯವ ಕೃಷಿ ಯೋಜನೆ (ರಿ.) ರಾಜ್ಯದ ಪ್ರಮುಖ ಕೃಷಿ ಸಂಸ್ಥೆಯಾಗಿದ್ದು, ಗ್ರಾಮೀಣ ಪ್ರದೇಶದ ಬಡ ಕುಟುಂಬದ ವಿದ್ಯಾವಂತ ಮಹಿಳೆಯರಿಗೆ, ಯುವಕರಿಗೆ ಅತ್ಯುತ್ತಮ ತರಬೇತಿ, ಲಿಖಿತ ಪರೀಕ್ಷೆಗಳ ಮೂಲಕ ನೇರ ಆಯ್ಕೆ ಮಾಸಿಕವಾಗಿ 25,000/- ದಿಂದ 30,000/-ದ ವರೆಗೆ ವೇತನ.**

**ವಿದ್ಯಾರ್ಹತೆ : ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಮಾತ್ರ**

**ವೇತನ ಶ್ರೇಣಿ : 21,000/- ದಿಂದ 25,000/-**

**ವಿಶೇಷ ಆದ್ಯತೆ :** ಸಂಜೀವಿನಿ ಸೇವಾ LCRP., MBK., NRLM., ಡ್ರೈವರ್, ಗ್ರಾಮೀಣಾಭಿವೃದ್ಧಿ ಯೋಜನೆ ಸ್ವ-ಸಹಾಯ ಸಂಘದ ಸೇವಾ ಪ್ರತಿನಿಧಿಗಳಾಗಿ ಕಾರ್ಯ ನಿರ್ವಹಿಸಿದ ಗ್ರಾಮೀಣ ಪ್ರದೇಶದ ವಿವಾಹಿತ ದ್ವಿ-ಚಕ್ರವಾಹನ ಸಾಮರ್ಥ್ಯ ಇರುವ ಮಹಿಳೆಯರಿಗೆ ಖಂಡಿತಾ ಅವರ ಊರಿನಲ್ಲೇ ಅತ್ಯುತ್ತಮ ಅವಕಾಶ.

**ಈಗಾಗಲೇ ಆಯ್ಕೆಯಾದ ಶಿವಮೊಗ್ಗ ಹಾಗೂ ಚಿತ್ರದುರ್ಗ ಜಿಲ್ಲೆಯ ಹಿರಿಯೂರು, ಹೊಸದುರ್ಗ, ಚಳ್ಳಕೆರೆ, ಭರಮಸಾಗರ, ಹೊಳಲ್ಕೆರೆ ಮುಂತಾದ ಕಡೆಯ ಮಹಿಳಾ ಅಧಿಕಾರಿಗಳು ಇಂದು ಯೋಜನೆ ಅಡಿಯಲ್ಲಿ ಕಳೆದ 5 ವರ್ಷಗಳಿಂದ ಅತ್ಯುತ್ತಮ ವೇತನದ ಅಡಿಯಲ್ಲಿ ತಾಲ್ಲೂಕು ಹೋಬಳಿ ಮುಖ್ಯ ಶಾಖಾ ಕಾರ್ಯ ನಿರ್ವಹಣಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿರುವ ಮತ್ತು ರಾಜ್ಯದ ದಕ್ಷಿಣಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು, ಚಿತ್ರದುರ್ಗ, ಕಾಸರಗೋಡು, ಉತ್ತರ ಕನ್ನಡ, ದಾವಣಗೆರೆ ಜಿಲ್ಲೆಗಳ ವ್ಯಾಪ್ತಿಯ ಎಲ್ಲಾ ತಾಲ್ಲೂಕು, ಹೋಬಳಿಗಳಲ್ಲಿ 250ಕ್ಕೂ ಹೆಚ್ಚಿನ ಮಹಿಳಾ ಅಧಿಕಾರಿಗಳು ಮುನ್ನಡೆಸುತ್ತಿರುವ ರಾಜ್ಯದ ಬೃಹತ್ ಕೃಷಿ ಯೋಜನೆ ಇದಾಗಿದೆ.**

**ಆಯ್ಕೆಯಾದ ಅಭ್ಯರ್ಥಿಗಳು ವಾರ್ಷಿಕವಾಗಿ 5 ರಿಂದ 7 ಲಕ್ಷದ ವರೆಗೆ ಸ್ಯಾಲರಿ ಬೋನಸ್ ಇತರೇ ಸೌಲಭ್ಯ ಪಡೆಯುತ್ತಾರೆ. ಆಸಕ್ತ ಮಹಿಳೆಯರು, ಯುವಕರು ತಮ್ಮದೇ ಊರಿನಲ್ಲಿ ಅವಕಾಶಕ್ಕಾಗಿ ತರಬೇತಿ ಅಧಿಕಾರಿಗಳನ್ನು ಸಂಪರ್ಕಿಸಿ.**

**ಆಸಕ್ತರು ತಮ್ಮ ತಮ್ಮ ಬಯೋಡಾಟ ಫೋಟೋ ಹಾಗೂ ತಾವು ಯಾವ ಊರಿಗೆ ಅವಕಾಶ ಕೇಳುವಿರಿ ಬರೆದು ಈ ವಾಟ್ಸ್ಯಾಪ್ ನಂಬರಿಗೆ 7022560060 ಕಳುಹಿಸಿ.**

**ದಾವಣಗೆರೆಯ ಚನ್ನಗಿರಿಯಲ್ಲಿ ಆಸಕ್ತ ಅಭ್ಯರ್ಥಿ ಅಧಿಕಾರಿಗಳಿಗೆ ತರಬೇತಿ ವ್ಯವಸ್ಥೆ ಮಾಡಲಾಗುವುದು.**

ಹೆಚ್ಚಿನ ಮಾಹಿತಿಗಾಗಿ : **ಕರ್ನಾಟಕ ಸಾವಯವ ಕೃಷಿ ಯೋಜನೆ (ರಿ.)**
**ಯೂನಿಯನ್ ಬ್ಯಾಂಕ್ ಹತ್ತಿರ, ಬಿ.ಸಿ. ರೋಡ್, ಬಂಟ್ವಾಳ ದ.ಕ.**
**ಮೊ. : 70225 60060, 99017 63784**
***ದಕ್ಷಿಣ ಕನ್ನಡ, ಉಡುಪಿ, ಕಾಸರಗೋಡು, ಕೇರಳ, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರಕನ್ನಡ, ಚಿತ್ರದುರ್ಗ, ದಾವಣಗೆರೆ.***

## ಆಸ್ತಿ ಮಾರಾಟ ಕುರಿತು

ದಾವಣಗೆರೆ ನಗರದ ತರಳಬಾಳು ಬಡಾವಣೆಯಲ್ಲಿ ಬರುವ #ನಂ. 1127ರಲ್ಲಿ ವಾಸಿಯಾಗಿರುವ ಶ್ರೀ ವೀರೇಶ್ ಎಸ್. ಬಿರಾದಾರ, ಮತ್ತು ಅವರ ಮಕ್ಕಳಾದ ಅಭಿಷೇಕ್ ವಿ., ಸಚೇತಾ ವಿ. ರವರುಗಳಾದ ನಾವುಗಳು ನಮಗೆ ಬಂದಂತಹ ಆಸ್ತಿಯಾದ ಮಹಾನಗರ ಪಾಲಿಕೆ ವ್ಯಾಪ್ತಿಗೆ ಸಂಬಂಧಿಸಿದ ವಿಜಯ ನಗರ ಬಡಾವಣೆ, ಡಾನ್ ಬಾಸ್ಕೋ ಪಕ್ಕದಲ್ಲಿ ಬರುವ ಮುನ್ಸಿಪಲ್ ಡೋರ್ ನಂ.1299-111, ಅಳತೆ 30x43+45/2 ಅಡಿ ಜಾಗವನ್ನು ಮಾರಾಟ ಮಾಡುತ್ತಿದ್ದು, ಸದರಿ ಆಸ್ತಿಯು ನಮ್ಮಗಳಿಗೆ ಶ್ರೀಮತಿ ಶಕುಂತಲಾ @ ವರ್ಷಿತ ಕೋಂ ವೀರೇಶ್ ಎಸ್. ಬಿರಾದಾರ್ ಅವರು ಆಕಸ್ಮಿಕ ಮರಣಾ ನಂತರ ಪೌತಿ ಖಾತೆ ಆಧಾರದ ಮೂಲಕ ಬಂದಿರುತ್ತದೆ. ಸದರಿ ಆಸ್ತಿಯನ್ನು ನಾವುಗಳು ದಾವಣಗೆರೆ ವ್ಯಾಪ್ತಿಯಲ್ಲಿ ಬರುವ ರಾಜೀವ್ ಗಾಂಧಿ ಬಡಾವಣೆ, 1ನೇ ಮೇನ್, 3ನೇ ಕ್ರಾಸ್, ಮನೆ ನಂಬರ್ 35/1ರಲ್ಲಿ ವಾಸಿಯಾದ ಶ್ರೀ ಮಹಮ್ಮದ್ ರಫಿ ಬಿನ್ ಫೀರ್‌ಸಾಬ್ ಅವರಿಗೆ ಮಾರಾಟ ಮಾಡುತ್ತಿದ್ದು, ಶ್ರೀಮತಿ ಶಕುಂತಲಾ @ ವರ್ಷಿತ ಕೋಂ ವೀರೇಶ್ ಎಸ್. ಬಿರಾದಾರ್ ಕಡೆಯವರು ಯಾರಾದರೂ ತಂಟೆ-ತಕರಾರು ಇದ್ದರೆ ಈ ಕೆಳಗೆ ನಮೂದಿಸಿದ ನಂಬರ್‌ಗೆ ಕರೆ ಮಾಡಿ ತಿಳಿಸಬಹುದು.

**ಮಹಮ್ಮದ್ ರಫಿ**
**81971 52852**
**91647 85777**

ಸಹಿ/-
**ವೀರೇಶ್ ಎಸ್. ಬಿರಾದಾರ್ 98805 85211**
**ಅಭಿಷೇಕ್ ವಿ. - 96066 76805, ಸಚೇತಾ ವಿ.**

## ಆಸ್ತಿಗೆ ತಂಟೆ ತಕರಾರು ಕುರಿತು ಆಸ್ತಿ ಮಾರಾಟಕ್ಕೆ ತೆಗೆದುಕೊಳ್ಳುವ ಬಗ್ಗೆ

ದಾವಣಗೆರೆ ವಾಸಿಯಾದ ಶ್ರೀ ಮಹಮ್ಮದ್ ರಫಿ ಬಿನ್ ಲೇಟ್ ಫೀರ್‌ಸಾಬ್ ನಂ. 35/1, 1ನೇ ಮೇನ್, 3ನೇ ಕ್ರಾಸ್, ರಾಜೀವ್ ಗಾಂಧಿ ಬಡಾವಣೆಯಲ್ಲಿದ್ದು, ಸದರಿ ನಾನು ವೀರೇಶ್ ಎಸ್. ಬಿರಾದಾರರವರು ಮತ್ತು ಮಕ್ಕಳಿಗೆ ಸಂಬಂಧಿಸಿದ ಆಸ್ತಿಯಾದ ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯೊಳಗೆ ಬರುವ ವಿಜಯನಗರ ಬಡಾವಣೆ, ಡಾನ್ ಬಾಸ್ಕೋ ಪಕ್ಕದಲ್ಲಿರುವ (ಆರ್‌ಟಿಓ ಆಫೀಸ್ ಹತ್ತಿರ) ಮುನ್ಸಿಪಲ್ ಡೋರ್ ನಂ. 1299-111 ಅಳತೆ : 30x43+45/2 ಅಡಿ ಜಾಗವನ್ನು ದಾವಣಗೆರೆ ವಾಸಿಯಾದ ಹಾಗೂ ತರಳಬಾಳು ಬಡಾವಣೆಯ ಮನೆ ನಂ. 1127ರಲ್ಲಿ ಇದ್ದು ಸದರಿಯವರ ಅವರ ಹೆಂಡತಿಯಾದ ಶ್ರೀಮತಿ ಶಕುಂತಲ @ ವರ್ಷಿತಾರವರ ಮರಣ ನಂತರ ಪೌತಿ ಆಧಾರದ ಮೇಲೆ ಬಂದಂತಹ ಆಸ್ತಿಯನ್ನು ಮಾರಾಟ ಮಾಡುತ್ತಿದ್ದು, ಸದರಿ ಆಸ್ತಿಯನ್ನು ನಾನು ಖರೀದಿ ಮಾಡುತ್ತಿದ್ದೇನೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಶ್ರೀಮತಿ ಶಕುಂತಲಾ @ ವರ್ಷಿತಾರವರ ಕಡೆಯವರು ಯಾರಾದಾದರೂ ತಕರಾರು ಇದ್ದರೆ ಈ ಕೆಳಗೆ ನಮೂದಿಸಿದ ಮೊಬೈಲ್ ನಂಬರ್‌ಗಳಿಗೆ ತಿಳಿಸತಕ್ಕದ್ದು.

ಸಹಿ/- **ಮಹಮ್ಮದ್ ರಫಿ ಬಿನ್ ಲೇಟ್ ಫೀರ್‌ಸಾಬ್**
**81971 52852, 91647 85777**

## ಸಾರ್ವಜನಿಕ ತಿಳುವಳಿಕೆಗೆ

ನನ್ನ ಕಕ್ಷಿದಾರರಾದ ಸಂತೋಷ ತಂದೆ ಡಿ. ಶೇಟ್ ದಾವಣಗೆರೆ ಇವರು ಕೆಳಕಂಡ ಷೆಡ್ಯೂಲ್ ಆಸ್ತಿಯನ್ನು ಜೆ.ಎನ್. ರವಿಚಂದ್ರ ಬಿನ್ ಜೆ.ಸಿ.ನಿಜಲಿಂಗಪ್ಪ ಇವರಿಂದ ಖರೀದಿಸಲು ಇಚ್ಛಿಸಿದ್ದು, ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಯಾರಿಗಾದರೂ ಹಕ್ಕು, ಬಾಧ್ಯತೆಗಳು ಅಥವಾ ತಕರಾರು ಇದ್ದಲ್ಲಿ ಈ ಪ್ರಕಟಣೆಯಾದ 7 ದಿನಗಳೊಳಗಾಗಿ ತಕರಾರನ್ನು ದಾಖಲೆಗಳೊಂದಿಗೆ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾವುದೇ ಹಕ್ಕು ಬಾಧ್ಯತೆ ಅಥವಾ ತಕರಾರು ಇರುವುದಿಲ್ಲ ಎಂದು ಪರಿಗಣಿಸಲಾಗುವುದು.

ಷೆಡ್ಯೂಲ್ : ದಾವಣಗೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಅಧಿಕಾರಕ್ಕೆ ಒಳಪಟ್ಟ, ದಾವಣಗೆರೆ ನಗರ, 5ನೇ ವಾರ್ಡ್, 10ನೇ ಡಿವಿಷನ್, ಎಂ.ಸಿ.ಸಿ. "ಎ" ಬ್ಲಾಕ್‌ನಲ್ಲಿ ಬರತಕ್ಕ, ಮುನ್ಸಿಪಲ್ ಸೈಟ್ ನಂ. 608, ಡೋರ್ ನಂ. 2708 (ಹೊಸ ಸಂಖ್ಯೆ 2308), ಇ-ಸ್ವತ್ತು ಸಂಖ್ಯೆ 28.2.512.08, ಅಳತೆ 44x60ft (18.28x13.14mtrs). ಉಳ್ಳ ಪೂರಾ ಜಾಗ ಮತ್ತೆ ಸದರಿ ಜಾಗದಲ್ಲಿ ಕಟ್ಟಿಸಿರುವ ನೆಲ ಮತ್ತು ಮೊದಲ ಮಹಡಿ ವಾಸದ ಮನೆ ಸಹಿತವಾದ ಸ್ವತ್ತಿಗೆ ಚೆಕ್ಕುಬಂದಿ :

**ಪೂರ್ವ : ರಸ್ತೆ, ಪಶ್ಚಿಮ : ಕನ್ಸರ್‌ವೆನ್ಸಿ ರಸ್ತೆ, ಉತ್ತರ ಸೈಟ್ ನಂ. 609, ದಕ್ಷಿಣ ಸೈಟ್ ನಂ. 607**

**ಸಹಿ /- ಕೆ.ಬಿ. ಶೈಲಶ್ರೀ, B.Sc.,LLB., ವಕೀಲರು**
**KAR. 70/98, #1963, SS ಲೇಔಟ್, ಎ ಬ್ಲಾಕ್, ಇನ್‌ಡೋರ್ ಸ್ಟೇಡಿಯಂ ರೋಡ್, ದಾವಣಗೆರೆ-4. ಫೋ. : 94486 58502**

## ನಗರದಲ್ಲಿ ಇಂದು ಪೋಷಕರಿಗೆ ಕಾರ್ಯಾಗಾರ

ಯುವ ಜನರನ್ನು ಸಶಕ್ತಗೊಳಿಸುವ ನಿಟ್ಟಿನಲ್ಲಿ ಸಹಾಯಕ ನಿರ್ದೇಶಕರ ಕಚೇರಿ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಜಿಲ್ಲಾ ಕ್ರೀಡಾಂಗಣ ಇಲ್ಲಿ ಪೋಷಕರಿಗೆ ವಿಶೇಷ ಕಾರ್ಯಾಗಾರವನ್ನು ಇಂದು ಆಯೋಜಿಸಲಾಗಿದೆ. ವಿವರಕ್ಕೆ ದೂರವಾಣಿ 08192-222059, 9008343253 ನ್ನು ಸಂಪರ್ಕಿಸಲು ಇಲಾಖೆಯ ಸಹಾಯಕ ನಿರ್ದೇಶಕರಾದ ರೇಣುಕಾದೇವಿ ಅವರು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.


ಸೈಟು 20x30, 30x40, 40x60
ಸೈಟು ಖರೀದಿಗೆ/ ಮನೆ ಖರೀದಿಗೆ/ ಮನೆ ಬಾಡಿಗೆಗೆ/ ಲೀಜ್‌ಗೆ
ಸಂಪರ್ಕಿಸಿ: 8088292977

ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರುಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
ಭೇಟಿಯ ಸಮಯ : ಬೆ. 9 ರಿಂದ ಮಧ್ಯಾಹ್ನ 3 ಹಾಗೂ ಸಂಜೆ 7.30 ರಿಂದ 8.30
By Appointment only.
94837 23166

ಬೇಕಾಗಿದ್ದಾರೆ
ಪಿಯುಸಿ ಆಗಿರುವ ಹುಡುಗಿಯರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಬಯೋಡಾಟಾ, ಪರಿಚಯಸ್ಥರೊಂದಿಗೆ ಸಂಪರ್ಕಿಸಿ :
ಆರ್ಚೀಸ್ ಗ್ಯಾಲರಿ
ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ.
ಮೊ : 96324-33166

ಸೈಟ್ ಮಾರಾಟಕ್ಕೆ (KHB)
ಕರ್ನಾಟಕ ಗೃಹ ಮಂಡಳಿ
120 ಅಡಿ ರಸ್ತೆ ಹಿಂಭಾಗ 40x60 ಸೌತ್ 40 ಅಡಿ ರಸ್ತೆಗೆ
ಓನರ್ : 96633 35235
ಮಧ್ಯವರ್ತಿಗಳಿಗೆ ಅವಕಾಶ ಇಲ್ಲ

ಸೈಟು ಮಾರಾಟಕ್ಕಿದೆ
ಡಾಲರ್ಸ್ ಕಾಲೋನಿ ಮಹಾರಾಜ ಡಾಬ ಎದುರುಗಡೆ ರೋಡ್ ಸೈಟಿನ ಅಳತೆ 40x84 (2ಸೈಟುಗಳು) ದಕ್ಷಿಣ ಮುಖ
96326 67135, 96068 33650

ಹುಡುಗರು ಬೇಕಾಗಿದ್ದಾರೆ
APMC Yard, Dvg. Tally ಗೊತ್ತಿರುವವರು ಹುಡುಗರು Computer Operator Part time job
98444 36836
88014 89258

ಬೇಕಾಗಿದ್ದಾರೆ
ಮೂರು ಮಹಡಿ ಹೊಂದಿರುವ ಮನೆಯನ್ನು ನೋಡಿಕೊಂಡು ಹೋಗಲು ಚಿಕ್ಕ ಕುಟುಂಬ ಇರುವವರು ಬೇಕಾಗಿದ್ದಾರೆ. ಸಂಪರ್ಕಿಸಿ:
96118 66449

ಜಮೀನು ಮಾರಾಟಕ್ಕಿದೆ
ಜನರಲ್ ಪ್ರಾಪರ್ಟಿ 1.5 ಎಕರೆ ಖಾಲಿ ಹೊಲ, NH4 ನಿಂದ 3ನೇ ಹೊಲ, ಹುಣಸೇಕಟ್ಟೆ ಗ್ರಾಮ, ಹೆಬ್ಬಾಳು ಟೋಲ್‌ನಿಂದ 2 ಕಿಮೀ, ದಾವಣಗೆರೆ.
82176 55264, 87926 56289

ಬೇಕಾಗಿದ್ದಾರೆ
ದಾವಣಗೆರೆಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗೆ ಟೆಲಿಕಾಲರ್ಸ್, ಅಡ್ಮಿಷನ್ ಕೌನ್ಸಿಲರ್, PRO ಬೇಕಾಗಿದ್ದಾರೆ.
90360 19427
99459 63733

ವಧು ಬೇಕಾಗಿದೆ
2ನೇ ಸಂಬಂಧಕ್ಕೆ ಹಿಂದೂ ಲಿಂಗಾಯತ SSLC/PUC ಓದಿರುವ ಅಥವಾ ವಿದ್ಯಾರ್ಹತೆ ಅಗತ್ಯವಿಲ್ಲ ಹಾಗೂ ಮನೆ ಕೆಲಸಕ್ಕೆ ಬೇಕಾಗಿದ್ದಾರೆ.
80731 24002

ಸೈಟು ಮಾರಾಟಕ್ಕಿದೆ
ಹಳೇ ಕುಂದುವಾಡ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹಿಂಭಾಗ ಪಶ್ಚಿಮ ರಸ್ತೆ, (ಪೂರ್ವಕ್ಕೂ ಸಹ ರಸ್ತೆ ಆಗುವ ಸಂಭವವಿರುತ್ತದೆ) ಇರುವ ಡೋರ್ ನಂ. 4153/33 ಅಳತೆ 33x49 ಅಡಿ 1638 ಚ. ಅಡಿ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ :
63620 15859

ಕೆಲಸಕ್ಕೆ ಬೇಕಾಗಿದ್ದಾರೆ
ಸಪ್ತಗಿರಿ ಶಾಲೆ ಹತ್ತಿರ ಇರುವ ಸೂಪರ್ ಮಾರ್ಕೆಟ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ.
ಸಂಪರ್ಕಿಸಿ : 83103-14540

ಮನೆ ಮಾರಾಟಕ್ಕಿದೆ
ನಿಟುವಳ್ಳಿಯ ಚಿಕ್ಕನಹಳ್ಳಿ ಬಡಾವಣೆಯಲ್ಲಿ 15x40 2 ಬೆಡ್ ರೂಂ ಇರುವ ಆರ್.ಸಿ.ಸಿ. ಮನೆ ಮಾರಾಟಕ್ಕಿದೆ.
94486 55850

ಮನೆಗಳು ಮಾರಾಟಕ್ಕಿವೆ
ಭಗೀರಥ ಸರ್ಕಲ್, ನಿಟುವಳ್ಳಿ, ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕಿವೆ. ಸಂಪರ್ಕಿಸಿರಿ :
94484 39639


# ದೇವಾಲಯದ ಹುಂಡಿಯಲ್ಲಿ ಬಿದ್ದ ಐ-ಫೋನ್: ಇದು ದೇವರ ಖಾತೆಗೆ ಸೇರಿದ್ದು ಎಂದ ತಮಿಳುನಾಡು ಸಚಿವ



ಚೆನ್ನೈ, ಡಿ. 21- ಇಲ್ಲಿನ ದೇವಾಲಯವೊಂದರಲ್ಲಿ ಭಕ್ತನೋರ್ವ ಆಕಸ್ಮಿಕವಾಗಿ ತನ್ನ ಐ-ಫೋನ್ ಅನ್ನು ಹುಂಡಿಯಲ್ಲಿ ಹಾಕಿದ್ದಾನೆ. ಐಫೋನ್ ತನಗೆ ಮರಳಿಸಬೇಕು ಎಂದು ಭಕ್ತ ಕೇಳಿದ್ದಾನೆ. ಆದರೆ ಈ ಫೋನ್ ಈಗ ದೇವಾಲಯದ ಆಸ್ತಿಯಾಗಿದೆ ಎಂದು ತಮಿಳುನಾಡು ಹಿಂದೂ ಧಾರ್ಮಿಕ ಮತ್ತು ದತ್ತಿ ಇಲಾಖೆ ತಿಳಿಸಿದೆ.

ದಿನೇಶ್ ಎಂಬ ಭಕ್ತನ ಐಫೋನ್ ಆಕಸ್ಮಿಕವಾಗಿ ದೇವಾಲಯದಲ್ಲಿ ಬಿದ್ದಿತ್ತು. ತಿರುಪ್ಪುರೂರು ಎಂಬಲ್ಲಿರುವ ಶ್ರೀಕಂಡಸ್ವಾಮಿ ದೇವಾಲಯದಲ್ಲಿ ಈ ಘಟನೆ ನಡೆದಿತ್ತು. ತಕ್ಷಣವೇ ದೇವಾಲಯದ ಅಧಿಕಾರಿಗಳ ಬಳಿ ತೆರಳಿದ ದಿನೇಶ್, ಆಕಸ್ಮಿಕವಾಗಿ ತಮ್ಮ ಐಫೋನ್ ಹುಂಡಿಯಲ್ಲಿ ಬಿದ್ದಿದೆ. ಇದನ್ನು ಮರಳಿಸಬೇಕೆಂದು ಕೋರಿದರು.

ದೂರಿನ ಹಿನ್ನೆಲೆಯಲ್ಲಿ ದೇವಾಲಯದ ಅಧಿಕಾರಿಗಳು ಶುಕ್ರವಾರ ಹುಂಡಿಯನ್ನು ತೆರೆದಿದ್ದರು ಹಾಗೂ ಅದರಲ್ಲಿ ಐಫೋನ್ ಕಂಡು ಬಂದಿತ್ತು. ದಿನೇಶ್ ಈ ಫೋನಿನಲ್ಲಿರುವ ಡಾಟಾ ಪಡೆದುಕೊಳ್ಳಬಹುದು ಎಂದು ಅಧಿಕಾರಿಗಳು ಹೇಳಿದ್ದಾರೆ. ಆದರೆ ಫೋನ್ ಅನ್ನು ತಮಗೆ ಮರಳಿಸುವಂತೆ ದಿನೇಶ್ ಒತ್ತಾಯಿಸಿದ್ದರು.

ಈ ಬಗ್ಗೆ ಮಾತನಾಡಿರುವ ತಮಿಳುನಾಡಿನ ದತ್ತಿ ಇಲಾಖೆ ಸಚಿವ ಟಿ.ಕೆ. ಶೇಖರ್ ಬಾಬು, ಆಕಸ್ಮಿಕವಾಗಿ ಇದು ಹುಂಡಿಯಲ್ಲಿ ಬಿದ್ದಿದ್ದರೂ ಸಹ ಅದು ದೇವರ ಖಾತೆಗೆ ಸೇರುತ್ತದೆ ಎಂದಿದ್ದಾರೆ.

ದೇವಾಲಯದ ನಿಯಮಗಳು ಹಾಗೂ ಸಂಪ್ರದಾಯದ ಪ್ರಕಾರ ಹುಂಡಿಯಲ್ಲಿ ಏನೇ ಬಿದ್ದರೂ ಅದು ದೇವರಿಗೆ ಸಲ್ಲುತ್ತದೆ. ಇದನ್ನು ಭಕ್ತರಿಗೆ ಮರಳಿಸಲು ನಿಯಮಗಳಲ್ಲಿ ಅವಕಾಶ ಇಲ್ಲ ಎಂದವರು ಹೇಳಿದ್ದಾರೆ.

ಈ ಬಗ್ಗೆ ಅಧಿಕಾರಿಗಳ ಜೊತೆ ಮಾತನಾಡುತ್ತೇನೆ. ಭಕ್ತನಿಗೆ ಏನಾದರೂ ಪರಿಹಾರ ಕೊಡಲು ಅವಕಾಶ ಇದ್ದರೆ ಆ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಹೇಳಿದರು.

ಈ ರೀತಿಯ ಘಟನೆ ಇದೇ ಮೊದಲ ಬಾರಿ ಏನೂ ನಡೆದಿಲ್ಲ ಎಂದು ದತ್ತಿ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ. 2023ರ ಮೇ ತಿಂಗಳಲ್ಲಿ ಪಳನಿಯಲ್ಲಿರುವ ಶ್ರೀ ದಂಡಯುತಿಪಾಣಿ ಸ್ವಾಮಿ ದೇವಾಲಯದಲ್ಲಿ ಕೇರಳದ ಭಕ್ತೆಯಾದ ಎಸ್. ಸಂಗೀತ ಅವರು ಆಕಸ್ಮಿಕವಾಗಿ ತಮ್ಮ 1.75 ಸವರನ್ ಬಂಗಾರದ ಸರವನ್ನು ಹುಂಡಿಯಲ್ಲಿ ಹಾಕಿದ್ದರು ಎಂದು ಹೇಳಿದ್ದಾರೆ.

ಅವರು ಪೂಜೆ ಸಲ್ಲಿಸುವ ಸಲುವಾಗಿ ತಾವು ಧರಿಸಿದ್ದ ತುಳಸಿ ಮಾಲೆಯನ್ನು ತೆರೆಯುವಾಗ ಆಕಸ್ಮಿಕವಾಗಿ ಸರ ಹುಂಡಿಯಲ್ಲಿ ಬಿದ್ದಿತ್ತು. ಆದರೆ ಅವರ ಆರ್ಥಿಕ ಹಿನ್ನೆಲೆ ಹಾಗೂ ಸಿಸಿಟಿವಿ ದೃಶ್ಯಗಳನ್ನು ಪರಿಶೀಲಿಸಿದ ನಂತರ ದೇವಾಲಯ ಮಂಡಳಿ ಅಧ್ಯಕ್ಷರು ಸ್ವಂತ ವೆಚ್ಚದಿಂದ ಅದೇ ಮೌಲ್ಯದ ಬಂಗಾರದ ಸರವನ್ನು ನೀಡಿದ್ದರು ಎಂದು ಅಧಿಕಾರಿಗಳು ಹೇಳಿದ್ದಾರೆ.

# ನಿಯಮಗಳಿಗೆ ಕೇಂದ್ರ ಸರ್ಕಾರ ತಿದ್ದುಪಡಿ

(1ನೇ ಪುಟದಿಂದ) ಕಡತಗಳನ್ನು ಸಾರ್ವಜನಿಕರ ಪರಿಶೀಲನೆಗೆ ಮುಕ್ತವಾಗಿರಿಸಬೇಕಿತ್ತು.

ನಾಮಪತ್ರಗಳು, ಚುನಾವಣಾ ಏಜೆಂಟರ ನೇಮಕ, ಫಲಿತಾಂಶ ಹಾಗೂ ಚುನಾವಣಾ ಲೆಕ್ಕ ಪತ್ರಗಳ, ಚುನಾವಣಾ ನಿಯಮಗಳ ಒಳಗೆ ಬರುತ್ತವೆ. ಆದರೆ ಎಲೆಕ್ಟ್ರಾನಿಕ್ ದಾಖಲೆಗಳಾದ ಸಿಸಿಟಿವಿ ಕ್ಯಾಮರಾ ದೃಶ್ಯಗಳು, ವೆಬ್‌ಕಾಸ್ಟಿಂಗ್ ಹಾಗೂ ಮಾದರಿ ನೀತಿ ಸಂಹಿತೆಗಳ ಜಾರಿ ಕುರಿತು ಚಿತ್ರಿಸಲಾದ ವಿಡಿಯೋಗಳು ಇದರ ವ್ಯಾಪ್ತಿಗೆ ಬರುವುದಿಲ್ಲ.

ಹಳೆಯ ನಿಯಮಗಳನ್ನು ಮುಂದಿಟ್ಟುಕೊಂಡು ಈ ರೀತಿಯ ಎಲೆಕ್ಟ್ರಾನಿಕ್ ದಾಖಲೆಗಳನ್ನು ಪಡೆದ ಉದಾಹರಣೆಗಳಿವೆ. ಇನ್ನು ಮುಂದೆ ನಿಯಮಗಳಲ್ಲಿ ನಮೂದಿಸಿರುವ ದಾಖಲೆಗಳು ಮಾತ್ರ ಸಾರ್ವಜನಿಕರ ಪರಿಶೀಲನೆಗೆ ಸಿಗುತ್ತವೆ. ಇತರೆ ಯಾವುದೇ ದಾಖಲೆಗಳು ಸಾರ್ವಜನಿಕರ ಪರಿಶೀಲನೆಗೆ ಸಿಗುವುದಿಲ್ಲ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.

**ಸಾರ್ವಜನಿಕರು ಎಲೆಕ್ಟ್ರಾನಿಕ್ ದಾಖಲೆ ಪಡೆಯುವುದರ ಮೇಲೆ ನಿರ್ಬಂಧ**

ಮತಗಟ್ಟೆಯ ಒಳಗೆ ಅಳವಡಿಸಿರುವ ಸಿಸಿಟಿವಿ ಕ್ಯಾಮರಾ ದೃಶ್ಯಗಳು ಗೌಪ್ಯ ಮತದಾನಕ್ಕೆ ಅಡ್ಡಿಯಾಗಬಹುದು. ಈ ವೀಡಿಯೋಗಳನ್ನು ಬಳಸಿಕೊಂಡು ಎಐ ಮೂಲಕ ತಿದ್ದಿ ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ ಇದೆ ಎಂದು ಅಧಿಕಾರಿ ಹೇಳಿದ್ದಾರೆ. ಆದರೆ ಈ ತಿದ್ದುಪಡಿ ಮಾಡಿದ ನಂತರವೂ ಸಿಸಿಟಿವಿ ಇತ್ಯಾದಿ ಮಾಹಿತಿಗಳು ಅಭ್ಯರ್ಥಿಗಳಿಗೆ ಸಿಗುತ್ತವೆ. ಉಳಿದವರು ನ್ಯಾಯಾಲಯದ ಮೂಲಕ ಮಾತ್ರ ಇಂತಹ ಮಾಹಿತಿಗಳನ್ನು ಪಡೆಯಬಹುದು ಎಂದವರು ಹೇಳಿದ್ದಾರೆ.

## ನಿರ್ಧಾರ ಮುಂದೂಡಿಕೆ

(1ನೇ ಪುಟದಿಂದ) ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ತಿಳಿಸಿದ್ದಾರೆ. ಚೌಧರಿ ಅವರು ಜಿಎಸ್‌ಟಿ ಮಂಡಳಿಯ ಸಚಿವರ ಸಮಿತಿ ಅಧ್ಯಕ್ಷರಾಗಿದ್ದಾರೆ.

# ದೇಶದ ಅರಣ್ಯ ಹಾಗೂ ಹಸಿರು ಪ್ರದೇಶ 1,445 ಚ.ಕಿ.ಮೀ. ವಿಸ್ತಾರ

ನವದೆಹಲಿ, ಡಿ. 21- 2021ರ ನಂತರ ದೇಶದ ಅರಣ್ಯ ಪ್ರದೇಶ ಹಾಗೂ ಹಸಿರು ಹೊದಿಕೆ 1,445 ಚದುರ ಕಿಲೋ ಮೀಟರ್‌ಗಳಷ್ಟು ಹೆಚ್ಚಾಗಿದೆ. 2023ರಲ್ಲಿ ದೇಶದ ಒಟ್ಟು ಭೂ ಪ್ರದೇಶದ ಶೇ. 25.17ರಷ್ಟು ಭಾಗ ಈಗ ಹಸಿರು ಹೊದಿಕೆ ಹಾಗೂ ಅರಣ್ಯವಾಗಿದೆ ಎಂದು ಸರ್ಕಾರದ ಇತ್ತೀಚಿನ ಅಂಕಿ ಅಂಶಗಳು ತಿಳಿಸಿವೆ.


ಶನಿವಾರ ಅರಣ್ಯ ಪ್ರದೇಶಗಳ ಕುರಿತ ವರದಿಯನ್ನು ಬಿಡುಗಡೆ ಮಾಡಲಾಗಿದೆ. 2.29 ಶತ ಕೋಟಿ ಟನ್ ಪ್ರಮಾಣದ ಇಂಗಾಲ ಕಡಿಮೆ ಮಾಡಲಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. 2030ರ ವೇಳೆಗೆ ಇನ್ನೂ 3 ಶತಕೋಟಿ ಟನ್ ಪ್ರಮಾಣದ ಇಂಗಾಲ ಕಡಿಮೆ ಮಾಡಲು ಗುರಿ ಹೊಂದಲಾಗಿದೆ. ಅರಣ್ಯ ಪ್ರದೇಶ ಹಾಗೂ ಹಸಿರು ಹೊದಿಕೆ ಹೆಚ್ಚಿಸುವ ಮೂಲಕ ಈ ಗುರಿ ತಲುಪಲಾಗುವುದು. 2021ರಲ್ಲಿ ದೇಶದ ಒಟ್ಟು ಅರಣ್ಯ ಪ್ರದೇಶ 7,13,789 ಚದುರ ಕಿಲೋ ಮೀಟರ್ ಆಗಿತ್ತು. 2023ರಲ್ಲಿ ಇದು 7,15,343 ಚದುರ ಕಿಲೋ ಮೀಟರ್‌ಗಳಿಗೆ ತಲುಪಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.

ಹಸಿರು ಹೊದಿಕೆಯ ಪ್ರಮಾಣ 1,289 ಚದುರ ಕಿಲೋ ಮೀಟರ್‌ಗಳಷ್ಟು ಹೆಚ್ಚಾಗಿದೆ. ಇದು ದೇಶದ ಒಟ್ಟು ಭೌಗೋಳಿಕ ಪ್ರದೇಶದ ಶೇ. 3.41ರಷ್ಟಾಗಿದೆ ಎಂದು ವರದಿ ಹೇಳಿದೆ.

ಅರಣ್ಯ ಸಮೀಕ್ಷಾ ವರದಿಯ ಪ್ರಕಾರ ಶೇ. 10ಕ್ಕಿಂತ ಹೆಚ್ಚು ಪ್ರದೇಶಗಳಲ್ಲಿ ದಟ್ಟ ಮರಗಳಿದ್ದರೆ ಅದನ್ನು ಅರಣ್ಯ ಎಂದು ಪರಿಗಣಿಸಲಾಗುತ್ತದೆ. ಇದರಲ್ಲಿ ನೈಸರ್ಗಿಕ ಅರಣ್ಯ ಹಾಗೂ ಮಾನವ ನಿರ್ಮಿತ ಹಸಿರು ಪ್ರದೇಶಗಳು ಸೇರಿವೆ.

## ಪದವಾಣಿ-119

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.



**ಎಡದಿಂದ ಬಲಕ್ಕೆ :**
1) ಕಣ್ಣಿನ ತೊಂದರೆ 4
3) ಶುಭ ತರುವ ವಾರದ ದಿನ 4
5) ಹೊಸ ದಿವಸವನ್ನು ಹೀಗೆ ಹೇಳಿ 4
6) ಬೇಸಿಗೆಯ ಸಮಯ 4
7) ಕಳೆದು ಹೋದ ವೇಳೆ 4
9) ಮುಖದಲ್ಲಿ ಕಂಡ ಮಂದಹಾಸ 4
11) ನರಗಳಿಗೆ ಸಂಬಂಧಿಸಿದ ಕಾಯಿಲೆಯುಳ್ಳವ 4
12) ಹುಟ್ಟಿನಿಂದ ಬಂದುದು 4

**ಮೇಲಿನಿಂದ ಕೆಳಕ್ಕೆ :**
1) ನೋಡುವ ರೀತಿ 4
2) ಷಣ್ಮುಖನ ಮತ್ತೊಂದು ಹೆಸರು 4
3) ಒಳ್ಳೆಯ ಫಲವುಂಟಾಗುವ ಕಾಲ 4
4) ಭೂಮಿಯ ಕೆಳಗಿರುವ ಸಪ್ತಲೋಕಗಳಲ್ಲಿ ಒಂದು 4
7) ಆನೆ ಮುಖದವನು 4
8) ನಾಲ್ಕಕ್ಷರದ ಚೆಲುವೆ 4
9) ಎಲ್ಲರನ್ನೂ ನಗಿಸುವವನು 4
10) ಈತ ಒಳ್ಳೆಯ ಸ್ವಭಾವದವನು 4

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ – 118 ರ ಉತ್ತರಗಳು :**
ಎಡದಿಂದ ಬಲಕ್ಕೆ : 1) ಬಯಲು 3) ಮಮತೆ 5) ಕುಚಂದನ 7) ಬೇರ್ಪಡಿಸು 9) ತೆಲಂಗಾಣ 11) ಲಲ್ಲೆಮಾತು 13) ಗಾಣಿಗ 14) ಓಲಗ.
ಮೇಲಿನಿಂದ ಕೆಳಕ್ಕೆ : 2) ಯಪೆಚಂ (ಚಂಪೆಯ) 4) ಮಹಡಿ 5) ಕುಲದೇವತೆ 6) ನವೀಕರಣ 7) ಬೇಸಿಗೆಕಾಲ 8) ಸುಪರ್ಣಕೇತು 10) ಲಂಬಾಣಿ 12) ಮಾತುಲ.

## ಕೆಟಿಜೆ ನಗರದಲ್ಲಿ ಶ್ರೀ ಮಲ್ಲಿಕಾರ್ಜುನ, ಶ್ರೀ ಕಂಠಿದುರ್ಗಮ್ಮ ಕಾರ್ತಿಕೋತ್ಸವ

ದಾವಣಗೆರೆ, ಡಿ. 21 - ಇಲ್ಲಿನ ಕೆ.ಟಿ.ಜೆ. ನಗರದ 10ನೇ ತಿರುವಿನಲ್ಲಿರುವ ಗಾಂಧೀಜಿ ಹರಿಜನ ಯುವಕ ಸಂಘದಿಂದ ಶ್ರೀ ಮಲ್ಲಿಕಾರ್ಜುನ ಹಾಗೂ ಶ್ರೀ ಕಂಠಿದುರ್ಗಮ್ಮ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 23 ಮತ್ತು 24 ಸಂಜೆ 7.30ಕ್ಕೆ ಶ್ರೀ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ವಿಶೇಷ ಪೂಜೆಯೊಂದಿಗೆ ದೀಪ ಬೆಳಗಿಸುವುದರ ಮೂಲಕ ಕಾರ್ತಿಕೋತ್ಸವ ನೆರವೇರಿಸಲಾಗುವುದು ಎಂದು ಗಾಂಧೀಜಿ ಹರಿಜನ ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಸೋಮಲಾಪುರ ಹನುಮಂತಪ್ಪ ತಿಳಿಸಿದ್ದಾರೆ.

## ಚರ್ಮ ವಸ್ತುಗಳ ಮೇಲೆ ಭಾರೀ ರಿಯಾಯಿತಿ

ದಾವಣಗೆರೆ, ಡಿ.21- ಕ್ರಿಸ್‌ಮಸ್ ಮತ್ತು ಹೊಸ ವರ್ಷದ ಪ್ರಯುಕ್ತ ಎ.ವಿ.ಕೆ ಕಾಲೇಜ್ ರಸ್ತೆಯಲ್ಲಿನ ಲಿಡಕರ್ ನಿಗಮದಿಂದ ಡಿಸೆಂಬರ್ 20 ರಿಂದ ಜನವರಿ 5 ರವರೆಗೆ ಚರ್ಮದ ಪಾದರಕ್ಷೆ, ಶೂ, ಬೆಲ್ಟ್, ಪರ್ಸ್, ಟ್ರಾವಲ್ ಬ್ಯಾಗ್, ಲ್ಯಾಪ್‌ಟಾಪ್ ಬ್ಯಾಗ್, ಮಹಿಳೆಯರ ಪರ್ಸ್, ವ್ಯಾನಟಿ ಬ್ಯಾಗ್‌ಗಳ ಮೇಲೆ ಶೇ.20 ರಿಂದ 40 ರಷ್ಟು ರಿಯಾಯಿತಿ ಇರುತ್ತದೆ.


ಸೈಟುಗಳು ಮಾರಾಟಕ್ಕಿವೆ
ಹೊಸ ಕುಂದವಾಡ ಸುಶಿ ಕಲ್ಯಾಣ ಮಂಟಪ ಹಿಂದೆ ಉತ್ತರ 30x40 ಬನಶಂಕರಿ ಬಡಾವಣೆ ಪೂರ್ವ 30x50. 40x60 ಅಕ್ಕ-ಪಕ್ಕ ಪಶ್ಚಿಮ 80x70, 30x70 (60 ಅಡಿ ರಸ್ತೆಗೆ) ಪೂರ್ವ 30x57 ಅಕ್ಕ-ಪಕ್ಕ.
ಐಗೂರು ವಿಜಯಕುಮಾರ
99457 02495

ಮನೆಗಳು ಮಾರಾಟಕ್ಕಿವೆ
SS 'A' Block ಪೂರ್ವ 40x60, SS 'B' Block ಉತ್ತರ 30x40, ದಕ್ಷಿಣ 30x40 ಜೆ.ಹೆಚ್. ಬಡಾವಣೆ ಉತ್ತರ 30x50.
ಐಗೂರು ವಿಜಯಕುಮಾರ
99457 02495

ಸೈಟುಗಳು ಮಾರಾಟಕ್ಕಿವೆ
SS 'A' Block ದಕ್ಷಿಣ 30x50 (ಕವಿ ಹೋಟೆಲ್ ಹತ್ತಿರ) MCC 'A' Block 44x60 ಪೂರ್ವ ಮತ್ತು ದಕ್ಷಿಣ ಕಾರ್ನರ್ 44x60 ವಿದ್ಯಾನಗರ ದಕ್ಷಿಣ 50x85 (ಕಾಫಿ ಡೇ ಸರ್ಕಲ್) MCC 'B' Block ಪಶ್ಚಿಮ 50x70
ಐಗೂರು ವಿಜಯಕುಮಾರ
99457 02495

ಸೈಟ್ ಮಾರಾಟಕ್ಕೆ
ಕರ್ನಾಟಕ ಗೃಹ ಮಂಡಳಿ (KHB) 50x80 ಉತ್ತರ, 40X60 ಉತ್ತರ ಕಮರ್ಷಿಯಲ್ ಡಬಲ್ ರೋಡ್‌ಗೆ
ಕಿರಣ್ ಬೂಸ್ನೂರ್ (ಏಜೆಂಟ್)
97315-63409

ಜಮೀನು ಬೇಕಾದಲ್ಲಿ ಸಂಪರ್ಕಿಸಿ
ದಾವಣಗೆರೆ ತಾ. ಕೋಳೆನಹಳ್ಳಿಯಲ್ಲಿ ಎಕರೆ 8 ಗುಂಟೆ 23 ಜಮೀನು ಮಾರಾಟಕ್ಕೆ ಇದೆ (ಕೆಂಪು ಮಣ್ಣು ಖಾಲಿ ಹೊಲ ನೀರಾವರಿ. ಸಂತೆಬೆನ್ನೂರಲ್ಲಿ ಎಕರೆ 8 ಗುಂಟೆ 20 ಇದರಲ್ಲಿ 4 ಎಕರೆ ಅಡಿಕೆ ಇದೆ. 2 ವರ್ಷದ್ದು, ಇನ್ನೂ 4 1/2 ಎಕರೆ ಖಾಲಿ ಇದೆ. ಈ ಜಮೀನು ಮಾರಾಟಕ್ಕೆ ಇದೆ. ಸಂಪರ್ಕಿಸಿ :
ಪ್ರಾಪರ್ಟಿ ಅಡ್ವೈಸರ್ ಸುರೇಶ್ ಪಿ.ಎಸ್. ಶಾಮನೂರು.
ಮೊ : 84314 00907

ಸೈಟು, ಮನೆ & ಹೊಲ ಬೇಕಾದಲ್ಲಿ ಸಂಪರ್ಕಿಸಿ
ಶಿವ-ಪಾರ್ವತಿಯಲ್ಲಿ 30x50 ಪೂರ್ವ 40x52 ಪಶ್ಚಿಮ-ಉತ್ತರ ಕಾರ್ನರ್, 40x60 ಪೂರ್ವ 40 ಅಡಿ ರಸ್ತೆಗೆ ಬನಶಂಕರಿಯಲ್ಲಿ (ಹೊಸ) 40x70 ಪಶ್ಚಿಮ 30x57 ಪೂರ್ವ ಸರ್ಕಾರಿ ನೌಕರರ ಬಡಾವಣೆಯಲ್ಲಿ 30x40 ಪೂರ್ವ 30x51 ಉತ್ತರ, 30x50 ಉತ್ತರ ಹಳೆ ಬಾತಿ & ಹೊಸ ಬಾತಿ ಮಧ್ಯ 28 ಗುಂಟೆ ಜಮೀನು ಮಾರಾಟಕ್ಕೆ, ಸೈಟುಗಳು ಸೇರಿ ಮಾರಾಟಕ್ಕಿವೆ. ಸಂಪರ್ಕಿಸಿ: (ಪ್ರಾಪರ್ಟಿ ಅಡ್ವೈಸರ್) ಸುರೇಶ್ ಪಿ.ಎಸ್. ಶಾಮನೂರು
ಮೊ: 84314 00907

WANTED
Lady manager, Off. Asst, Shop Incharge, Table work, Lady stitchers, Helper's wanted.
Quali : 7th to SSLC
98445 81966

ಸೈಟು ಮಾರಾಟಕ್ಕಿದೆ
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x 73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

ನೇರ ಸಂದರ್ಶನ
ದಾವಣಗೆರೆಯ ಪ್ರತಿಷ್ಠಿತ ಸಸ್ಯಹಾರಿ ಊಟದ ಹೋಟೆಲ್ ಗೆ ಸರ್ವೀಸ್ ಹಾಗೂ ಕ್ಲೀನ್ ಮಾಡಲು ಹುಡುಗರು ಮತ್ತು ಸಂಜೆ 6 ರಿಂದ ರಾತ್ರಿ 11 ರ ವರೆಗೆ. ರೊಟ್ಟಿ, ಚಪಾತಿ ಮಾಡಲು ಮಹಿಳೆಯರು ಬೇಕಾಗಿದ್ದಾರೆ.
94489 80070, 88847 04025

ಭಟ್ಟರು ಬೇಕಾಗಿದ್ದಾರೆ
ಹೋಟೆಲ್ ಹೊಯ್ಸಳ
HEBBAL Toll ಹತ್ತಿರ,
ಡಾಬಾ ಶೈಲಿಯ ವೆಜ್ & ನಾನ್‌ವೆಜ್
ಅಡುಗೆ ಮಾಡಲು ಭಟ್ಟರು ಬೇಕಾಗಿದ್ದಾರೆ.
99003 66782

ಬೇಕಾಗಿದ್ದಾರೆ
ನಗರದ ಪ್ರತಿಷ್ಠಿತ ಸಿಸಿ ಟಿವಿ ಕ್ಯಾಮೆರಾ ಮತ್ತು ಕಂಪ್ಯೂಟರ್ ಸೇಲ್ಸ್ & ಸರ್ವೀಸ್ ಶೋ ರೂಂಗೆ ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ. ಸಂಪರ್ಕಿಸಿ :
ಕ್ಯಾಮ್ ಕೇರ್
PJ ಬಡಾವಣೆ 5ನೇ ಮೇನ್, ದಾವಣಗೆರೆ.
99161 11194

ಅಡಿಕೆ ತೋಟ ಮಾರಾಟಕ್ಕಿದೆ
ದಾವಣಗೆರೆಯಿಂದ 10 ಕಿ.ಮೀ. ಹತ್ತಿರವಿರುವ 5 ಎಕರೆ 2 ವರ್ಷದ ಅಡಿಕೆ ತೋಟ, 3 ಬೋರ್‌ವೆಲ್ ಮತ್ತು ಚಾನಲ್ ನೀರಿನ ವ್ಯವಸ್ಥೆಯಿದೆ. ಪ್ರತಿ ಎಕರೆಗೆ 50 ಲಕ್ಷ ರೂ. ಜೀನಿಯಸ್ ಸ್ಕೂಲ್ ಹತ್ತಿರ, ಹಿರೇತೊಗಲೇರಿ.
82172 37969, 97413 48103

ಮನೆ ಬಾಡಿಗೆಗೆ ಇದೆ
#678/41C,4ನೇ ಕ್ರಾಸ್, ಶಿವಕುಮಾರ ಸ್ವಾಮಿ ಬಡಾವಣೆ, ಸೋಮೇಶ್ವರ ಹಾಸ್ಪಿಟಲ್, ನಮ್ಮೂರ ತಿಂಡಿ ಹೋಟೆಲ್ ಹತ್ತಿರ, ದಾವಣಗೆರೆ. 1ನೇ ಮಹಡಿ, 30x40 ಅಳತೆ, 2 BHK ಮನೆ ಬಾಡಿಗೆಗೆ ಇದೆ.
(ಶಾಖಾಹಾರಿಗಳಿಗೆ ಮಾತ್ರ)
9449291436, 9740024640

5BHK ಮನೆ ಬಾಡಿಗೆಗಿದೆ
#4669, ರವಿ ನಿಲಯ, 4ನೇ ಮೇನ್, 7ನೇ ಕ್ರಾಸ್, SS ಲೇಔಟ್, 'ಬಿ' ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ, ದಾವಣಗೆರೆ.
ಜಿ.ಕೆ. ಉಮಾದೇವಿ
90082 79535, 97421 68237

ಮನೆ ಬಾಡಿಗೆಗೆ ಇದೆ
40x44 ಅಳತೆಯುಳ್ಳ 2BHK ಮನೆ/ ವಾಣಿಜ್ಯ ಉಪಯೋಗಕ್ಕಾಗಿ ಮೊದಲನೇ ಮಹಡಿಯಲ್ಲಿ ಬಾಡಿಗೆಗೆ ಇದೆ. #222 ಲಾಯರ್ ರೋಡ್, ಕೆ.ಬಿ. ಬಡಾವಣೆ ದಾವಣಗೆರೆ- 2,
ಸಸ್ಯಹಾರಿಗಳಿಗೆ ಮಾತ್ರ. ಆಸಕ್ತರು ಸಂಪರ್ಕಿಸಿ.
85533 24486

ಸೈಟುಗಳು ಮಾರಾಟಕ್ಕಿವೆ
ದೂಡಾ ಅಪ್ರೂವ್ಡ್ ಸೈಟುಗಳು ವಿಶೇಷ ರಿಯಾಯತಿಯಲ್ಲಿ ಮಾರಾಟಕ್ಕಿವೆ.
30x40, 30x50, 40x60
93431 10009, 98458 61220

ಅಡಿಕೆ ತೋಟ ಮಾರಾಟಕ್ಕೆ
ಅಡಿಕೆ ತೋಟ ಮಾರಾಟಕ್ಕೆ ಇದೆ, ಫಸಲಿಗೆ ಬಂದಿರುವ ಮೇನ್ ರೋಡ್ ಅಟ್ಯಾಚ್ಡ್ ಇರುವ ಎರಡೂವರೆ (2.5) ಎಕರೆ. ಸಂಪರ್ಕಿಸಿ :
88612 84178

ಬೇಕಾಗಿದ್ದಾರೆ
ಶಾಮನೂರು ರಸ್ತೆಯಲ್ಲಿ MRP ಪಕ್ಕದಲ್ಲಿ ನಾನ್‌ವೆಜ್ ಹೋಟೆಲ್ ನಡೆಸಿಕೊಂಡು ಹೋಗಲು ಬೇಕಾಗಿದ್ದಾರೆ. ಎಲ್ಲಾ ಸೌಲಭ್ಯವುಳ್ಳದ್ದಾಗಿರುತ್ತದೆ.
ಆಸಕ್ತರು ಸಂಪರ್ಕಿಸಿ.
98861 66432

ಮನೆ ಬಾಡಿಗೆಗೆ/ಲೀಸ್‌ಗಿದೆ
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಮಾಗಾನಹಳ್ಳಿ ಮೇನ್‌ರೋಡ್‌ಗೆ 10 ಗುಂಟೆ ಜಮೀನು ಮಾರಾಟಕ್ಕಿದೆ
78997 60749, 99726 75759

2 BHK ಮನೆ ಬಾಡಿಗೆಗಿದೆ
ಕೆಟಿಜೆ ನಗರ, 9ನೇ ಕ್ರಾಸ್, 1ನೇ ಮೇನ್ 1ನೇ ಫ್ಲೋರ್‌ನಲ್ಲಿ 2 ಬೆಡ್ ರೂಂ, ಮುನ್ಸಿಪಲ್ & ಬೋರ್‌ವೆಲ್ ನೀರಿನ ವ್ಯವಸ್ಥೆಯಿರುವ ಮನೆ ಬಾಡಿಗೆಗೆ ಇದೆ. ವಿಚಾರಿಸಿ.
73489 15945

ಗೋಡೌನ್ ಮತ್ತು ಮಳಿಗೆಗಳು ಬಾಡಿಗೆಗೆ ಇವೆ
ದಾವಣಗೆರೆ APMC ಸೈಟ್ ನಂ. 20 'F' ಬ್ಲಾಕ್‌ನಲ್ಲಿ ಕಾರ್ನರ್ ಸೈಟ್ ಮಳಿಗೆ : 22x10, 22x10, 22x22, 28x22 ಮತ್ತು ಗೋಡೌನ್ 84x28 ಎತ್ತರ 30 ಅಡಿ ಬಾಡಿಗೆಗೆ ಇವೆ. ಸಂಪರ್ಕಿಸಿ :
98866 74409, 94489 29493

ತೋಟ ಮಾರಾಟಕ್ಕೆ ಇದೆ
ದಾವಣಗೆರೆಯಿಂದ 15 ಕಿಲೋ ಮೀಟರ್ ಇದೆ. ಸ್ಟೇಟ್ ಹೈವೈ ರೋಡ್‌ಗೆ ಇದೆ. ಟೋಲ್ ಹತ್ತಿರ, ಸೈಟು ಆದ್ರೂ ಮಾಡಿಕೊಳ್ಳಬಹುದು. ಫಲಕ್ಕೆ ಬಂದಿರುವ ತೋಟ ಹಳೇ ತೋಟ 5 ಎಕರೆ 18 ಗುಂಟೆ ಮಾರಾಟಕ್ಕಿದೆ.
78996 93788, 96635 45068

ಮಳಿಗೆ ಬಾಡಿಗೆಗೆ ಇದೆ
ಗಡಿಯಾರ ಕಂಬದ ಎದುರು ವಸಂತ ಟಾಕೀಸ್ ರಸ್ತೆಯ ಕಾರ್ನರ್‌ನಲ್ಲಿ ಗ್ರೌಂಡ್ ಫ್ಲೋರ್‌ನಲ್ಲಿ 1 ಹಾಗೂ ಫಸ್ಟ್ ಫ್ಲೋರ್‌ನಲ್ಲಿ 3, ಸೆಕೆಂಡ್ ಫ್ಲೋರ್‌ನಲ್ಲಿ 3 ಮಳಿಗೆ ಹಾಗೂ ಥರ್ಡ್ ಫ್ಲೋರ್‌ನಲ್ಲಿ 3 ರೂಂ ಬಾಡಿಗೆಗೆ ಇವೆ. ಮಳಿಗೆ ಅಳತೆ : 10x21
98444 76185
98445 00114

ARTIFICIAL INELLIFENCE (AI)
Age Group : 11 Years to 18 Years, Bruit Solutions, Nijalingappa Badavane.
96201 53806

ರೂಂ ಖಾಲಿ ಇದೆ
ಜೆ.ಹೆಚ್. ಪಟೇಲ್ ಬಡಾವಣೆ, ಸಿ ಬ್ಲಾಕ್, 2ನೇ ಮೇನ್, ಶ್ಯಾಮನೂರಿನಲ್ಲಿ 2 ರೂಂ ಖಾಲಿ ಇದೆ. ಕಿಚನ್, ಅಟ್ಯಾಚ್ ಬಾತ್ ರೂಂ ಇದೆ. ರೂಂ ಹಾಗೂ ಅಟ್ಯಾಚ್ ಬಾತ್ ರೂಂ ಇದೆ.
98863 84948

ಮನೆ ಬಾಡಿಗೆಗಿದೆ
ಗ್ರೌಂಡ್ ಫ್ಲೋರ್ 2 BHK ಪಶ್ಚಿಮ ದಿಕ್ಕಿನ ಹಾಗೂ ಬೋರ್ ಮತ್ತು ಕಾರ್ಪೊರೇಷನ್ ನೀರಿನ ಸೌಲಭ್ಯವಿರುವ ಮನೆ ಬಾಡಿಗೆಗಿದೆ. ನಂ. 576. ಸತ್ಯನಿವಾಸ, 1 ನೇ ಕ್ರಾಸ್, 4ನೇ ಮೇನ್ ಎ ಬ್ಲಾಕ್, ಡಿ.ಸಿ.ಎಂ. ಟೌನ್ ಶಿಪ್, ಪ್ರಧಾನ ಮಂತ್ರಿ ಜನ ಔಷಧಾಲಯ ಹತ್ತಿರ, ದಾವಣಗೆರೆ.
7019427951, 9341014488
(ಸಸ್ಯಹಾರಿಗಳಿಗೆ ಮಾತ್ರ)

Reputed Footware Company showroom
Requires Sales Executuve-1 Post.
Qual : SSLC/PUC
LIBERTY SHOES LTD.,
Opp. SS mall, Shamanur Road, Davangere.
+91 73530 31465

ಆಫೀಸ್ ಬಾಡಿಗೆಗಿದೆ
1ನೇ ಫ್ಲೋರ್‌ನಲ್ಲಿ ಶಿವಪಾರ್ವತಿ ದೇವಸ್ಥಾನದ ಎದುರು, ವಿದ್ಯಾನಗರ ಮುಖ್ಯರಸ್ತೆಯಲ್ಲಿ 1400 ಚ.ಅಡಿ ಜೊತೆಗೆ ಇಂಟೀರಿಯರ್ ಇದೆ.
72047 48919, 98444 43242

ಮನೆ ಮಾರಾಟಕ್ಕಿದೆ
#1, 356/10'C' ಸವಣೂರ ಪ್ಲಾಜಾ ಹಿಂಭಾಗ, ಪಿ.ಬಿ. ರೋಡ್, ದಾವಣಗೆರೆ, 60+55/2x40=2300, ಅಡಿ ವಿಸ್ತೀರ್ಣದಲ್ಲಿ ಕಟ್ಟಿರುವ ಗ್ರೌಂಡ್ ಫ್ಲೋರ್ ಮನೆ ಮಾರಾಟಕ್ಕಿದೆ. 1 ಕೋಟಿ, 30 ಲಕ್ಷಕ್ಕೆ
9742261666, 94498 96502

COMMERCIAL FOR RENT
1) Ground floor Shop (13x18) and 1st floor godown (20x20) Good For Automobiles
2) 1st floor Double Bedroom
ಮನೆ ವಾಸ ಹಾಗೂ ಖಾನಾವಳಿ ನಡೆಸಲು (1400 sqft) ಬಾಡಿಗೆಗೆ ಇದೆ.
87468 12999

ಬೇಕಾಗಿದ್ದಾರೆ
ಕನ್ನಡ ಮಾಧ್ಯಮ ಪ್ರೌಢ ಶಾಲೆಗೆ B.Sc, B.Ed, CBZ, ಪದವಿ ಹೊಂದಿದ ವಿಜ್ಞಾನ ಶಿಕ್ಷಕರು ಬೇಕಾಗಿದ್ದಾರೆ. ಶ್ರೀರಂಗನಾಥ ಪ್ರೌಢ ಶಾಲೆ ಅನುದಾನಿತ ಆಲೂರು ಹಟ್ಟಿಗೆ ದಾವಣಗೆರೆ. ಆಕರ್ಷಕ ವೇತನ ನೀಡಲಾಗುವುದು.
76768 90742, 99016 58878

REQUIRED
Accountant for Construction office
minimum 4 to 5 years experience in GST & Tally
8050222047, 8951938228

HOTEL ITEMS FOR SALE
Stainless Steel Dosa Tawa, Tea / Cofee Counter, Steel Table, Plywood Table, Steel cutting counter, Exhaust fan, Generator.
Contact me at
84948 20288

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
ಹಿಂದೂ ವಧು-ವರರ ಮಾಹಿತಿ ಕೇಂದ್ರ
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

ಟ್ಯಾಂಕ್ ಕ್ಲೀನಿಂಗ್
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

ಸೈಟು ಮಾರಾಟಕ್ಕಿದೆ
ಸೈಟ್ ನಂಬರ್ 412, ಬಸವೇಶ್ವರ ಬಡಾವಣೆಯಲ್ಲಿ 40x70 ದಕ್ಷಿಣ ಸೈಟ್ ಮಾರಾಟಕ್ಕಿದೆ.
ನೇರ ಮಾಲೀಕರಿಂದ
99023 71609

ಸೈಟುಗಳು, ಮನೆಗಳು ಮಾರಾಟಕ್ಕಿವೆ
ಬನಶಂಕರಿ ಲೇಔಟ್, ಶಿವ-ಪಾರ್ವತಿ ಲೇಔಟ್, ಡಾಲರ್ಸ್‌ಕಾಲೋನಿ, ಎಸ್.ಎಸ್. ಲೇಔಟ್, ವಿದ್ಯಾನಗರ, ಗ್ಲಾಸ್ ಹೌಸ್ ಲೇಔಟ್ ಹಾಗೂ ಕುಂದುವಾಡ, ಯರಗುಂಟೆಯಲ್ಲಿ ಇನ್‌ವೆಸ್ಟ್‌ಮೆಂಟ್ ಸೈಟುಗಳು, ಮನೆಗಳು & ಕಮರ್ಷಿಯಲ್ ಸೈಟ್ ಯೋಗ್ಯ ಬೆಲೆಯಲ್ಲಿ ದೊರೆಯುತ್ತವೆ. 30x40, 40x60, 30x50.
97315 12365

ಮನೆ ಲೀಸ್‌ಗೆ ಇದೆ
1st floor single bedroom, 2nd floor double bedroom.
ವಿಳಾಸ : ಡಾಲರ್ಸ್ ಕಾಲೋನಿ, ಶ್ರೀ ಸಾಮಾನ್ಯ ನೌಕರರ ಬಡಾವಣೆ ಹತ್ತಿರ, ಶಾಮನೂರು, ದಾವಣಗೆರೆ.
63616 39612, 93534 94531

WANTED
For a Corporate Clinic in Davangere
1.Female Receptionist/Patient care executive 2.Hair and skin Technician/ Therapist. Any graduates with 1 to 2 years of relevant work experience preferred
91482 90536, 82176 04066

ರಕ್ತ ದಾನ ಶ್ರೇಷ್ಠ ದಾನ

ಫ್ಲಾಟ್‌ಗಳು ಮಾರಾಟಕ್ಕಿವೆ
ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ 2 BHK, ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೋಬ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ರಿಯಾಯ್ತಿ ದರದಲ್ಲಿ ಮಾರಾಟಕ್ಕಿವೆ
98440 65710

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

WANTED
PUC or Degree Pass or Fail Computer Knowledge is Must Excellent Electronics, # 2137/1, 4th Main, 3rd Cross, MCC `A' Block, Davanagere - 577002. Contact No :
98865 15100

ಬೇಕಾಗಿದ್ದಾರೆ
ಲಾಡ್ಜ್‌ನಲ್ಲಿ ಕೆಲಸ ಮಾಡಲು ರೂಂ ಬಾಯ್ ಮತ್ತು ಸೂಪರ್‌ವೈಸರ್ ಬೇಕಾಗಿದ್ದಾರೆ.
63639 54459

ಮನೆಗಳು ಬಾಡಿಗೆಗೆ / ಲೀಸ್
ಜಯನಗರ 'A' ಬ್ಲಾಕ್‌ನಲ್ಲಿ 1 BHK & 2 BHK ಮನೆಗಳು ಬಾಡಿಗೆಗೆ / ಲೀಸ್‌ಗೆ ದೊರೆಯುತ್ತವೆ. ಸಂಪರ್ಕಿಸಿ :
94484 39639

ಸೈಟುಗಳು ಮಾರಾಟಕ್ಕಿವೆ
ಸರ್ಕಾರಿ ನೌಕರರ ಬಡಾವಣೆ, 2ನೇ ಹಂತ GMIT ಹತ್ತಿರ 30x50 ಪೂರ್ವ, 30x40 ಪಶ್ಚಿಮKHB Judge ಮನೆ ಹತ್ತಿರ KM Layout 30x50 ಪಶ್ಚಿಮ.
90361 89699
72592 69940

ಸೈಟುಗಳು -ಮನೆ ಮಾರಾಟಕ್ಕಿವೆ
ಎಸ್.ಎಸ್. ಬಡಾವಣೆ ಗ್ಲಾಸ್ ಹೌಸ್ ಹತ್ತಿರ, 30x32 ಪೂರ್ವ ಹಾಗೂ ಮಹಾಲಕ್ಷ್ಮಿ ಲೇಔಟ್, ಶಿವಗಂಗಾ ಹಾಲ್ ಹಿಂಭಾಗ 35x65 ಪೂರ್ವ, ಕಾವೇರಿ ಅಪಾರ್ಟ್‌ಮೆಂಟ್, ಫ್ಲಾಟ್ ಉತ್ತರ ಮನೆ ಮಾರಾಟಕ್ಕಿವೆ. ಸಂಪರ್ಕಿಸಿ. ಗಣೇಶ್
94824 38205, 63614 60852

ವರದಿಗಾರರು ಬೇಕಾಗಿದ್ದಾರೆ
ಉತ್ತಮ ಸಂಬಳವಿದೆ ಸ್ನಾತಕೋತ್ತರ ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೂ ಅವಕಾಶ. ಸಂಪರ್ಕಿಸಿ.
86180 02539

TUITIONS
CBSE / ICSE Boards Class 8th, 9th, 10th
CRASH COURSES FOR NEET / CET / IIT - JEE PUC I / PUC II / PCMB
NEET Long Term / Supplementary Exams
97398 65711, 94822 44114

ಕಮರ್ಷಿಯಲ್ ಜಾಗ ಬಾಡಿಗೆಗಿದೆ
ಮೊದಲನೇ ಮಹಡಿ
ಎಂಸಿಸಿ ಬಿ ಬ್ಲಾಕ್, 7ನೇ ಕ್ರಾಸ್, 9ನೇ ಮೇನ್, ಬಾಯ್ಸ್ ಹಾಸ್ಟೆಲ್ ರಸ್ತೆ, ದಾವಣಗೆರೆ.
82177 72482

ಸಾಲಗಳಿಗಾಗಿ ಸಂಪರ್ಕಿಸಿ
ಮನೆ ಕಟ್ಟಲು, ಮನೆ ಖರೀದಿ, ಸೈಟ್ ಖರೀದಿ ಮತ್ತು ಮನೆ ಕಟ್ಟಲು ಫೈನಾನ್ಸ್ ಕಂಪನಿಯಲ್ಲಿರುವ ಸಾಲ ವರ್ಗಾವಣೆ ಮತ್ತು ಅಧಿಕ ಸಾಲ ಅತೀ ಕಡಿಮೆ ಬಡ್ಡಿದರದಲ್ಲಿ ಸಾಲ ವರ್ಗಾವಣೆ ಮಾಡಿಕೊಡಲಾಗುವುದು.
73385 80345, 99455 22287

FLAT FOR LEASE
3 BHK, Sqft : 1888
AM Apartment
Nainika Prime Rose
Vidyanagar Last city bus stop Davangere.
89519 38228, 80502 22181

ROOM TO LET
Nijalingappa Badavane
94813 89109

ವಾಹ್ ಕಾಫಿ !! ರಿಚ್ ಕಾಫಿ !!
SRK COFFEE
ಶ್ರೀ ರಾಮಕೃಷ್ಣ ಕಾಫಿ ಕಂಪನಿ
ಮಂಡಿಪೇಟೆ, ದಾವಣಗೆರೆ.
ಮೊಬೈಲ್ : 94487 27084

# ವರದಿಗಾರರ ಕೂಟದ ಪಿಪಿಎಲ್ ಕ್ರಿಕೆಟ್ ಪಂದ್ಯ ಚಾಲನೆ



ದಾವಣಗೆರೆ, ಡಿ.21- ಜಿಲ್ಲಾ ವರದಿಗಾರರ ಕೂಟದಿಂದ ಆಯೋಜಿಸಿರುವ ಪಿಪಿಎಲ್-3 ಕ್ರಿಕೆಟ್ ಪಂದ್ಯಾವಳಿಯನ್ನು ಇಲ್ಲಿನ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಕೂಟದ ಸಂಸ್ಥಾಪಕ ಅಧ್ಯಕ್ಷ ಕೆ. ಏಕಾಂತಪ್ಪ ಬ್ಯಾಟಿಂಗ್ ಮಾಡುವ ಮೂಲಕ ಇಂದು ಚಾಲನೆ ನೀಡಿದರು.

ಇದೇ ವೇಳೆ ಮಾತನಾಡಿದ ಅವರು, ಎಲ್ಲರೂ ನಮ್ಮ ಕೂಟದ ಸದಸ್ಯರುಗಳೇ ಇರುವುದರಿಂದ ಎಲ್ಲರೂ ಸಂತೋಷದಿಂದ, ಸ್ಪರ್ಧಾತ್ಮಕವಾಗಿ ಆಟವನ್ನು ಆಡಿರಿ. ವೈಷಮ್ಯ ಬೇಡ, ಜಿದ್ದಿನಿಂದ ಆಟವನ್ನು ಆಡಿರಿ ಎಂದು ಶುಭ ಕೋರಿದರು.

ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಕಬ್ಬೂರು ಮಾತನಾಡಿ, ಈ ಕ್ರಿಕೆಟ್ ಅನ್ನುವುದು ಶಕ್ತಿ ಮತ್ತು ಯುಕ್ತಿಯ ಸಮ್ಮಿಲನದ ಆಟವಾಗಿದೆ. ಈ ಕಪ್‌ಗಳನ್ನು ನೋಡಿದರೆ ನಮಗೂ ಆಟ ಆಡಬೇಕು ಎನ್ನಿಸುತ್ತಿದೆ. ಕ್ರಿಕೆಟ್ ವಿಶ್ವಖ್ಯಾತಿಯನ್ನು ಪಡೆದಿದೆ. ವರದಿಗಾರರ ಕೂಟದಿಂದ ನಾಲ್ಕು ತಂಡಗಳು ಫ್ರಾಂಚೈಸಿಗಳನ್ನಾಗಿ ಮಾಡಿಕೊಂಡು ಆಟ ಆಡುತ್ತಿರುವುದು ಸಂತೋಷದ ವಿಷಯ ಎಂದರು.

ಮಾಜಿ ಅಧ್ಯಕ್ಷ ಬಸವರಾಜ ದೊಡ್ಡಮನಿ ಮಾತನಾಡಿ, ಇಲ್ಲಿ ಎಲ್ಲರೂ ಕೂಡಿ ಒಂದಾಗಿ ಕ್ರಿಕೆಟ್ ಆಡಲು ಸೇರಿದ್ದೀರಿ. ಇಂದಿನ ದಿನಗಳಲ್ಲಿ ಪರಸ್ಪರ ಹೊಂದಾಣಿಕೆಯಿಂದ ಆಟವನ್ನು ಆಡುವುದು ಬಹಳ ಮುಖ್ಯವಾಗಿದೆ. ಎಲ್ಲರೂ ಪರಸ್ಪರ ಪ್ರೀತಿ - ವಿಶ್ವಾಸದಿಂದ ಆಟವನ್ನು ಆಡಿರಿ. ಏನೇ ಕಷ್ಟ ಬಂದರೂ ಸಹಾ ಎಲ್ಲರೂ ಜೊತೆಯಲ್ಲಿ ಇರುತ್ತೇವೆ. ಎಲ್ಲರೂ ಕೂಡಾ ಸ್ಪರ್ಧಾ ಮನೋಭಾವದಿಂದ ಆಟವನ್ನು ಆಡಿರಿ ಎಂದು ಶುಭ ಕೋರಿದರು.

ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ ಎಸ್.ಬಡದಾಳ್ ಮಾತನಾಡಿ, ಪಂದ್ಯಾವಳಿಯಲ್ಲಿ ನಾಲ್ಕು ರಾಜಮನೆತನಗಳ ಹೆಸರು ಇರುವುದರಿಂದ ಕಿಚ್ಚು ಸ್ವಲ್ಪ ಜಾಸ್ತಿ ಇದೆ. ನಾವು ಎಲ್ಲಾ ಒಂದೇ ಮನೆಯವರು. ಈ ಕ್ರೀಡಾಕೂಟದಲ್ಲಿ ಸ್ಪರ್ಧೆ ಇರಲಿ, ಎಲ್ಲಾ ತಂಡಗಳಲ್ಲೂ ಆರೋಗ್ಯಕರ ಪೈಪೋಟಿ ಇರಲಿ ಎಂದು ಕ್ರೀಡಾಪಟುಗಳಿಗೆ ಶುಭ ಕೋರಿದರು.

ಕೂಟದಿಂದ ಚಾಲುಕ್ಯ, ಹೊಯ್ಸಳ, ಚಾಲುಕ್ಯ, ಕದಂಬ ಎಂಬ ನಾಲ್ಕು ತಂಡಗಳನ್ನು ಮಾಡಲಾಗಿತ್ತು. ಮೊದಲ ದಿನದ ಪಂದ್ಯಗಳು ನಡೆದವು. ಪೊಲೀಸ್ ತಂಡದೊಂದಿಗೂ ವರದಿಗಾರರ ಕೂಟದ ಕ್ರೀಡಾಪಟುಗಳು ಸೆಣಸಿದರು.

ಪೂರ್ವ ವಲಯ ಐಜಿಪಿ ರಮೇಶ್ ಬಾನೋಟ್, ಎಸ್ಪಿ ಉಮಾ ಪ್ರಶಾಂತ್, ಜಿಲ್ಲಾ ಪೊಲೀಸ್ ಹೆಚ್ಚುವರಿ ಪೊಲೀಸ್ ಅಧೀಕ್ಷಕರಾದ ವಿಜಯಕುಮಾರ ಎಂ.ಸಂತೋಷ, ಜಿ. ಮಂಜುನಾಥ ಪಂದ್ಯಾವಳಿ ವೀಕ್ಷಣೆ ಮಾಡಿ ಕ್ರೀಡಾಪಟುಗಳಿಗೆ ಶುಭಾಷಯ ಹಾರೈಸಿದರು.

## ನಗರದಲ್ಲಿ ಇಂದು ಶ್ರೀ ಬೀರಲಿಂಗೇಶ್ವರ ಕಾರ್ತಿಕ

ದುರ್ಗಾಂಬಿಕಾ ಸರ್ಕಲ್‌ನಲ್ಲಿ ಇರುವ ಶ್ರೀ ಬೀರಲಿಂಗೇಶ್ವರ ಕಡೇ ಕಾರ್ತಿಕೋತ್ಸವವು ಇಂದು ಜರುಗಲಿದೆ. ಅಂದು ಬೆಳಿಗ್ಗೆ 8 ಗಂಟೆಗೆ ಶ್ರೀ ಬೀರಲಿಂಗೇಶ್ವರ ಸ್ವಾಮಿಗೆ ವಿಶೇಷ ಮಹಾ ಮಂಗಳಾರತಿ ನಡೆಯಲಿದೆ.

# ನಿರುಪಯುಕ್ತ ವಸ್ತುಗಳ ಮರುಬಳಕೆಯ ಕಡೆಗೆ ಜನರು ಹೆಚ್ಚು ಗಮನ ಹರಿಸಬೇಕಾಗಿದೆ



**ನಮ್ಮ ದಾವಣಗೆರೆ ಫೌಂಡೇಷನ್‌ನ ಮನೆ - ಮನೆಗೆ ತೆರಳಿ ಬಟ್ಟೆ ಕೈಚೀಲ ವಿತರಿಸಿ, ವಿನೂತನ ಕಾರ್ಯಕ್ರಮದಲ್ಲಿ ಪ್ರಸನ್ನಕುಮಾರ್**

ದಾವಣಗೆರೆ, ಡಿ. 21- ನಿರುಪಯುಕ್ತ ವಸ್ತುಗಳ ಮರುಬಳಕೆಯ ಕಡೆಗೆ ಜನರು ಹೆಚ್ಚು ಗಮನ ಹರಿಸಬೇಕಾಗಿದ್ದು, ಸಿಂಗಲ್ ಯೂಸ್ ಪ್ಲಾಸ್ಟಿಕ್ ಪರಿಸರಕ್ಕೆ ದೊಡ್ಡ ಗಂಡಾಂತರವಾಗಿದೆ ಎಂದು ನಗರಸಭಾ ಸದಸ್ಯ ಪ್ರಸನ್ನಕುಮಾರ್ ತಿಳಿಸಿದರು.

ನಗರದ ನಮ್ಮ ದಾವಣಗೆರೆ ಫೌಂಡೇಷನ್ ಅವರು 24ನೇ ವಾರ್ಡ್‌ನಲ್ಲಿ ಏರ್ಪಡಿಸಿದ್ದ ಮನೆ ಮನೆಗೆ ತೆರಳಿ ಬಟ್ಟೆ ಕೈಚೀಲ ವಿತರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಈ ರೀತಿಯ ಕಾರ್ಯಕ್ರಮವು ಘನತ್ಯಾಜ್ಯ ವಿಲೇವಾರಿಯ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆ ಸಾಧ್ಯ. ಕೇವಲ ಪರಿಸರ ದಿನಾಚರಣೆಯ, ಒಂದು ದಿನದ ಪರಿಸರ ಪ್ರೀತಿಯ ಬದಲು, ವರ್ಷ ಪೂರ್ತಿ ಪ್ಲಾಸ್ಟಿಕ್ ಮುಕ್ತ ಬದುಕನ್ನು ನಡೆಸೋಣ. ಸಾರ್ವಜನಿಕರು ಈ ಒಂದು ವಿನೂತನ ಕಾರ್ಯಕ್ರಮಕ್ಕೆ ಬೆಂಬಲ ನೀಡಿ ಸಹಕರಿಸಬೇಕೆಂದು ಮನವಿ ಮಾಡಿದರು.

ವಸ್ತುಗಳ ಮರುಬಳಕೆ ಕುರಿತು ಜಾಗೃತಿ ಕಾರ್ಯಕ್ರಮವಷ್ಟೇ ಅಲ್ಲ, ಬದಲಾಗಿ ಕಾರ್ಯ ರೂಪಕ್ಕೆ ತರುವ ನಮ್ಮ ದಾವಣಗೆರೆ ಫೌಂಡೇಷನ್ ತಂಡದ ದಿಟ್ಟ ಹೆಜ್ಜೆಯಾಗಿದ್ದು, ಮನೆ ಮನೆಗೆ ತೆರಳಿ ಹಳೆಯ ನಿರುಪಯುಕ್ತ ಬೆಡ್ ಶೀಟ್, ರಗ್ಗು, ಕೌದಿ ಇತರೆ ವಸ್ತುಗಳನ್ನು ಸಂಗ್ರಹಿಸಲಿದ್ದು, ಸಂಗ್ರಹಿಸಿದ ವಸ್ತುಗಳನ್ನು ಜೀವನೋಪಾಯಕ್ಕಾಗಿ ಟೈಲರಿಂಗ್ ಕೌಶಲ್ಯವನ್ನು ಕಲಿತ ಹೆಣ್ಣು ಮಕ್ಕಳಿಗೆ ನೀಡಿ ಅವರಿಂದ ಆಕರ್ಷಕವಾದ ಬ್ಯಾಗ್‌ಗಳನ್ನು ಹೊಲಿಸಲಾಗುತ್ತದೆ. ಇದಕ್ಕೆ ನಮ್ಮ ನೆರವು ಸಂಪೂರ್ಣ ಇದೆ ಎಂದು ಪ್ರಸನ್ನ ಕುಮಾರ್ ತಿಳಿಸಿದರು.

ಮಾಜಿ ಮೇಯರ್ ಶ್ರೀಮತಿ ಸುಧಾ ಜಯರುದ್ರೇಶ್ ನೇತೃತ್ವದಲ್ಲಿ ಈ ಆಕರ್ಷಕ ಬ್ಯಾಗ್‌ಗಳನ್ನು ಮನೆ ಮನೆಗೆ ತೆರಳಿ ನಾಗರಿಕರಿಗೆ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖಂಡರಾದ ಪದ್ಮನಾಭ ಶೆಟ್ರು, ಉಷಾ ಶೆಟ್ಟಿ, ಸಚಿನ್ ವೆರ್ಣೇಕರ್, ನಮ್ಮ ದಾವಣಗೆರೆ ಸಂಘದ ಪವನ್, ಉಲ್ಲಾಸ್ ರೇವಣಕರ್, ಅರುಣ್ ಕೋಟೆ, ವಿಕಾಸ್, ಅಂಬರೀಶ್, ಅರ್ಜುನ್, ಚೇತನ್, ಸೋಮಶೇಖರ್, ಪ್ರಭು, ಸೋಹನ್, ಲಿಂಗರಾಜ್, ನಾಗಲಕ್ಷ್ಮಿ, ರಕ್ಷಿತಾ, ಹೇಮಾವತಿ, ತೇಜಸ್ವಿನಿ, ಯಶೋಧ, ಕಾವ್ಯ, ಪವನ್, ಕಾರ್ತಿಕ್ ದುಗ್ಗೇಶ್, ಹೇಮಂತ್, ವಿನಯ್ ಉಪಸ್ಥಿತರಿದ್ದರು.

# ಕೇಂದ್ರ ಗೃಹ ಸಚಿವ ಅಮಿತ್ ಷಾ ರಾಜನಾಮೆಗೆ ಗೋಣಪ್ಪ ಆಗ್ರಹ



ದಾವಣಗೆರೆ, ಡಿ.18- ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಅವಮಾನ ಮಾಡಿರುವ ಕೇಂದ್ರ ಗೃಹ ಸಚಿವ ಅಮಿತ್ ಷಾ ಅವರು ದೇಶದ ಜನತೆಯ ಕ್ಷಮೆ ಯಾಚಿಸಬೇಕು. ಕೂಡಲೇ ರಾಜೀನಾಮೆ ನೀಡಬೇಕು ಎಂದು ಮಹಾನಗರ ಪಾಲಿಕೆ ಸದಸ್ಯ ಎಲ್.ಡಿ .ಗೋಣಪ್ಪ ಮತ್ತು ನಗರ ಪಾಲಿಕೆಯ ನಗರ ಸ್ವಚ್ಛ ಪೌರ ಕಾರ್ಮಿಕರ ಸಂಘದ ಅಧ್ಯಕ್ಷ ಜಿ. ಬಸವರಾಜ್ ಆಗ್ರಹಿಸಿದ್ದಾರೆ.

ಲೋಕಸಭಾ ಅಧಿವೇಶನದಲ್ಲಿ ಡಾ.ಅಂಬೇಡ್ಕರ್ ಅವರ ಬಗ್ಗೆ ಅಮಿತ್ ಷಾ ಮಾತನಾಡಿರುವುದು ಖಂಡನೀಯ ಎಂದರು.

ಕೂಡಲೇ ಸುಪ್ರೀಂ ಕೋರ್ಟ್ ಹಾಗೂ ರಾಷ್ಟ್ರಪತಿಗಳು ಕೇಂದ್ರ ಸಚಿವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಸಂವಿಧಾನ ಶಿಲ್ಪಿಯ ಬಗ್ಗೆ ಕೇವಲವಾಗಿ ಮಾತನಾಡುವುದರಿಂದ ದೇಶದ ಜನತೆಗೆ ಹಾಗೂ ಅಂಬೇಡ್ಕರ್ ಅಭಿಮಾನಿಗಳಿಗೆ ನೋವು ಉಂಟಾಗಿದೆ. ದೇಶದ ದಲಿತ, ದಮನಿತ ಹಾಗೂ ಅಲ್ಪಸಂಖ್ಯಾತ ಸಮಾಜಗಳ ದೊಡ್ಡ ಶಕ್ತಿಯೇ ಅಂಬೇಡ್ಕರ್ ಆಗಿದ್ದು, ಇವರ ಬಗ್ಗೆ ಕೀಳಾಗಿ ಮಾತನಾಡಿರುವುದು ನಮಗೆ ಬೇಸರ ತಂದಿದೆ. ಅಮಿತ್ ಷಾ ದೇಶದ ಜನತೆಯ ಮುಂದೆ ಕ್ಷಮೆಯಾಚಿಸಬೇಕೆಂದು ಗೋಣಪ್ಪ ಮತ್ತು ಬಸವರಾಜ್ ಒತ್ತಾಯಿಸಿದ್ದಾರೆ.

# ಸಚಿವ ಎಸ್ಸೆಸ್ಸೆಂ ಮೇಲಿನ ಆಪಾದನೆ ಸತ್ಯಕ್ಕೆ ದೂರ

**ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ವಿರುದ್ಧ ಕಿಡಿ ಕಾರಿದ ಮೇಯರ್ ಚಮನ್ ಸಾಬ್**

ದಾವಣಗೆರೆ, ಡಿ.21- ಜಿಲ್ಲಾ ಉಸ್ತುವಾರಿ ಸಚಿವರ ವಿರುದ್ಧ ಚನ್ನಗಿರಿ ಶಾಸಕ ಶಿವಗಂಗಾ ಬಸವರಾಜ್ ಮಾಡಿದ ಆಪಾದನೆ ಸತ್ಯಕ್ಕೆ ದೂರವಾಗಿದೆ. ಕೂಡಲೇ ಅವರು ಸಚಿವರ ಬಳಿ ಕ್ಷಮೆ ಯಾಚಿಸಬೇಕೆಂದು ಪಾಲಿಕೆ ಮೇಯರ್ ಕೆ. ಚಮನ್ ಸಾಬ್ ಒತ್ತಾಯಿಸಿದರು.

ಪಾಲಿಕೆಯ ಮೇಯರ್ ಕೊಠಡಿಯಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿವಗಂಗಾ ಬಸವರಾಜ ಅವರು ನಶೆಯಲ್ಲಿ ಮಾತನಾಡಿದ್ದಾರೆ. ಅವರ ಹೇಳಿಕೆಗೆ ನನ್ನ ದಿಕ್ಕಾರ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೊನ್ನೆ ನಡೆದ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ 'ಪಾಲಿಕೆ ಸದಸ್ಯನಿಂದ ಶಾಸಕ ಸ್ಥಾನಕ್ಕೆ ಪ್ರಮೋಷನ್ ಆಗಲು ಎಸ್.ಎಸ್. ಮಲ್ಲಣ್ಣನವರೇ ಕಾರಣ' ಎಂದು ಸ್ವತಃ ಚನ್ನಗಿರಿ ಶಾಸಕರೇ ಹೇಳಿದ್ದರು. ಈ ಋಣವನ್ನು ಅವರು ಮರೆಯಬಾರದು ಎಂದರು.

ಬೆಂಗಳೂರಿನಲ್ಲಿ ಇರುವುದನ್ನು ಬಿಟ್ಟು, ಚನ್ನಗಿರಿ ಕ್ಷೇತ್ರದಲ್ಲಿ ಸುತ್ತಾಡಿ ಜನರ ಸೇವೆ ಮಾಡಿ. ಶಾಸಕನಾಗಿದ್ದೇನೆ ಎಂದು, ದೊಡ್ಡವರ ಬಗ್ಗೆ ಮಾತನಾಡುತ್ತಾ ಹೋದರೆ, ಮುಂದಿನ ಸಲ ಜನ ಪಾಠ ಕಲಿಸುತ್ತಾರೆ ಎಂದು ಅವರು ಬಸವರಾಜ್ ಅವರಿಗೆ ಎಚ್ಚರಿಕೆ ನೀಡಿದರು.

ಜಿಲ್ಲೆಯಲ್ಲಿ ಬಿಜೆಪಿ ಭದ್ರಕೋಟೆ ಉರುಳಿಸಲು ಎಸ್.ಎಸ್. ಮಲ್ಲಿಕಾರ್ಜುನ್ ಹಾಗೂ ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಅವರೇ ಕಾರಣ. ಅಷ್ಟೊಂದು ಪಕ್ಷ ನಿಷ್ಠವಾಗಿ ಕಾಂಗ್ರೆಸ್ ಪಕ್ಷಕ್ಕೆ ಶ್ರಮಿಸುತ್ತಿರುವ ಸಚಿವರ ವಿರುದ್ಧ ಆಪಾದನೆ ಮಾಡುವುದು ಸರಿಯಲ್ಲ ಎಂದು ಎಚ್ಚರಿಸಿದರು.

ಸಂವಿಧಾನದ ಬಲದಿಂದಲೇ ಕೇಂದ್ರ ಗೃಹ ಮಂತ್ರಿ ಆದ ಅಮಿತ್ ಷಾ ಅವರು, ಅಂಬೇಡ್ಕರ್ ಅವರಿಗೆ ಅವಮಾನ ಮಾಡಿದ್ದಾರೆ. ಹಾಗಾಗಿ ಅವರು ದೇಶದ ಜನತೆ ಬಳಿ ಕ್ಷಮೆ ಕೇಳಬೇಕು ಮತ್ತು ಕೂಡಲೇ ಸಚಿವ ಸ್ಥಾನದಿಂದ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು.

ಪಾಲಿಕೆಯ ಉಪಮೇಯರ್ ಸೋಗಿ ಶಾಂತಕುಮಾರ್ ಮಾತನಾಡಿ, ಬೆಳಗಾವಿಯಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದ ವೇಳೆ ಸಿ.ಟಿ ರವಿ ಅವರು ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಬಗ್ಗೆ ಅಸಂವಿಧಾನಿಕ ಪದ ಬಳಸಿರುವುದು ಖಂಡನೀಯ ಎಂದರು.

ಇಡೀ ಪಂಚಮಸಾಲಿ ಸಮಾಜ ಅವರ ಹಿಂದೆ ಇದೆ. ಹಾಗಾಗಿ ಸಿ.ಟಿ ರವಿ ಕೂಡಲೇ ಅವರಿಗೆ ಕ್ಷಮೆ ಯಾಚಿಸಬೇಕು ಇಲ್ಲದಿದ್ದರೆ ನೀವು ಭೇಟಿ ನೀಡುವ ಎಲ್ಲಾ ಕಾರ್ಯಕ್ರಮಗಳಲ್ಲೂ ಕಪ್ಪು ಬಾವುಟ ಪ್ರದರ್ಶಿಸಲಿದ್ದೇವೆ ಎಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಕೆಪಿಸಿಸಿ ವಕ್ತಾರ ಡಿ. ಬಸವರಾಜ್, ಪಾಲಿಕೆ ಸದಸ್ಯರಾದ ಎ. ನಾಗರಾಜ್, ಗಡಿಗುಡಾಳ್ ಮಂಜುನಾಥ್, ಸವಿತಾ ಗಣೇಶ್ ಹುಲ್ಲುಮನೆ, ಆಶಾ ಉಮೇಶ್, ಸುಧಾ ಇಟ್ಟಿಗುಡಿ, ಮುಖಂಡರಾದ ವಾಣಿ ಬಕ್ಕೇಶ್, ಶಿವಮೂರ್ತಿ, ಅಶೋಕ್, ಜಗದೀಶ್, ಗೋಪಿನಾಯಕ ಮತ್ತು ಇತರರು ಉಪಸ್ಥಿತರಿದ್ದರು.

# ಸಿ.ಟಿ. ರವಿ ನಡೆಗೆ ಸವಿತಾ ಹುಲ್ಲುಮನೆ ಖಂಡನೆ



ದಾವಣಗೆರೆ, ಡಿ. 21 - ವಿಧಾನ ಪರಿಷತ್ತಿನ ಅಧಿವೇಶನದ ಸಂದರ್ಭದಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ರವರಿಗೆ ಶಾಸಕ ಸಿ.ಟಿ. ರವಿ ಅವರು ಬಳಸಿದ ಪದ ಅತ್ಯಂತ ಖಂಡನೀಯವಾಗಿದು, ಕೂಡಲೇ ಅವರನ್ನು ಸಭಾಪತಿಗಳು ವಿಧಾನ ಪರಿಷತ್ತಿನಿಂದ ವಜಾ ಮಾಡಬೇಕು ಹಾಗೂ ಅವರಿಗೆ ಅತ್ಯಂತ ಕಠಿಣ ಶಿಕ್ಷೆ ನೀಡಬೇಕು ಎಂದು ಮಹಾನಗರ ಪಾಲಿಕೆ ನಗರ ಯೋಜನೆ ಮತ್ತು ಸುಧಾರಣೆ ಸ್ಥಾಯಿ ಸಮಿತಿ ಅಧ್ಯಕ್ಷರಾದ ಶ್ರೀಮತಿ ಸವಿತಾ ಹುಲ್ಲುಮನೆ ಗಣೇಶ್ ಅಗ್ರಹಿಸಿದಾರೆ.

ಭಾರತ ಮಾತೆಗೆ ಜೈಕಾರ ಹಾಕೋ ಗುತ್ತಿಗೆ ಇವರೇ ಪಡೆದಿರೋ ರೀತಿಯಲ್ಲಿ ಆಡುವ ಬಿಜೆಪಿಗರು ಹೆಣ್ಣು ಮಕ್ಕಳಿಗೆ ನೀಡುವ ಗೌರವ ಇದೇನಾ, ಈ ರೀತಿಯಲ್ಲಿ ಹೆಣ್ಣು ಮಕ್ಕಳಿಗೆ ಯಾವುದೇ ಪಕ್ಷದ ನಾಯಕರು ಮಾತಾಡಿದರೆ ಅಂತವರನ್ನು ಉಗ್ರ ಶಿಕ್ಷೆಗೆ ಗುರಿಪಡಿಸುವ ಕಾನೂನು ತರಬೇಕಿದೆ. ಅದು ರಾಜಕಾರಣಿಗಳೇ ಇರಲಿ ಸಾಮಾನ್ಯರೇ ಇರಲಿ ಎಲ್ಲರಿಗೂ ಕಠಿಣ ಶಿಕ್ಷೆಯಾಗಬೇಕು ಎಂದು ಅವರು ಒತ್ತಾಯಿಸಿದರು.

## ಹದಡಿಯಲ್ಲಿ ಇಂದು ಬೀರಲಿಂಗೇಶ್ವರ ಸ್ವಾಮಿ ಕಾರ್ತಿಕ

ದಾವಣಗೆರೆ ತಾಲ್ಲೂಕಿನ ಹದಡಿ ಗ್ರಾಮದ ಶ್ರೀ ಬೀರಲಿಂಗೇಶ್ವರ ಸ್ವಾಮಿ ಕಾರ್ತಿಕೋತ್ಸವವು ಇಂದು ರಾತ್ರಿ ಜರುಗಲಿದೆ.

ರಾತ್ರಿ 9 ಕ್ಕೆ ಬಾಳೆ ದಿಂಡಿನಿಂದ ಅಲಂಕಾರವಾದ ಕದಲಿ ಹಾಗೂ ಇಡೀ ರಾತ್ರಿಯಲ್ಲಾ ಈರುಗಾರರಿಂದ ಡೊಳ್ಳುಗಳ ಕುಣಿತಕ್ಕೆ ತಕ್ಕಂತೆ ಈರುಗಾರರು ಕುಣಿಯುತ್ತಾರೆ. ಅನಂತರ ಬೀರ ದೇವರುಗಳ ಮೇಲೆ ಪದಗಳನ್ನು ಹಾಡುತ್ತಾರೆ. ಸದರಿ ರಾತ್ರಿ ಸ್ವಾಮಿಗೆ 101 ಪೂಜೆ ಸಲ್ಲಿಸುವ ಮೂಲಕ ಸ್ವಾಮಿಯ ಕಾರ್ತಿಕೋತ್ಸವ ಆಚರಿಸಲಾಗುವುದು.

ನಾಳೆ ಈರುಗಾರರು ಡೊಳ್ಳುಗಳ ಕುಣಿತದಿಂದ ಎಲ್ಲಾ ದೇವಸ್ಥಾನಗಳಿಗೆ ಹೋಗಿ ಪೂಜೆ ಸಲ್ಲಿಸುತ್ತಾರೆ. ಸೋಮವಾರ ಬೆಳಿಗ್ಗೆ 8.30 ರಿಂದ 10.30 ರವರೆಗೆ ಜವಳ ಕಾರ್ಯಕ್ರಮ ನಡೆಯಲಿದೆ.

24 ರ ಮಂಗಳವಾರ ಬೆಳಿಗ್ಗೆ 8.30 ಕ್ಕೆ ಕೆಂಡದ ಗದ್ದಿಗೆಗೆ ಪೂಜೆ ನಡೆಯಲಿದೆ. ನಂತರ ಮುಳ್ಳು ಗದ್ದಿಗೆಯಿಂದ ಬೀರದೇವರು ಮೆರವಣಿಗೆ ಮೂಲಕ ಕೆಂಡದ ಗದ್ದುಗೆಗೆ ತೆರಳಿ ಸಂಜೆ 5.30 ಕ್ಕೆ ಕೆಂಡದಾರ್ಚನೆ ನಡೆಯಲಿದೆ. ಮುಳ್ಳು ಗದ್ದುಗೆಯ ಮೇಲೆ ಸ್ವಾಮಿಯ ಪ್ರದರ್ಶನವಾಗುವುದು.

# ಬಸವನಕೋಟೆ ಗ್ರಾ.ಪಂ.ಅಧ್ಯಕ್ಷೆ ವಿರುದ್ಧ ಅವಿಶ್ವಾಸ ಸಾಬೀತು



ಜಗಳೂರು, ಡಿ.21- ತಾಲ್ಲೂಕಿನ ಬಸವನಕೋಟೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ರೇಖಾ ತಿಮ್ಮೇಶ್ ವಿರುದ್ಧ ಸದಸ್ಯರುಗಳು ಒಮ್ಮತದಿಂದ ಮಂಡಿಸಿದ ಅವಿಶ್ವಾಸ ಅಂಗೀಕಾರವಾಯಿತು.

ಒಟ್ಟು 14 ಜನ ಸದಸ್ಯರಿದ್ದು, ದಾವಣಗೆರೆ ಉಪವಿಭಾಗಾಧಿಕಾರಿ ಸಂತೋಷ್ ಕುಮಾರ್ ಅವರ ಸಮ್ಮುಖದಲ್ಲಿ ಅವಿಶ್ವಾಸ ನಿರ್ಣಯ ಮಂಡನಾ ಸಭೆಯಲ್ಲಿ 11ಜನ ಸದಸ್ಯರುಗಳು ಮಾಜಿ ಅಧ್ಯಕ್ಷರಾಗಿರುವ ರೇಖಾ ತಿಮ್ಮೇಶ್ ಅವರ ವಿರುದ್ಧ ಮತ ಚಲಾಯಿಸಿ, ಪದಚ್ಯುತಿಗೊಳಿಸಿದರು.

ಕಳೆದ ದಿನಗಳಲ್ಲಿ 15 ನೇ ಹಣಕಾಸು ಅನುದಾನದಲ್ಲಿ ಅವ್ಯವಹಾರ ಕಂಡುಬಂದ ಹಿನ್ನೆಲೆ ಗ್ರಾಮ ಪಂಚಾಯಿತಿ ಸದಸ್ಯರುಗಳು ಅಧ್ಯಕ್ಷೆ ಹಾಗೂ ಕಾರ್ಯದರ್ಶಿ ವಿರುದ್ಧ ಜಿಲ್ಲಾ ಪಂಚಾಯಿತಿ ಸಿಇಓ ಸುರೇಶ್ ಹಿಟ್ನಾಳ್ ಅವರಿಗೆ ದೂರು ಸಲ್ಲಿಸಿದ್ದರು. ಸಮಗ್ರ ತನಿಖೆ ನಡೆಸಿದ ಸಿಇಓ ಅವರು ಗ್ರೇಡ್ -2 ಕಾರ್ಯದರ್ಶಿ ಅವರನ್ನು ಅಮಾನತುಗೊಳಿಸಿದ್ದರು.ಇದರ ಬೆನ್ನಲ್ಲೇ ದೂರು ನಿಡಿದ್ದ ಗ್ರಾ.ಪಂ. ಸದಸ್ಯರ ಗುಂಪು ಅಧ್ಯಕ್ಷರನ್ನು ಪದಚ್ಯುತಿಗೊಳಿಸಲು ತೀರ್ಮಾನಿಸಿ ದಾವಣಗೆರೆ ಉಪವಿಭಾಗದ ಅಧಿಕಾರಿಗೆ ಅವಿಶ್ವಾಸ ಅರ್ಜಿ ಸಲ್ಲಿಸಿದರು.

3 ನೇ 2 ಭಾಗದ ಸದಸ್ಯರುಗಳು ಸಭೆಯಲ್ಲಿ ಕೋರಂ ಸಾಬೀತು ಪಡಿಸಿದರು. ಸಭೆ ಆರಂಭವಾಯಿತು. ಸಂದರ್ಭದಲ್ಲಿ ಸದಸ್ಯರುಗಳ ಅವಿಶ್ವಾಸ ನಿರ್ಣಯ ಮಂಡಿಸಿದರು . ಗ್ರಾ.ಪಂ.ಅಧ್ಯಕ್ಷೆ ರೇಖಾ ತಿಮ್ಮೇಶ್ ಸೇರಿದಂತೆ ಬೆಂಬಲಿಸಿದರು ಗೈರಾಗಿದ್ದರು.

ಈ ಸಂದರ್ಭದಲ್ಲಿ ಗ್ರಾ.ಪಂ. ಮಾಜಿ ಅಧ್ಯಕ್ಷರಾದ ರೇಖಾ ಕೊಟ್ರೇಶ್, ಮಂಜಮ್ಮ ಭೀಮಪ್ಪ, ಉಪಾಧ್ಯಕ್ಷೆ ನಗೀನಬಾನು, ಸದಸ್ಯರಾದ ದೇವರಾಜ್, ಜ್ಯೋತಿಲಿಂಗಪ್ಪ, ಶರಣಪ್ಪ, ಕೊಟ್ರೇಶಪ್ಪ, ಬಿ.ಟಿ.ಬಸವರಾಜ್, ಲಲಿತಮ್ಮ, ಮರಿಯಮ್ಮ ಇದ್ದರು.

# ಎಐಸಿಸಿ ಅಧಿವೇಶನದ ವೀಕ್ಷಕರಾಗಿ ಡಿ.ಬಿ.



ದಾವಣಗೆರೆ, ಡಿ. 21- ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ನೇತೃತ್ವದಲ್ಲಿ 1924 ರ ಡಿಸೆಂಬರ್ 26 ಹಾಗೂ 27 ರಂದು ಬೆಳಗಾವಿಯಲ್ಲಿ ಎಐಸಿಸಿ ಅಧಿವೇಶನ ನಡೆದಿತ್ತು. 100 ವರ್ಷ ಪೂರೈಸಿದ ಕಾರಣಕ್ಕೆ ಗಾಂಧಿ ಭಾರತ ಹೆಸರಿನಡಿ ಐತಿಹಾಸಿಕ ಎಐಸಿಸಿ ಅಧಿವೇಶನದ ಶತಮಾನೋತ್ಸವವನ್ನು ಕೆಪಿಸಿಸಿ ಹಮ್ಮಿಕೊಂಡಿದೆ.

ಇದೇ 26 ಹಾಗೂ 27ರಂದು ಬೆಳಗಾವಿಯಲ್ಲಿ ರಾಷ್ಟ್ರ ಮಟ್ಟದ ಕಾರ್ಯಕ್ರಮವನ್ನು ಏರ್ಪಡಿಸಲಾಗಿದ್ದು, ಇದರ ಯಶಸ್ವಿಗೆ ಕೆಪಿಸಿಸಿ ವೀಕ್ಷಕರನ್ನಾಗಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ. ಬಸವರಾಜ್ ಅವರನ್ನು ನೇಮಕ ಮಾಡಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆದೇಶ ಹೊರಡಿಸಿದ್ದಾರೆ.

# ವೃತ್ತಿ ನಾಟಕ ರಚನಾ ಶಿಬಿರಕ್ಕೆ ಅರ್ಜಿ ಆಹ್ವಾನ

ದಾವಣಗೆರೆ, ಡಿ.21- ವೃತ್ತಿ ರಂಗಭೂಮಿ ರಂಗಾಯಣ ಕೇಂದ್ರ ಮತ್ತು ಕರ್ನಾಟಕ ನಾಟಕ ಅಕಾಡೆಮಿಯ ಸಹಯೋಗದಲ್ಲಿ 5 ದಿನಗಳ 'ವೃತ್ತಿ ನಾಟಕ ರಚನಾ ಶಿಬಿರಕ್ಕೆ' ಅರ್ಜಿ ಆಹ್ವಾನಿಸಲಾಗಿದೆ.

ಸ್ಪಷ್ಟವಾಗಿ ಕನ್ನಡ ಓದಲು, ಬರೆಯಲು ಬರುವ ಮತ್ತು ರಂಗಸಾಹಿತ್ಯ ಕುರಿತು ಪ್ರಾಥಮಿಕ ಜ್ಞಾನವುಳ್ಳ 18 ವರ್ಷ ಮೇಲ್ಪಟ್ಟವರು ಜ.20ರ ಒಳಗೆ ಅರ್ಜಿ ಸಲ್ಲಿಸಬಹುದು.

ಆಯ್ಕೆಯಾದ ಅಭ್ಯರ್ಥಿಗಳಿಗೆ ಊಟ ವಸತಿ ಸೌಲಭ್ಯ ನೀಡಲಾಗುವುದು. 'ನಿರ್ದೇಶಕರು/ ವಿಶೇಷಾಧಿಕಾರಿಗಳು, ವೃತ್ತಿ ರಂಗಭೂಮಿ ರಂಗಾಯಣ, ಕೊಠಡಿ ಸಂಖ್ಯೆ:38 ಜಿಲ್ಲಾಡಳಿತ ಭವನ, ಪಿ.ಬಿ ರಸ್ತೆ ದಾವಣಗೆರೆ ಇಲ್ಲಿಗೆ ಅರ್ಜಿ ಸಲ್ಲಿಸಬೇಕಿದ್ದು, ಮಾಹಿತಿಗಾಗಿ 9341010712 ಸಂಪರ್ಕಿಸಿ.


**ಘನತೆವೆತ್ತ ಪ್ರಧಾನ ಸಿವಿಲ್ ಜಡ್ಜ್ (ಹಿರಿಯ ವಿಭಾಗ) ಹಾಗೂ ಸಿ.ಜೆ.ಎಂ. ನ್ಯಾಯಾಲಯದಲ್ಲಿ, ದಾವಣಗೆರೆ**

ಅಸಲು ದಾವೆ ನಂ. 32/2020

**ವಾದಿ :** ತಿಪ್ಪೇಸ್ವಾಮಿ ಹೆಚ್.ಇ ವಿರುದ್ಧ

**ಪ್ರತಿವಾದಿಯರು :** ಎ.ಈಶ್ವರಪ್ಪ ಹಾಗೂ ಇನ್ನಿಬ್ಬರು

**ಸಮನ್ಸ್‌ದಾರರು : 1ನೇ ಪ್ರತಿವಾದಿ :** ಪಿ. ಈಶ್ವರಪ್ಪ ಬಿನ್ ಲೇಟ್ ದ್ಯಾಮಪ್ಪರ ರುದ್ರಪ್ಪ, ವಯಸ್ಸು ಸುಮಾರು 69 ವರ್ಷ.

2ನೇ ಪ್ರತಿವಾದಿ : ತಿಪ್ಪೇಸ್ವಾಮಿ ಹೆಚ್.ಇ. ಬಿನ್ ಎ. ಈಶ್ವರಪ್ಪ, ವಯಸ್ಸು ಸುಮಾರು 54 ವರ್ಷ, ಇಬ್ಬರೂ ವಾಸ : ಡೋರ್ ನಂ.556, 3ನೇ ಕ್ರಾಸ್, ಪಾದಘಟ್ಟೆ, ಹಳೇಚಳ್ಳಕೆರೆ ಓಲ್ಡ್ ಟೌನ್, ಚಿತ್ರದುರ್ಗ ಜಿಲ್ಲೆ.

**ಸಿವಿಲ್ ಪ್ರಕ್ರಿಯಾ ಸಂಹಿತೆಯ ಆದೇಶ 5. ನಿಯಮ 20 (ಎ) ರಡಿಯಲ್ಲಿ ಹೊರಡಿಸಲಾದ ಪ್ರಕಟಣಾ ಸಮನ್ಸ್**

ವಾದಿಯು ಪ್ರತಿವಾದಿಯರ ವಿರುದ್ಧ ಘೋಷಣೆ ಹಾಗೂ ಶಾಶ್ವತ ಪ್ರತಿಬಂಧಕ ತೀರ್ಪು ಮತ್ತು ಡಿಕ್ರಿಯ ಬಗ್ಗೆ ಪಾರ್ಥಿಸಿ ಮೂಲ ದಾವೆಯನ್ನು ದಾಖಲಾತಿಗಳ ಸಹಿತವಾಗಿ ಸಲ್ಲಿಸಿದ್ದು, ಖುದ್ದು ಹಾಗೂ ನೋಂದಣಿ ಅಂಚೆ ಮೂಲಕ ರವಾನಿಸಲಾದ ದಾವೆಯ ಸಮನ್ಸ್ ಪ್ರತಿವಾದಿ ನಂ.1 ಮತ್ತು 2ನೇಯವರಿಗೆ ಜಾರಿಯಾಗದೇ ಕೋರ್ಟ್ ಕಡತಕ್ಕೆ ಹಿಂದಿರುಗಿದ ನಿಮಿತ್ಯವಾಗಿ ಈ ಪ್ರಕಟಣೆಯನ್ನು ಸಾರ್ವಜನಿಕವಾಗಿ ಹೊರಡಿಸಿದ್ದು, ದಿನಾಂಕ: 29.01.2025 ರಂದು ಬೆಳಿಗ್ಗೆ 11.00 ಗಂಟೆಗೆ ಇರುವ ಮುದ್ದತ್ತಿನಲ್ಲಿ ಖುದ್ದಾಗಿ ಅಥವಾ ವಕೀಲರ ಮೂಲಕ ಹಾಜರಾಗಿ ತಮ್ಮ ತಕರಾರು ಯಾನೇ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸತಕ್ಕದ್ದು. ತಪ್ಪಿದಲ್ಲಿ ತಮ್ಮನ್ನು ಏಕಪಕ್ಷೀಯವಿಟ್ಟು ಕ್ರಮಾನುಸಾರ ಆದೇಶಿಸಲಾಗುವುದು ತಿಳಿಯಿರಿ.

ನ್ಯಾಯಾಲಯದ ಮೊಹರು ಹಾಗೂ ಸಹಿಯೊಂದಿಗೆ ದಿನಾಂಕ 20.12.2024 ರಂದು ಹೊರಡಿಸಲಾಗಿದೆ.

ನ್ಯಾಯಾಲಯದ ಆದೇಶದ ಮೇರೆಗೆ
**ಹಿರಿಯ ಶಿರಸ್ತೇದಾರರು**
ಪ್ರಧಾನ ಹಿರಿಯ ಸಿವಿಲ್ ಮತ್ತು ಸಿ.ಜೆ.ಎಂ. ಘನ ನ್ಯಾಯಾಲಯ, ದಾವಣಗೆರೆ.

**ಗೀತಾ ಬಿ.ಜಿ**
ವಕೀಲರು, ದಾವಣಗೆರೆ


# ಬಳ್ಳಾರಿಯಲ್ಲಿ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಮಂಡ್ಯ, ಡಿ. 21 - ಮಂಡ್ಯದಲ್ಲಿ ಜರುಗಿದ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಕಾರ್ಯಕಾರಿ ಸಮಿತಿಯ ಸಭೆಯು ನಾಡೋಜ ಡಾ. ಮಹೇಶ್ ಜೋಶಿಯವರ ಅಧ್ಯಕ್ಷತೆಯಲ್ಲಿ ನಡೆದು ಮುಂದಿನ 88ನೇಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಆಯೋಜನೆ ಮಾಡಲು ಕಲ್ಯಾಣ ಕರ್ನಾಟಕದ ಬಳ್ಳಾರಿ ಜಿಲ್ಲೆಯನ್ನು ಸರ್ವಾನು ಮತದಿಂದ ಆಯ್ಕೆ ಮಾಡಲಾಗಿದೆ ಎಂದು ದಾವಣಗೆರೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ಅವರು ತಿಳಿಸಿದ್ದಾರೆ. ಇದಕ್ಕಾಗಿ ಸಹಕರಿಸಿದ ರಾಜ್ಯ ಕಾರ್ಯಕಾರಣಿ ಸಮಿತಿಯ ಅಧ್ಯಕ್ಷರಿಗೆ ಹಾಗೂ ಎಲ್ಲಾ ಪದಾಧಿಕಾರಿಗಳಿಗೆ, ಬಳ್ಳಾರಿಯ ಅವಿಭಜಿತ ಜಿಲ್ಲೆಯ ಕಸಾಪದ ಅಧ್ಯಕ್ಷ ಡಾ. ನಿಷ್ಠಿ ರುದ್ರಪ್ಪ ಅವರು ಕೃತಜ್ಞತೆ ಸಲ್ಲಿಸಿದ್ದಾರೆ.

# ಒಂದು ದೇಶ - ಒಂದು ಚುನಾವಣೆ ಮಸೂದೆ

## ಸಂಸದೆ ಡಾ. ಪ್ರಭಾ ಖಂಡನೆ

ದಾವಣಗೆರೆ, ಡಿ. 21- ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ 'ಒಂದು ದೇಶ- ಒಂದು ಚುನಾವಣೆ' ಜಾರಿಯ ಉದ್ದೇಶವು ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದುರ್ಬಲಗೊಳಿಸಿ, ದೇಶವನ್ನು ಏಕಚಕ್ರಾಧಿಪತ್ಯದತ್ತ ಕೊಂಡೊಯ್ಯುವ ಷಡ್ಯಂತ್ರದಂತೆ ಕಾಣುತ್ತಿದೆ. ಮೋದಿ ಮೆಚ್ಚಿಸಲು ಮುಂದಾಗಿರುವ ಈ ಮಸೂದೆಯಿಂದ ದೇಶದ ಒಕ್ಕೂಟ ವ್ಯವಸ್ಥೆಗೆ ಮಾರಕ ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಕಿಡಿಕಾರಿದರು.

ಕೇಂದ್ರ ಸರ್ಕಾರ ಜಾರಿ ಮಾಡಿರುವ ಒಂದು ದೇಶ-ಒಂದು ಚುನಾವಣೆ ಕುರಿತು ಪ್ರತಿಕ್ರಿಯಿಸಿರುವ ಡಾ. ಪ್ರಭಾ ಮಲ್ಲಿಕಾರ್ಜುನ್, ಬದಲಾದ ರಾಜಕೀಯ ಪರಿಸ್ಥಿತಿಯಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಜನಮನ್ನಣೆ ಕಳೆದುಕೊಂಡಿರುವುದು ಇತ್ತೀಚಿನ ಲೋಕಸಭಾ ಚುನಾವಣೆ ಸೇರಿದಂತೆ, ಎಲ್ಲಾ ಚುನಾವಣೆಗಳಲ್ಲಿ ರುಜುವಾತಾಗಿದೆ. ಅದನ್ನು ಮರೆಮಾಚಲು ಮತ್ತು ವಾಮಮಾರ್ಗದಲ್ಲಿ 'ಜನ ಮತ'ವನ್ನು ತನ್ನ ಹಿತಕ್ಕೆ ತಕ್ಕಂತೆ ಮಾರ್ಪಡಿಸಿಕೊಳ್ಳಲು ಆರ್ ಎಸ್ ಎಸ್ ಮತ್ತು ಬಿಜೆಪಿ ನಡೆಸುತ್ತಿರುವ ಸಂಚಿನ ಭಾಗವೇ ಈ ಒಂದು ದೇಶ- ಒಂದು ಚುನಾವಣೆ ಆಗಿದೆ.

ಲೋಕಸಭೆ- ವಿಧಾನಸಭಾ ಚುನಾವಣೆಗಳು ಪ್ರತ್ಯೇಕ ನಡೆದರೆ ಚರ್ಚಿತ ಸಂಗತಿ-ಸಂಕಥನಗಳು ಭಿನ್ನವಾಗಿರುತ್ತವೆ. ವಿಧಾನಸಭಾ ಚುನಾವಣೆಗಳಲ್ಲಿ ಆಯಾ ಪ್ರದೇಶದ ಒಲವು, ನಿಲುವು, ಹಿತಾಸಕ್ತಿಗಳು ಚರ್ಚೆಯ ಮುನ್ನೆಲೆಯಲ್ಲಿರುತ್ತವೆ. ಹೀಗಾಗಿಯೇ ದೇಶದ ಅನೇಕ ರಾಜ್ಯಗಳಲ್ಲಿ ಬೇರೆ ಬೇರೆ ಪಕ್ಷಗಳು ಅಧಿಕಾರದಲ್ಲಿವೆ. ತಮ್ಮ ಹಿತಕ್ಕೆ ಪೂರಕವಾಗುವಂತಹ ಪಕ್ಷಗಳನ್ನು ಜನ ಆಯ್ಕೆ ಮಾಡಿಕೊಂಡಿದ್ದಾರೆ. ಇದರಿಂದ ದೇಶದಲ್ಲೆಡೆ ಆಡಳಿತದಲ್ಲಿ ಕೇಸರಿಯನ್ನು ಹಬ್ಬಿಸುವ ಆರ್ ಎಸ್ ಎಸ್ ಉದ್ದೇಶ ಈಡೇರಿಲ್ಲ. ಒಂದು ದೇಶ-ಒಂದು ಚುನಾವಣೆಯ ಮೂಲಕ ಈ 'ಪ್ರಾದೇಶಿಕ ರಾಜಕೀಯ ವೈವಿಧ್ಯವನ್ನು ನಾಶ ಪಡಿಸಿ, ಏಕ ಚಕ್ರಾಧಿಪತ್ಯ ಸ್ಥಾಪಿಸಲು ಬಿಜೆಪಿ ಹವಣಿಸುತ್ತಿದೆ ಎಂದು ಸಂಸದೆ ಡಾ.ಪ್ರಭಾ ಮಲ್ಲಿಕಾರ್ಜುನ್ ಆರೋಪಿಸಿದ್ದಾರೆ.

ಜನಸಂಖ್ಯೆ, ಪ್ರದೇಶ ವ್ಯಾಪ್ತಿ, ಮತ್ತಿತರೆ ಕಾರಣಗಳಿಂದ ಮುಂದಿನ ಕ್ಷೇತ್ರ ಪುನರ್ವಿಂಗಡಣೆ ಹೊತ್ತಿಗೆ ಹಿಂದಿ ಭಾಷಿಕ ಉತ್ತರ ಮತ್ತು ಮಧ್ಯ ಭಾರತದ ರಾಜ್ಯಗಳು ಸಂಸತ್ ಕ್ಷೇತ್ರಗಳನ್ನು ಹೆಚ್ಚಿಸಿಕೊಳ್ಳಲಿವೆ. ದಕ್ಷಿಣದ ರಾಜ್ಯಗಳು ರಾಜಕೀಯವಾಗಿ ವ್ಯತಿರಿಕ್ತ ಪ್ರತಿಕ್ರಿಯೆ ನೀಡಿದರೂ ಉತ್ತರದ 'ಶಕ್ತಿಯ ಮೇಲೆಯೇ ಅಧಿಕಾರದಲ್ಲಿ ಮುಂದುವರೆಯುವ ಲೆಕ್ಕಾಚಾರ ಬಿಜೆಪಿಯದು. ಹೀಗಾದರೆ, ಈಗಾಗಲೇ ಅನುದಾನ ತಾರತಮ್ಯಕ್ಕೆ ಈಡಾಗಿರುವ ದಕ್ಷಿಣ ರಾಜ್ಯಗಳು ಇನ್ನಷ್ಟು ತುಳಿತಕ್ಕೆ ಒಳಗಾಗಬೇಕಾಗುತ್ತದೆ ಎಂದು ಸಂಸದರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಯಾವುದೇ ರಾಜ್ಯ ತನ್ನದೇ ರಾಜಕೀಯ ಕಾರಣಕ್ಕೆ ವಿಧಾನಸಭೆಯನ್ನು ವಿಸರ್ಜಿಸಿದರೂ ಅಥವಾ ಉಪಚುನಾವಣೆಗಳು ನಡೆದರು ಮುಂದಿನ ಅವಧಿವರೆಗೆ ಚುನಾವಣೆಗಾಗಿ ಕಾಯಬೇಕಾಗುತ್ತದೆ. ಇದರಿಂದ ಒಕ್ಕೂಟ ವ್ಯವಸ್ಥೆಗೆ ಹೊಡೆತ ಬೀಳಲಿದೆ. ರಾಜ್ಯಗಳು ಚುನಾವಣಾ ಸಮಯ ನಿರ್ಧರಿಸುವಲ್ಲಿ ತಮಗಿರುವ ಸ್ವಾಯತ್ತತೆಯನ್ನು ಕಳೆದುಕೊಳ್ಳುತ್ತವೆ.

ಕೇಂದ್ರದಲ್ಲಿ ಮೂರು ಅವಧಿಯ ಅಧಿಕಾರ ನಡೆಸಿ ಎಲ್ಲಾ ರೀತಿಯ ಸಂಪನ್ಮೂಲ ಕ್ರೋಢೀಕರಿಸಿ ಸದೃಢಗೊಂಡಿರುವ ಬಿಜೆಪಿ, ಇದೀಗ ಹಣ ಬಲ- ಅಧಿಕಾರ ಬಲದ ಮೂಲಕ ಸಣ್ಣಪುಟ್ಟ ಪಕ್ಷಗಳನ್ನು ಹಣಿಯುವ ಕೆಲಸಕ್ಕೆ ಕೈ ಹಾಕಿದೆ. ಒಂದು ದೇಶ- ಒಂದು ಚುನಾವಣೆಗೆ 15 ಪಕ್ಷಗಳ ತೀವ್ರ ವಿರೋಧವಿದ್ದಾಗ್ಯೂ ಅವುಗಳ ಮನವಿಗೆ ಮನ್ನಣೆ ನೀಡದೆ ಅಭಿಪ್ರಾಯ ಹತ್ತಿಕ್ಕಿ, ಪ್ರಜಾಪ್ರಭುತ್ವ ವ್ಯವಸ್ಥೆ ಮೇಲೆ ಸವಾರಿ ಮಾಡಲು ಬಿಜೆಪಿ, ಆರ್.ಎಸ್.ಎಸ್ ಮುಂದಾಗಿರುವುದು ಖಂಡನೀಯ ಎಂದು ಸಂಸದರು ವಾಗ್ದಾಳಿ ನಡೆಸಿದರು.


# ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಹೊನ್ನಾಳಿ ತಾಲ್ಲೂಕು, ಹನುಮಸಾಗರ ಗ್ರಾಮ ಪಂಚಾಯಿತಿ

## 'ಗ್ರಾಮ ಕಾಯಕ ಮಿತ್ರ' ಹುದ್ದೆಗೆ ಅರ್ಜಿ ಆಹ್ವಾನ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಹೊನ್ನಾಳಿ ತಾಲ್ಲೂಕಿನ ಹನುಮಸಾಗರ ಗ್ರಾಮ ಪಂಚಾಯಿತಿಯಲ್ಲಿ ಖಾಲಿ ಇರುವ 'ಗ್ರಾಮ ಕಾಯಕ ಮಿತ್ರ' ಒಂದು ಹುದ್ದೆಗೆ ಗೌರವ ಧನ ಪಾವತಿ ಆಧಾರದ ಮೇಲೆ ಮಹಿಳೆಯರಿಗೆ ಮಾತ್ರ ನೇಮಕಾತಿ ಮಾಡಿಕೊಳ್ಳಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ಹನುಮಸಾಗರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮಹಿಳಾ ಅಭ್ಯರ್ಥಿಗಳು ತಮ್ಮ ಗ್ರಾಮ ಪಂಚಾಯಿತಿಯಲ್ಲಿ ಅರ್ಜಿಯನ್ನು ಪಡೆದು, ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸುವುದು. ಅರ್ಜಿಯನ್ನು ದಿನಾಂಕ : 23.12.2024 ರಿಂದ ಪಡೆಯಬಹುದಾಗಿದ್ದು, ಅರ್ಜಿಯನ್ನು ದಿನಾಂಕ : 08.01.2025ರ ಸಂಜೆ 5.00 ಗಂಟೆಯೊಳಗೆ ಸಲ್ಲಿಸತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ ಗ್ರಾಮ ಪಂಚಾಯಿತಿ/ತಾಲ್ಲೂಕು ಪಂಚಾಯಿತಿಯನ್ನು ಸಂಪರ್ಕಿಸಬಹುದಾಗಿದೆ.

**ಅರ್ಹತೆಗಳು : 1. ಗ್ರಾಮ ಪಂಚಾಯಿತಿ ಸ್ಥಳೀಯ ಮಹಿಳೆಯರು ಮಾತ್ರ ಅರ್ಜಿಯನ್ನು ಸಲ್ಲಿಸತಕ್ಕದ್ದು.**
2. ವಿದ್ಯಾರ್ಹತೆ ಕನಿಷ್ಠ 10ನೇ ತರಗತಿ ಉತ್ತೀರ್ಣರಾಗಿರಬೇಕು ಹಾಗೂ ಓದು ಮತ್ತು ಬರಹ ಚೆನ್ನಾಗಿ ತಿಳಿದಿರಬೇಕು.
3. ದಿನಾಂಕ : 01.01.2024ಕ್ಕೆ ಅನ್ವಯಿಸುವಂತೆ ನರೇಗಾ ಯೋಜನೆಯಡಿ ಕ್ರಿಯಾಶೀಲ ಉದ್ಯೋಗ ಚೀಟಿ ಹೊಂದಿರಬೇಕು.
4. ಅಭ್ಯರ್ಥಿಯು ಕಳೆದ ಮೂರು ವರ್ಷಗಳಲ್ಲಿ 2021-22, 2022-23, 2023-24 ಕನಿಷ್ಠ ಎರಡು ವರ್ಷ ಅಕುಶಲ ಕೂಲಿಕಾರ್ಮಿಕರಾಗಿ ಕೆಲಸ ನಿರ್ವಹಿಸಿರಬೇಕು.
5. ಗ್ರಾಮ ಕಾಯಕ ಮಿತ್ರ ಹುದ್ದೆಗೆ ಅರ್ಜಿ ಸಲ್ಲಿಸುವಾಗ ಆಯಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ವಾಸಿಸುವ ಮಹಿಳಾ ಅಭ್ಯರ್ಥಿ ಮಾತ್ರ ಅರ್ಜಿ ಸಲ್ಲಿಸತಕ್ಕದ್ದು.
6. ದಿನಾಂಕ : 01.01.2024ಕ್ಕೆ ಅನ್ವಯಿಸುವಂತೆ ವಯೋಮಿತಿ 45 ವರ್ಷ ಮೀರಿರಬಾರದು.
7. ಅಭ್ಯರ್ಥಿಯು ಪರಿಣಾಮಕಾರಿ ಸಂವಹನ ಕೌಶಲ್ಯ, ಉತ್ತಮ ನಾಯಕತ್ವ ಗುಣ ಹಾಗೂ ಸಮುದಾಯದೊಂದಿಗೆ ಸ್ಪಂದಿಸುವ ಗುಣ ಲಕ್ಷಣಗಳನ್ನು ಹೊಂದಿರಬೇಕು.
8. ಗ್ರಾಮ ಕಾಯಕ ಮಿತ್ರರು ಸಮುದಾಯ ನಿರ್ವಹಣೆ ಮಾಡಲು ನಿರ್ದಿಷ್ಟ ಸಮಯವನ್ನು ನೀಡಬೇಕಾಗಿದ್ದು, ಇದಕ್ಕೆ ಅವರ ಕುಟುಂಬ ಮತ್ತು ಸಮಾಜ ಬೆಂಬಲವಾಗಿರಬೇಕು.

**ಕಾರ್ಯನಿರ್ವಾಹಕ ಅಧಿಕಾರಿ**
**ತಾಲ್ಲೂಕು ಪಂಚಾಯತ್ ಹೊನ್ನಾಳಿ**

## ನಗರ ಸ್ವಚ್ಛತೆಗೆ ಆದ್ಯತೆ



ದಾವಣಗೆರೆ, ಡಿ.21- ದೂಳು ಮುಕ್ತ ನಗರ ಮಾಡಲು ಹಾಗೂ ನಗರದ ಸಮಗ್ರ ಸ್ವಚ್ಛತೆಗೆ ಮಹಾನಗರ ಪಾಲಿಕೆ ಹೆಚ್ಚಿನ ಗಮನ ಹರಿಸುತ್ತಿದೆ ಎಂದು ಪಾಲಿಕೆ ಮೇಯರ್ ಕೆ. ಚಮನ್ ಸಾಬ್ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದಲ್ಲಿ ವಾಹನ ದಟ್ಟನೆಯಿಂದ ಹೆಚ್ಚಾದ ದೂಳಿನ ಸಮಸ್ಯೆಯನ್ನು ಮುಕ್ತಗೊಳಿಸಲು ಪಿ.ಬಿ. ರಸ್ತೆ ಸೇರಿದಂತೆ ನಗರದ ಪ್ರಮುಖ ದೊಡ್ಡ ಸಿ.ಸಿ ರಸ್ತೆಯನ್ನು ಕಸ-ಗುಡಿಸುವ ವಾಹನದ ಮೂಲಕ ಸ್ವಚ್ಛ ಗೊಳಿಸಲಾಗುತ್ತಿದೆ. ನಗರದಲ್ಲಿನ ಖಾಲಿ ನಿವೇಶನಗಳಲ್ಲಿ ಕಸ ಇರುವ ಬಗ್ಗೆ ಹೆಚ್ಚಿನ ದೂರುಗಳು ಬಂದಿವೆ. ಅದನ್ನು ಸರಿಪಡಿಸಲಿದ್ದೇವೆ ಎಂದರು.

## ನೀರು ಬಳಕೆಯ ಬಿಲ್ಲನ್ನು ಸೇವಾ ಕೇಂದ್ರದಲ್ಲಿ ಪಾವತಿಸಬೇಕು



ದಾವಣಗೆರೆ, ಡಿ.21- ಕೆಯುಐಡಿಎಫ್‌ಸಿ ವತಿಯಿಂದ ನಗರದಲ್ಲಿ ಜಲಸಿರಿ ಯೋಜನೆಯನ್ನು ಕೈಗೊಳ್ಳಲಾಗಿದ್ದು, ಅದರಂತೆ ನೀರಿನ ಬಳಕೆಯ ಅನುಸಾರ ಬಿಲ್ಲನ್ನು ನೀಡಲಾಗುತ್ತಿದೆ. ಬಿಲ್ ಮೊತ್ತವನ್ನು ಸೇವಾ ಕೇಂದ್ರಗಳಲ್ಲಿ ಹಾಗೂ ಆನ್‌ಲೈನ್ ಮೂಲಕ ಪಾವತಿಸಬಹುದಾಗಿದೆ. ಈಗಾಗಲೇ ಬಿಲ್ಲಿನಲ್ಲಿ ನಮೂದಿಸಿರುವ ನೀರಿನ ಶುಲ್ಕವನ್ನು ಮಹಾನಗರ ಪಾಲಿಕೆಯ ಆವರಣದಲ್ಲಿರುವ ಗ್ರಾಹಕರ ಸೇವಾ ಕೇಂದ್ರದಲ್ಲಿ ಅಥವಾ ನಿಟ್ಟುವಳ್ಳಿ ಉದ್ಯಾನವನದಲ್ಲಿರುವ ಗ್ರಾಹಕರ ಸೇವಾ ಕೇಂದ್ರದಲ್ಲಿ ನಗದು ರೂಪದಲ್ಲಿ ಪಾವತಿಸಬಹುದು.

ಆನ್‌ಲೈನ್ ಮುಖಾಂತರ ಕೂಡ ಪಾವತಿಸಲು ಅವಕಾಶವಿದ್ದು, ಜಲಸಿರಿ ಅಪ್ಲಿಕೇಷನ್ (JALASIRI APP) ಅಥವಾ www.davan-gere water.co.in ಜಾಲತಾಣದ ಮುಖಾಂತರವೂ ಪಾವತಿಸಬಹುದು, 24x7 ನೀರು ಸರಬರಾಜಿಗೆ ಸಂಬಂಧಿಸಿದಂತೆ ಯಾವುದೇ ತೊಂದರೆಗಳಿದ್ದಲ್ಲಿ ಗ್ರಾಹಕರ ಸೇವಾ ಕೇಂದ್ರದ ಸಂಖ್ಯೆ 9036544419 ಅನ್ನು ಸಂಪರ್ಕಿಸಲು ಪಾಲಿಕೆ ಆಯುಕ್ತರಾದ ರೇಣುಕಾ ತಿಳಿಸಿದ್ದಾರೆ.












## ಹೃದಯಪೂರ್ವಕ ಅಭಿನಂದನೆಗಳು

**ಸುಂದರವಾದ ಕಟ್ಟಡ ನಿರ್ಮಾಣಕ್ಕೆ**
ಇಂಡಿಯನ್ ಕಾಂಕ್ರೀಟ್ ಇನ್‌ಸ್ಟಿಟ್ಯೂಟ್ ಸಂಸ್ಥೆಯು ಇಂಜಿನಿಯರ್‌ಗೆ ಪ್ರತಿ ವರ್ಷ ಕೊಡಮಾಡುವ
**ಐಸಿಐ - ಅಲ್ಟ್ರಾಟೆಕ್ ಅವಾರ್ಡ್ಸ್ - 2024ಕ್ಕೆ**
ದಾವಣಗೆರೆಯ ಹೆಸರಾಂತ ಸಿವಿಲ್ ಇಂಜಿನಿಯರ್ ಆಗಿರುವ
**ಎ.ಬಿ. ರವಿ** ಪವನ್ ಕನ್‌ಸ್ಟ್ರಕ್ಷನ್ಸ್
ಅವರು ಭಾಜನರಾಗಿರುತ್ತಾರೆ. ದಾವಣಗೆರೆ ಜಿಲ್ಲೆಯಿಂದ ಆಯ್ಕೆಯಾದ ಶ್ರೀಯುತ ಗಿರೀಶ್‌ಬಾಬು ಬಿ.ವಿ. ರವರ **ಸ್ಕಂದಗಿರಿ** ಗೃಹವನ್ನು ಅತ್ಯುತ್ತಮವಾಗಿ ನಿರ್ಮಿಸಿರುವ ಇಂಜಿನಿಯರ್ ಎ.ಬಿ. ರವಿ ಅವರಿಗೆ ಕಳೆದ ವಾರ ದಾವಣಗೆರೆಯಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿಯನ್ನು ನೀಡಿ ಗೌರವಿಸಿರುತ್ತಾರೆ.
**ಶ್ರೀಯುತರಿಗೆ ಹೃದಯಪೂರ್ವಕ ಅಭಿನಂದನೆಗಳು.**


ಸ್ಟ್ರಕ್ಚರಲ್ ಕನ್ಸಲ್ಟೆಂಟ್ : ಡಾ. ಅರುಣ್‌ಕುಮಾರ್ ಜಿ.ಎಸ್. ಕಛೇರಿ ಸಿಬ್ಬಂದಿ : ಇಂಜಿನಿಯರ್ ಮನೋಜ್ ಎನ್.


- ಎ.ವಿ. ಪೃಥ್ವಿ, ವಿಜಯ ಕಂಟ್ರ್ಯಾಕ್ಟರ್, ಕೆಡಿಎಂ. ಫೈಬರ್ಸ್, ಕ್ರ್ಯಾಕ್ ಫ್ರೀ ಪ್ಲಾಸ್ಟರ್/ ಕಾಂಕ್ರೀಟ್ ಅಂಡ್ ಕಾನ್‌ಮೆಷ್ ಸಪ್ಲೈಯರ್ಸ್, ದಾವಣಗೆರೆ.
- ಎ. ಕಾಳಪ್ಪ, ಶಿವ ಪ್ರೀ - ಪ್ಯಾಬ್, ಸ್ಟೋನ್‌ಕ್ರೀಟ್ ಬ್ಲಾಕ್ಸ್ ತಯಾರಕರು & ಸಪ್ಲೈಯರ್ಸ್, ದಾವಣಗೆರೆ.
- ಶ್ರೀ ಸಿಮೆಂಟ್ ಲಿಮಿಟೆಡ್, ದಾವಣಗೆರೆ ಗ್ರೂಪ್ಸ್.
- ಶ್ರೀ ಸ್ಟೀಲ್ಸ್ ಅಂಡ್ ಸಿಮೆಂಟ್ ಕಾರ್ಪೋರೇಷನ್, ಕಾಳಿದಾಸ ಸರ್ಕಲ್, ಜಯನಗರ, ದಾವಣಗೆರೆ.
- ವರುಣ್, ಧರಣಿ ಸ್ಟೋನ್ ಕಟಿಂಗ್ ಯುನಿಟ್, ದಾವಣಗೆರೆ.
- ಪ್ರಕಾಶ್, ತಿಮ್ಮಣ್ಣ ಸ್ಟೋನ್ ಕ್ರಷರ್ ಅಂಡ್ ಜಿ.ಎಂ. ಇಂಟರ್ ಲಾಕಿಂಗ್ ಬ್ರಿಕ್ಸ್ ಸಪ್ಲೈಯರ್ಸ್, ದಾವಣಗೆರೆ.
- ಕೊಟ್ರೇಶ್, ಶ್ರೀ ಲಿಂಗೇಶ್ವರ ಎಲೆಕ್ಟ್ರಿಕಲ್ಸ್, ಎಂ.ಜಿ. ರೋಡ್, ದಾವಣಗೆರೆ.
- ಶ್ರಮಿಕ ಪೇಂಟ್ ಅಂಡ್ ಹಾರ್ಡ್‌ವೇರ್ಸ್, ಹೋಲ್‌ಸೇಲ್ ಡೀಲರ್ಸ್, ಶಾಮನೂರು ರಸ್ತೆ, ದಾವಣಗೆರೆ.
- ಶ್ರೀ ಚಾಮುಂಡಿ ಟೈಲ್ಸ್, ಹದಡಿ ರಸ್ತೆ, ದಾವಣಗೆರೆ.
- ಮಂಜುನಾಥ್, ಎಸ್.ಎಸ್. ಎಂಟರ್‌ಪ್ರೈಸಸ್, ವಾಟರ್ ಸಪ್ಲೈ ಅಂಡ್ ಸ್ಯಾನಿಟರಿ ಐಟಮ್ಸ್ ಸಪ್ಲೈಯರ್ಸ್, ಪಿ.ಬಿ. ರಸ್ತೆ, ದಾವಣಗೆರೆ.
- ಎನ್.ಎಸ್. ಜಯದೇವ ಪ್ಲೈವುಡ್ಸ್ ಅಂಡ್ ಹಾರ್ಡ್‌ವೇರ್ಸ್, ಸಪ್ಲೈಯರ್ಸ್, ಶ್ರೀ ನಿಜಲಿಂಗಪ್ಪ ಲೇ-ಔಟ್, ದಾವಣಗೆರೆ.
- ಕೃಷ್ಣ ಹಾರ್ಡ್‌ವೇರ್ ಅಂಡ್ ಪ್ಲೈವುಡ್ಸ್, ಹದಡಿ ರಸ್ತೆ, ದಾವಣಗೆರೆ.
- ಕೆ. ಸೋಹನ್‌ರಾಜ್ಸ್ ರಸೋಯಿ, ಪಿ.ಜೆ. ಎಕ್ಸ್‌ಟೆನ್ಷನ್, 2ನೇ ಮೇನ್, ದಾವಣಗೆರೆ.
- ಶ್ರೀ ಸಾಯಿ ಗ್ಲಾಸ್ ಎಂಪೋರಿಯಂ, ಪಿ.ಜೆ. ಎಕ್ಸ್‌ಟೆನ್ಷನ್, 2ನೇ ಮೇನ್, ದಾವಣಗೆರೆ.
- ಶ್ರೇಯಸ್ ಎಂಟರ್‌ಪ್ರೈಸಸ್, ಶಾಂತಿ ಪಾರ್ಕ್ ಹತ್ತಿರ, ಅಶೋಕ ರಸ್ತೆ, ದಾವಣಗೆರೆ.
- ರೇಣುಕಾ ಪೈಪ್ಸ್ ಅಂಡ್ ಸ್ಯಾನಿಟರಿ ಸಪ್ಲೈಯರ್ಸ್, ಹದಡಿ ರಸ್ತೆ, ದಾವಣಗೆರೆ.

**ಪವನ್ ಕನ್‌ಸ್ಟ್ರಕ್ಷನ್ಸ್, ದಾವಣಗೆರೆ.**
ಎಸ್. ನಿಜಲಿಂಗಪ್ಪ ಬಡಾವಣೆ, ಗುರು ಬಕ್ಕೇಶ್ವರ ಕಲ್ಯಾಣ ಮಂಟಪದ ಎದುರು, ದಾವಣಗೆರೆ - 04 ಫೋ : 94499 71049


## ಬಳಸಿದ ಇ.ವಿ. ಕಾರುಗಳ ಮಾರಾಟಕ್ಕೆ ಶೇ. 18ರ ಜಿಎಸ್‌ಟಿ

ಜೈಸಲ್ಮಾರ್, ಡಿ.21 - ಉದ್ಯಮಗಳು ಬಳಸಿದ ಇ.ವಿ. ಕಾರುಗಳ ಮಾರಾಟದ ಮೇಲೆ ಶೇಕಡ 18ರ ಜಿಎಸ್‌ಟಿ ತೆರಿಗೆ ವಿಧಿಸಲು ಜಿ.ಎಸ್.ಟಿ. ಮಂಡಳಿ ನಿರ್ಧರಿಸಿದೆ. ಆದರೆ, ವ್ಯಕ್ತಿಗಳು ಮಾರುವ ಇ.ವಿ. ವಾಹನಗಳಿಗೆ ತೆರಿಗೆ ಇರುವುದಿಲ್ಲ. ವೈಮಾನಿಕ ಇಂಧನವಾದ ಎ.ಟಿ.ಎಫ್. ಅನ್ನು ಒಂದು ದೇಶ ಒಂದು ತೆರಿಗೆ ವ್ಯಾಪ್ತಿಯಿಂದ ಹೊರಗಿಡಲು ನಿರ್ಧರಿಸಲಾಗಿದೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲ ಸೀತಾರಾಮನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಮಂಡಳಿಯಲ್ಲಿ ಎಲ್ಲಾ ರಾಜ್ಯಗಳ ಸಚಿವರು ಸದಸ್ಯರಾಗಿದ್ದಾರೆ.







## ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆ 2024

**ಶಿವ ಸಹಕಾರಿ ಬ್ಯಾಂಕ್ ನಿ.,** ಹಳೇ ಆಸ್ಪತ್ರೆ ರಸ್ತೆ, ದಾವಣಗೆರೆ

**ಹಿಂದುಳಿದ ವರ್ಗ 'ಬಿ' ಮೀಸಲು ಕ್ಷೇತ್ರ**



**ನಲ್ಮೆಯ ನಮ್ಮ-ನಿಮ್ಮೆಲ್ಲರ ಬ್ಯಾಂಕಿನ ಸದಸ್ಯ ಬಂಧುಗಳೇ**

ದಿನಾಂಕ 22.12.2024ರ ಭಾನುವಾರದಂದು ನಡೆಯಲಿರುವ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಯಲ್ಲಿ ನಿರ್ದೇಶಕರ ಸ್ಥಾನದ ಆಕಾಂಕ್ಷಿಯಾದ ನಾನು ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗಾಗಿ ಬ್ಯಾಂಕಿನ ಸರ್ವಸದಸ್ಯರ ಹಿತ ರಕ್ಷಣೆಗಾಗಿ ಮತ್ತು ದುರಾಡಳಿತವನ್ನು ತಡೆಗಟ್ಟಲು ಹಾಗೂ ಬ್ಯಾಂಕನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಪಣತೊಟ್ಟಿದ್ದು, ತಾವು ತಮ್ಮ ಅಮೂಲ್ಯವಾದ ಮತವನ್ನು ಕ್ರಮ ಸಂಖ್ಯೆ - 1 ಬಿ.ಎ. ಮುರುಗೇಶ್ (ಕುಂದೂರು ರಾಜಣ್ಣ) ಇವರ ವಿಮಾನದ ಗುರುತಿಗೆ ಮತ ಚಲಾಯಿಸಿ, ನನ್ನನ್ನು ಜಯಶೀಲರನ್ನಾಗಿ ಮಾಡಿ ತಮ್ಮ ಸೇವೆಗೆ ಅವಕಾಶ ಮಾಡಿಕೊಡಬೇಕಾಗಿ ತಮ್ಮಲ್ಲಿ ವಿನಂತಿ.

ತಮ್ಮ ಸೇವಾಕಾಂಕ್ಷಿ
ಕುಂದೂರು ರಾಜಣ್ಣ, ಮೊ. 98451 90339

**ಬ್ಯಾಲೆಟ್ ನಮೂನೆ**

| ಕ್ರ.ಸಂ. | ಅಭ್ಯರ್ಥಿಯ ಹೆಸರು | ಚಿಹ್ನೆ | ಗುರುತು |
|---|---|---|---|
| 1 2 | ಬಿ.ಎ.ಮುರುಗೇಶ್ (ಕುಂದೂರು ರಾಜಣ್ಣ) | | |

ಮತದಾನ ದಿನಾಂಕ : 22.12.2024 ಭಾನುವಾರ
ಸಮಯ : ಬೆಳಿಗ್ಗೆ 9.00 ರಿಂದ ಸಂಜೆ 4.00ರವರೆಗೆ
ಸ್ಥಳ : ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಹಿರಿಯ ಪ್ರಾಥಮಿಕ ಶಾಲೆ, ತರಳಬಾಳು ಬಡಾವಣೆ, ದಾವಣಗೆರೆ.

ಸೂಚನೆ : ಮೇಲ್ಕಂಡವರಲ್ಲಿ ಇಚ್ಛಿಸಿದ ಒಬ್ಬರಿಗೆ ಮಾತ್ರ ಹೆಸರಿನ ಮುಂದೆ ಗುರುತನ್ನು ಮಾಡಿ ಮತ ಚಲಾಯಿಸುವುದು.



**ಬಿ.ಎ. ಮುರುಗೇಶ್ (ಕುಂದೂರು ರಾಜಣ್ಣ)**

ನಿಮ್ಮ ಮತ ವಿಮಾನದ ಗುರುತಿಗೆ

ದಯವಿಟ್ಟು ಮತದಾನದಲ್ಲಿ ಪಾಲ್ಗೊಳ್ಳಿ


## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಜನನ : 23.06.1979 ನಿಧನ : 14.12.2024

ಹರಿಹರ ತಾಲ್ಲೂಕು ಯಲವಟ್ಟಿ ಗ್ರಾಮದ ವಾಸಿ
**ಶ್ರೀಮತಿ ಗುರುಬಸಮ್ಮ ಕೋಂ. ದಿ|| ಕಾಳೋಳ ಸಿದ್ದರಾಮಪ್ಪ ಶಿಕ್ಷಕರು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 14.12.2024ನೇ ಶನಿವಾರ ಬೆಳಿಗ್ಗೆ 10.30ಕ್ಕೆ ನನ್ನ ಮಗನಾದ

### ಶ್ರೀ ಕೆ.ಎಸ್. ವೇದಮೂರ್ತಿ

(ದ್ವಿತೀಯ ದರ್ಜೆ ಸಹಾಯಕರು, ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ, ದಾವಣಗೆರೆ ಉತ್ತರ ವಲಯ)

ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ **'ಕೈಲಾಸ ಶಿವಗಣಾರಾಧನೆ'ಯನ್ನು**
ದಿನಾಂಕ : 22.12.2024ನೇ ಭಾನುವಾರ ಬೆಳಿಗ್ಗೆ 10.30ಕ್ಕೆ ಹರಿಹರ ತಾಲ್ಲೂಕು ಯಲವಟ್ಟಿ ಗ್ರಾಮದಲ್ಲಿರುವ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ನಾಗಮ್ಮ ಕೋಂ. ದಿ|| ಕಾಳೋಳ ಹನುಮಂತಪ್ಪ ಮತ್ತು ಮಕ್ಕಳು, ಯಲವಟ್ಟಿ
ಮೃತರ ಧರ್ಮಪತ್ನಿ ಶ್ರೀಮತಿ ಮಮತ (ಕಾವ್ಯ) ಮತ್ತು ಮಕ್ಕಳು
ಶ್ರೀಮತಿ ಶಾಂತಮ್ಮ ಶ್ರೀ ಹನಗವಾಡಿ ನಾರಪ್ಪ ಮತ್ತು ಸಹೋದರರು ಹಾಗೂ ಮಕ್ಕಳು, ಹನಗವಾಡಿ ವಂಶಸ್ಥರು ಎಲೆಬೇತೂರು.
ಶ್ರೀಮತಿ ಆಶಾ ಶ್ರೀ ಶಿವಣ್ಣ ಮತ್ತು ಮಕ್ಕಳು, ದಿಬ್ಬದಹಳ್ಳಿ.
ಶ್ರೀಮತಿ ಮಮತ ಶ್ರೀ ಶ್ರೀಧರ ಮತ್ತು ಮಕ್ಕಳು, ದಾವಣಗೆರೆ
ಶ್ರೀಮತಿ ನೇತ್ರಾವತಿ ಕೋಂ. ದಿ|| ಶ್ರೀ ಕೆ.ಹೆಚ್. ಮಧು ಮತ್ತು ಮಕ್ಕಳು, ಯಲವಟ್ಟಿ.
ಶ್ರೀ ಕೆ. ಚನ್ನಬಸಪ್ಪ ಮತ್ತು ಸಹೋದರರು ಹಾಗೂ ಮಕ್ಕಳು, ಯಲವಟ್ಟಿ
ಕಾಳೋಳ ವಂಶಸ್ಥರು, ಬಂಧು-ಮಿತ್ರರು, ಯಲವಟ್ಟಿ

ವಿ.ಸೂ. : ಆತ್ಮೀಯರೇ, ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ, ಆಗಮಿಸಬೇಕಾಗಿ ವಿನಂತಿ.

|| ಶ್ರೀ ಗುರುತಿಪ್ಪೇರುದ್ರ ಸ್ವಾಮಿ ಪ್ರಸನ್ನ ||

## ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ಜಿ|| ಮತ್ತು ತಾ|| ಕೆರೆಯಾಗಳಹಳ್ಳಿ ಗ್ರಾಮದ ಹಾಗೂ ದಾವಣಗೆರೆ ಸಿಟಿ
ತರಳಬಾಳು ಬಡಾವಣೆ ವಾಸಿ
**ಶ್ರೀ ಶಿವಮೂರ್ತಿ ಕೆ.ಎನ್.**
(ಸ.ಕಾ.ಇಂ. ಪಂ.ರಾ.ಇಂ. ಉಪ-ವಿಭಾಗ) ದಾವಣಗೆರೆ.
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 10.12.2024ನೇ ಮಂಗಳವಾರ ರಾತ್ರಿ 10.02ಕ್ಕೆ ನನ್ನ ಪೂಜ್ಯ ತಂದೆಯವರಾದ

### ಶ್ರೀ ಎ.ಕೆ. ಹಾಲಪ್ಪನವರು

(ಜನನ 04.06.1941 - ಮರಣ : 10.12.2024)
ನಿವೃತ್ತ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಇ.ಬಿ., ದಾವಣಗೆರೆ, ಇವರು
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**"ಕೈಲಾಸ ಶಿವಗಣಾರಾಧನೆ"ಯನ್ನು**
ದಿನಾಂಕ : 22.12.2024ನೇ ಭಾನುವಾರ ಮಧ್ಯಾಹ್ನ 12.00ಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಮುದಾಯ ಭವನ ಕನ್ವೆನ್ಷನ್ ಹಾಲ್, ನಿಜಲಿಂಗಪ್ಪ ಬಡಾವಣೆ, ರಿಂಗ್ ರಸ್ತೆ ಸರ್ಕಲ್, ದಾವಣಗೆರೆ. ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :

ಮಗ-ಸೊಸೆ : ಶ್ರೀಮತಿ ಗೌರಮ್ಮ, ಶ್ರೀ ಶಿವಮೂರ್ತಿ ಕೆ.ಎನ್. ಮತ್ತು ಸಹೋದರಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು, ಉಚ್ಚಂಗೆಪ್ಪರ ವಂಶಸ್ಥರು, ಕೆರೆಯಾಗಳಹಳ್ಳಿ. ಕೆಂಚನಹಳ್ಳಿ ವಂಶಸ್ಥರು, ದ್ಯಾಮವ್ವನಹಳ್ಳಿ ಹಾಗೂ ಬಂಧು-ಮಿತ್ರರು. ಮೊ. : 94498 09621, 63605 48640

ವಿ.ಸೂ. : ಆತ್ಮೀಯರೇ ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas